| ಬಿಬಿಎಂಪಿ ಬೀದಿ ದೀಪಗಳು | ಕಾಡುಗೋಡಿ, ಹಗದೂರು ವಾರ್ಡ್ ನಂ. 83, 84 ರಲ್ಲಿ ಕತ್ತಲೆ ಪ್ರದೇಶಗಳಿಗೆ ಬೀದಿ ದೀಪ ಪೂರೈಕೆ ಮತ್ತು ಬಿಟ್ಟುಹೋಗಿದ್ದ ಬೀದಿ ದೀಪಗಳ ಅಳವಡಿಕೆ | 122.00 |
| ಬಿಬಿಎಂಪಿ ಬೀದಿ ದೀಪಗಳು | ಮಾರತ್ ಹಳ್ಳಿ, ಬೆಳ್ಳಂದೂರು ವಾರ್ಡ್ ನಂ. 86, 150 ರಲ್ಲಿ ಕತ್ತಲೆ ಪ್ರದೇಶಗಳಿಗೆ ಬೀದಿ ದೀಪ ಪೂರೈಕೆ ಮತ್ತು ಬಿಟ್ಟುಹೋಗಿದ್ದ ಬೀದಿ ದೀಪಗಳ ಅಳವಡಿಕೆ | 109.50 |
| ಬಿಬಿಎಂಪಿ ಬೀದಿ ದೀಪಗಳು | ಗರುಡಾಚಾರ್ ಪಾಳ್ಯ ವಾರ್ಡ್ ನಂ. 82, ದೊಡ್ಡಾನೆಕ್ಕುಂದಿ ವಾರ್ಡ್ ನಂ. 85 ಮತ್ತು ಮಾರತ್ತಹಳ್ಳಿ ವಾರ್ಡ್ ನಂ. 86 ರಲ್ಲಿ ಖಾಲಿ LT ವಿದ್ಯುತ್ ಕಂಬಗಳಿಗೆ ವಿದ್ಯುತ್ ತಂತಿ, ಟೈಮರ್ ಗಳು, ಬೀದಿ ದೀಪಗಳು ಮತ್ತು ಉಳಿದ ಸಾಧನಗಳನ್ನು ಪೂರೈಸುವುದು | 99.00 |
| ಬಿಬಿಎಂಪಿ ವಲಯ | ವಾರ್ಡ್ ನಂ.82 ರ ಗರುಡಾಚಾರ್ ಪಾಳ್ಯ, ವಾರ್ಡ್ ನಂ.85 ರ ದೊಡ್ಡನೆಕ್ಕುಂದಿ ಮತ್ತು ವಾರ್ಡ್ ನಂ. 86ರ ಮಾರತ್ತಹಳ್ಳಿಯಲ್ಲಿ ಖಾಲಿ ಇರುವ ಎಲ್.ಟಿ. ವಿದ್ಯುತ್ ಕಂಬಗಳಿಗೆ ಬೀದಿ ದೀಪ, ಕೇಬಲ್ ಟೈಮರ್ಸ್ ಮತ್ತು ಅಗತ್ಯ ಉಪಕರಣಗಳನ್ನು ಅಳವಡಿಸುವುದು | 99.00 |
| ಬಿಬಿಎಂಪಿ ವಲಯ | ವಾರ್ಡ್ ನಂ. 82 ರ ಗರುಡಾಚಾರ್ ಪಾಳ್ಯ; ವಾರ್ಡ್ ನಂ. 85 ರ ದೊಡ್ಡನೆಕ್ಕುಂದಿ ಮತ್ತು ವಾರ್ಡ್ ನಂ. 86 ರ, ಮಾರತ್ತಹಳ್ಳಿಯಲ್ಲಿ ಬೀದಿ ದೀಪ ಒದಗಿಸದ ರಸ್ತೆ ಭಾಗಗಳಿಗೆ ಮತ್ತು ಕೈಬಿಟ್ಟು ಹೋದ ಹಾಗೂ ಭಾಗಷ: ಒದಗಿಸಿದ ರಸ್ತೆಗಳಿಗೆ ಬೀದಿ ದೀಪದ ವ್ಯವಸ್ಥೆ ಕಲ್ಪಿಸುವುದು. | 64.00 |
| ಬಿಬಿಎಂಪಿ ಬೀದಿ ದೀಪಗಳು | ಗರುಡಾಚಾರ್ ಪಾಳ್ಯ ವಾರ್ಡ್ ನಂ. 82, ದೊಡ್ಡಾನೆಕ್ಕುಂದಿ ವಾರ್ಡ್ ನಂ.85, ಮಾರತ್ತಹಳ್ಳಿ ವಾರ್ಡ್ ನಂ. 86 ರಲ್ಲಿ ರಲ್ಲಿ ತಪ್ಪಿ ಉಳಿದಿದ್ದ , ಭಾಗಶಃ ಸರ್ವಿಸ್ ಮಾಡಲಾದ ಮತ್ತು ಸರ್ವಿಸ್ ಮಾಡಲಾಗಿಲ್ಲದ ರಸ್ತೆಗಳಿಗೆ ಬೀದಿ ದೀಪದ ವ್ಯವಸ್ಥೆಯನ್ನು ಕಲ್ಪಿಸುವುದು | 64.00 |
| ಬಿಬಿಎಂಪಿ ವಲಯ | ವಾರ್ಡ್ ನಂ. 83 ರ, ಕಾಡುಗೋಡಿನಲ್ಲಿ ಹಗದೂರು ಕತ್ತಲು ಪ್ರದೇಶಗಳಲ್ಲಿ ಹಾಗೂ ಅಳವಡಿಕೆ ಕೈಬಿಟ್ಟು ಹೋದ ಕಡೆ ಬೀದಿ ದೀಪಗಳನ್ನು ಅಳವಡಿಸುವುದು | 61.00 |
| ಬಿಬಿಎಂಪಿ ವಲಯ | ವಾರ್ಡ್ ನಂ.84 ರ, ಹಗದೂರು ಕಾಡುಗೋಡಿ ಕತ್ತಲು ಪ್ರದೇಶಗಳಲ್ಲಿ ಹಾಗೂ ಅಳವಡಿಕೆ ಕೈಬಿಟ್ಟು ಹೋದ ಕಡೆ ಬೀದಿ ದೀಪಗಳನ್ನು ಒದಗಿಸಿ ಅಳವಡಿಸುವುದು | 61.00 |
| ಬಿಬಿಎಂಪಿ ವಲಯ | ವಾರ್ಡ್ ನಂ.54 ರ, ಹೂಡಿ, ದೊಡ್ಡನೇಕುಂಡಿ, ಗರುಡಾಚಾರ್ ಪಾಳ್ಯದ ಕತ್ತಲು ಪ್ರದೇಶಗಳಿಗೆ ಮತ್ತು ಬೀದಿ ದೀಪಗಳ ಅಳವಡಿಕೆ ಕೈಬಿಟ್ಟು ಹೋದ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು | 58.00 |
| ಬಿಬಿಎಂಪಿ ವಲಯ | ವಾರ್ಡ್ ನಂ. 85 ರ, ದೊಡ್ಡನೆಕ್ಕುಂದಿ, ಹೂಡಿ, ಗರುಡಾಚಾರ್ ಪಾಳ್ಯಗಳ ಕತ್ತಲು ಪ್ರದೇಶಗಳಲ್ಲಿ ಹಾಗೂ ಅಳವಡಿಕೆ ಕೈಬಿಟ್ಟು ಹೋದ ಕಡೆ ಬೀದಿ ದೀಪಗಳನ್ನು ಅಳವಡಿಸುವುದು | 58.00 |
| ಬಿಬಿಎಂಪಿ ವಲಯ | ವಾರ್ಡ್ ನಂ.86 ರ ಮಾರತ್ತಹಳ್ಳಿ ಬೆಳ್ಳಂದೂರು ಕತ್ತಲು ಪ್ರದೇಶಗಳಿಗೆ ಮತ್ತು ಬೀದಿ ದೀಪಗಳ ಅಳವಡಿಕೆ ಕೈಬಿಟ್ಟು ಹೋದ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು | 50.00 |

# 5 ಸಾಮಾಜಿಕ ಸಬಲೀಕರಣ

**ಬಡ, ಹಿಂದುಳಿದವರ, ಮಹಿಳೆ, ವೃದ್ಧರ ಕಲ್ಯಾಣ ಯೋಜನೆಗಳು**

**ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಎಲ್ಲ ವಾರ್ಡ್‌ಗಳ ಬಡ, ಹಿಂದುಳಿದ ಮತ್ತು ದುರ್ಬಲ ಸಮುದಾಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಲಾಗಿದೆ. ವಸತಿಹೀನರಿಗೆ ಹಕ್ಕುಪತ್ರ ನೀಡುವ, ಮಹಿಳೆಯರಿಗೆ ಫಲಾನುಭವಗಳನ್ನು ಒದಗಿಸುವ, ಮಕ್ಕಳ ಕಲ್ಯಾಣಕ್ಕಾಗಿ ಅಂಗನವಾಡಿಯೂ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಯೋಜನೆಗಳನ್ನು ಶ್ರೀ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಸಮರ್ಥವಾಗಿ ಜಾರಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಸೇವೆಗಳನ್ನು ನೀಡಲು ಅವರು ಬದ್ಧರಾಗಿದ್ದಾರೆ.**

**ಶ್ರೀ ವೆಂಕಟಸ್ವಾಮಿ ರೆಡ್ಡಿ**
ಬಿಜೆಪಿ ನಾಯಕರು

**ಸಾಮಾಜಿಕ ಸಬಲೀಕರಣ**

**ಮಹದೇವಪುರ ಟಾಸ್ಕ್‌ಫೋರ್ಸ್**

## 1. ವಸತಿ ಇಲಾಖೆ

| ಕ್ರ. ಸಂ | ಹೋಬಳಿ | ಹಂಚಿಕೆಯಾಗಿರುವ ಮನೆಗಳ ಸಂಖ್ಯೆ |
|---|---|---|
| | 94 ಸಿ | |
| 1 | ಬಿದರಹಳ್ಳಿ | 578 |
| | 94 ಸಿಸಿ | |
| 1 | ಕೆ.ಆರ್.ಪುರ (ಕಾವೇರಿನಗರ) | 928 |
| 2 | ವೈಟ್ ಫೀಲ್ಡ್ | 737 |
| 3 | ವರ್ತೂರು | 138 |
| 4 | ಪಣತ್ತೂರು | 65 |
| 5 | ಬಿದರಹಳ್ಳಿ | 304 |
| | **ಒಟ್ಟು** | **2172** |
| | ಒಟ್ಟು ಹಕ್ಕುಪತ್ರಗಳು | 2750 |

- ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 94ಸಿ ಅಡಿಯಲ್ಲಿ 578 ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ 94ಸಿಸಿ ಅಡಿಯಲ್ಲಿ 2172 ಫಲಾನುಭವಿಗಳಿಗೆ ಒಟ್ಟು ಕಳೆದ 5 ವರ್ಷದ ಅವಧಿಯಲ್ಲಿ 3 ಸಾವಿರಕ್ಕೂ ಹೆಚ್ಚು ಹಕ್ಕುಪತ್ರಗಳನ್ನು ಕಂದಾಯ ಇಲಾಖೆಯ ವತಿಯಿಂದ ವಿತರಿಸಲಾಗಿದೆ.
- ಕೊಳಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಕ್ಷೇತ್ರದಲ್ಲಿನ ದೇವರಬಿಸನಹಳ್ಳಿ ಕೊಳಚೆ ಪ್ರದೇಶ (ಸ್ಲಂ) ನಲ್ಲಿ 528 ಹಕ್ಕುಪತ್ರಗಳು, ಪಣತ್ತೂರು ದಿಣ್ಣೆ ಸ್ಲಂನಲ್ಲಿ 131 ಹಕ್ಕುಪತ್ರಗಳು ಮತ್ತು ಸಂಜಯ ನಗರ ಕೊಳಚೆ ಪ್ರದೇಶದಲ್ಲಿ 2 ಫಲಾನುಭವಿಗಳಿಗೆ ಸೇರಿದಂತೆ ಒಟ್ಟು 661 ಹಕ್ಕುಪತ್ರಗಳನ್ನು ವಿತರಿಸಲಾಗಿದೆ.
- ಪ್ರಧಾನಮಂತ್ರಿ ಅವಾಸ್ ಯೋಜನೆಯ ಸರ್ವರಿಗೂ ಸೂರು ಯೋಜನೆಯಡಿಯಲ್ಲಿ 1000ಜಿ ಮನೆಗಳನ್ನು ನಿರ್ಮಾಣ ಗುರಿ ಹೊಂದಿದ್ದು ಈಗಾಗಲೇ 8 ಮನೆಗಳು ಪೂರ್ಣಗೊಂಡು 161 ಮನೆಗಳು ಪ್ರಗತಿಯಲ್ಲಿದೆ.
- ರಾಜೀವಗಾಂಧಿ ವಸತಿ ನಿಗಮದಿಂದ "ನನ್ನ ಮನೆ" ವಸತಿ ಯೋಜನೆಯಡಿ ಕೊಡತಿ ಗ್ರಾಮದಲ್ಲಿ 58 ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ. ಹಾಗೂ ಬಿದರಹಳ್ಳಿ ಗ್ರಾಮದಲ್ಲಿ ಸುಮಾರು 3,967 ಫ್ಲಾಟ್ ಗಳನ್ನು ನಿರ್ಮಾಣ ಮಾಡುತ್ತಿದ್ದು ಶೀಘ್ರದಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತದೆ.
- ದೇವರಾಜ್ ಅರಸ್ ನಿಗಮ, ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮ, ಒಕ್ಕಲಿಗ ಅಭಿವೃದ್ಧಿ ನಿಗಮ ಮತ್ತು ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, ಅಂಗವಿಕಲ ಅಭಿವೃದ್ಧಿ ನಿಗಮ ಹಾಗೂ ಇತರ ಅಭಿವೃದ್ಧಿ ನಿಗಮಗಳ ವತಿಯಿಂದ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳ ಸಮರ್ಪಕ ವಿತರಣೆ.

## 2. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

- ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟ ಜಾತಿಗೆ ಸೇರಿದ ಬಡ ಹಾಗೂ ಮಧ್ಯಮ ವರ್ಗದ ಫಲಾನುಭವಿಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ, ಉದ್ಯಮಶೀಲತಾ ಅಭಿವೃದ್ಧಿ, ಮೈಕ್ರೋಕ್ರೆಡಿಟ್ ಬೀಜಧನ, ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಮುಂತಾದ ಯೋಜನೆಗಳ ಅಡಿಯಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ 297.10 ಲಕ್ಷ ರೂ.ಗಳನ್ನು ವಿತರಿಸಲಾಗಿದೆ.

# ವಿವಿಧ ಯೋಜನೆಗಳಲ್ಲಿ ಸಾಮಾಜಿಕ ಸಬಲೀಕರಣದ ನೆರವಿನ ವಿವರ

| SCHEME / ಯೋಜನೆ | NO OF BENIFICIERS / ಫಲಾನುಭವಿಗಳ ಸಂಖ್ಯೆ | TOTAL AMOUNT / ಮೊತ್ತ (ಲಕ್ಷ ರೂ.) |
|---|---|---|
| **ಬಿಬಿಎಂಪಿ ಕಲ್ಯಾಣ ಕಾರ್ಯಕ್ರಮ** | | |
| ಸಾರಥಿ ಯೋಜನೆ ಅಡಿಯಲ್ಲಿ ಆಟೋ ರಿಕ್ಷಾ ಖರೀದಿಸಲು ಶೇ. 25 ಸಬ್ಸಿಡಿ | 44 | 26.00 |
| ಲ್ಯಾಪ್‌ಟಾಪ್‌ಗಳು | 190 | 85.00 |
| ವಿಶಿಷ್ಟಚೇತನರಿಗೆ ತ್ರಿಚಕ್ರ ಮೋಪೆಡ್ | 153 | 153.00 |
| ಕಾರು | 111 | 161.50 |
| ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ | | |
| ವಿಶಿಷ್ಟಚೇತನರಿಗೆ ತ್ರಿಚಕ್ರ ಮೋಪೆಡ್ | 20 | 20.00 |
| **ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ** | | |
| ಎಸ್ ಸಿಪಿ, ಟಿಎಸ್‌ಪಿ, ಪಶು ಭಾಗ್ಯ, ಅಮೃತ ಜೀವನ ಯೋಜನೆ ಮತ್ತು ರಾಷ್ಟ್ರೀಯ ಜಾನುವಾರು ಮಿಶನ್ ಯೋಜನೆ | 163 | 42.00 |
| **ಅಂಬೇಡ್ಕರ್ ಅಭಿವೃದ್ಧಿ ನಿಗಮ** | | |
| ಸ್ವದ್ಯೋಗ ಸಬ್ಸಿಡಿ ಯೋಜನೆ, ಉದ್ಯಮಶೀಲತೆ ಮತ್ತು ಮೈಕ್ರೋಕ್ರೆಡಿಟ್ ಯೋಜನೆ | 576 | 437,60 |
| **ದೇವರಾಜ್ ಅರಸ್ ಅಭಿವೃದ್ಧಿ ನಿಗಮ** | | |
| ಸ್ವದ್ಯೋಗ ಸಬ್ಸಿಡಿ ಯೋಜನೆ, ಉದ್ಯಮಶೀಲತೆ ಮತ್ತು ಮೈಕ್ರೋಕ್ರೆಡಿಟ್ ಯೋಜನೆ | 868 | 349.00 |
| **ನಿರ್ದೇಶನಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** | | |
| ಪಿಎಂಎಂವಿವೈ (ಮಾತೃವಂದನಾ) | 8458 | 248.35 |
| ಭಾಗ್ಯಲಕ್ಷ್ಮಿ ಬಾಂಡ್ | 2068 | |
| ಸ್ತ್ರೀಶಕ್ತಿ ಸಂಘ (ಬೀಜಧನ) | 20 Groups | 20.00 |
| ಉದ್ಯೋಗಿನಿ ಯೋಜನೆ | 10 | 16.00 |
| **ಒಕ್ಕಲಿಗ ಅಭಿವೃದ್ಧಿ ನಿಗಮ** | | |
| ಉದ್ಯಮಶೀಲತೆ ಮತ್ತು ಮೈಕ್ರೋಕ್ರೆಡಿಟ್ ಯೋಜನೆ | 85 | 55.00 |
| **ವೀರಶೈವ ಅಭಿವೃದ್ಧಿ ನಿಗಮ** | | |
| ಉದ್ಯಮಶೀಲತೆ ಮತ್ತು ಮೈಕ್ರೋಕ್ರೆಡಿಟ್ ಯೋಜನೆ | 4 | 2.00 |
| **ಆದಿ ಜಾಂಬವ ಅಭಿವೃದ್ಧಿ ನಿಗಮ** | | |
| ನೇರ ಸಾಲ | 34 | 30.00 |
| **ವಾಲ್ಮೀಕಿ ಅಭಿವೃದ್ಧಿ ನಿಗಮ** | | |
| ಮೈಕ್ರೋಕ್ರೆಡಿಟ್, ನೇರ ಸಾಲ ಮತ್ತು ಉದ್ಯಮಶೀಲತಾ ಯೋಜನೆ | 65 | 51.00 |
| **ಭೋವಿ ಅಭಿವೃದ್ಧಿ ನಿಗಮ** | | |
| ನೇರ ಸಾಲ | 14 | 7.00 |
| **ಕಾರ್ಮಿಕ ಇಲಾಖೆ** | | |
| ಮೇಸನ್ ಕಿಟ್, ಪೇಂಟರ್ ಕಿಟ್, ಕಾರ್ಪೆಂಟರಿ ಕಿಟ್, ಪ್ಲಂಬರ್ ಕಿಟ್, ಎಲೆಕ್ಟ್ರಿಸಿಟಿ ಕಿಟ್ ವಿತರಣೆ | 1323 | |
| **ಸಮಾಜ ಕಲ್ಯಾಣ ಇಲಾಖೆ** | | |
| 25 ಕಾನೂನು ಪದವೀಧರರಿಗೆ ಶಿಕ್ಷಣ ನೆರವು ಮತ್ತು 150 ಅಂತರ್ಜಾತೀಯ ವಿವಾಹಗಳಿಗೆ ನೆರವು | 175 | 157.50 |
| **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** | | |
| ಕಾನೂನು ಪದವೀಧರರಿಗೆ ಶಿಕ್ಷಣ ನೆರವು | 2 | 3.20 |
| **ಒಟ್ಟು** | | 1852.05 |

- ಮಹದೇವಪುರ ಕ್ಷೇತ್ರದ 20 ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ 20 ಲಕ್ಷ ರೂಗಳ ಸಹಾಯಧನವನ್ನು ವಿತರಣೆ ಮಾಡಲಾಗಿದೆ.
- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉದ್ಯೋಗಿನಿ ಯೋಜನೆ : ಕಳೆದ 5 ವರ್ಷಗಳಲ್ಲಿ ಸ್ವಯಂ ಉದ್ಯೋಗಕ್ಕೆ 5 ಮಹಿಳಾ ಫಲಾನುಭವಿಗಳಿಗೆ 4.00 ಲಕ್ಷ ರೂಗಳ ಸಹಾಯ ಧನವನ್ನು ನೀಡಲಾಗಿದೆ.

## 2018-23: ಹೊಸದಾಗಿ ನಿರ್ಮಾಣಗೊಂಡ ಅಂಗನವಾಡಿ ಕಟ್ಟಡಗಳ ವಿವರ

| ಕ್ರ.ಸಂ | ವೃತ್ತ | ಅಂಗನವಾಡಿ ಕೇಂದ್ರಗಳ ಸಂಖ್ಯೆ | ಪಂಚಾಯಿತಿ | ಅಂಗನವಾಡಿ ಕೇಂದ್ರ |
|---|---|---|---|---|
| 1 | ದೊಡ್ಡಕನ್ನೆಲ್ಲಿ | 3 | ವರ್ತೂರು ವಾರ್ಡ್ | ಬಳಗೆರೆ |
| | | | ಹಾಲನಾಯಕನಹಳ್ಳಿ ಪಂಚಾಯಿತಿ | ಚಿಕ್ಕನಾಯಕನಹಳ್ಳಿ |
| | | | ಹಾಲನಾಯಕನಹಳ್ಳಿ ಪಂಚಾಯಿತಿ | ಚಿಕ್ಕನಾಯಕನಹಳ್ಳಿ ದಿಣ್ಣೆ |
| 2 | ವರ್ತೂರು | 1 | ವರ್ತೂರು | ಸೋರು ಹುಣಸೆ ಬಡಾವಣೆ |
| 3 | ಬಿದರಹಳ್ಳಿ | 3 | ಕಣ್ಣೂರು | ಕಾಡುಸೊಣ್ಣಪ್ಪನ ಹಳ್ಳಿ 2, |
| | | | ಕಣ್ಣೂರು | ಹೊಸೂರು ಬಂಡೆ |
| | | | ಕಿತ್ತೂಗನೂರು ಪಂಚಾಯಿತಿ | ಕಿತ್ತೂಗನೂರು |
| ಒಟ್ಟು | | 7 | | 7 |

## ಸಾಮಾಜಿಕ ಭದ್ರತಾ ಯೋಜನೆ

| ಕ್ರ. | ಪಿಂಚಣಿ | ಫಲಾನುಭವಿಗಳು |
|---|---|---|
| 1 | ಅಂಗವಿಕಲ ಪೋಷಣಾ ವೇತನ | 394 |
| 2 | ನಿರ್ಗತಿಕ ವಿಧವಾ ವೇತನ | 1887 |
| 3 | ಸಂಧ್ಯಾ ಸುರಕ್ಷಾ ಯೋಜನೆ | 1858 |
| 4 | ಇಂದಿರಾಗಾಂಧಿ ವೃದ್ಧಾಪ್ಯ ವೇತನ | 1400 |
| 5 | ಮೈತ್ರಿ | 01 |
| 6 | ಮನಸ್ವಿನಿ | 32 |
| | ಒಟ್ಟು | 5572 |

# ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಕಳೆದ 5 ವರ್ಷಗಳಲ್ಲಿ ಅಭಿವೃದ್ಧಿಪಡಿಸಿರುವ / ಅಭಿವೃದ್ಧಿಪಡಿಸಲಾಗುವ ಕಾಮಗಾರಿಗಳಿಗೆ ನೀಡಿರುವ ಅನುದಾನದ ವಿವರ (ಲಕ್ಷ ರೂ.)

| ಕ್ರ | ಕಾಮಗಾರಿಯ ಹೆಸರು | ಮೊತ್ತ |
|---|---|---|
| 1 | ಕಾಡುಗೋಡಿಯಲ್ಲಿ ರಜಪುತ್ ಯುವಕA ಸಂಘದ ವತಿಯಿಂದ ನಿರ್ಮಿಸುತ್ತಿರುವ ಸಮುದಾಯ ಭವನ | 25.00 |
| 2 | ಹಾಲನಾಯಕನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಟ್ಟಡ | 10.00 |
| 3 | ಮಡಿವಾಳರ ಸಮುದಾಯ ಭವನ ನಿರ್ಮಾಣ | 5.00 |
| 4 | ಚಿಕ್ಕಗುಬ್ಬಿ ಗ್ರಾಮದಲ್ಲಿ ಸಮುದಾಯ ಭವನದ | 5.00 |
| 5 | ಆವಲಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕಾಂಪೌಂಡ್ ನಿರ್ಮಾಣ | 4.00 |
| 6 | ಆವಲಹಳ್ಳಿ ಗ್ರಾಮದಲ್ಲಿ ಒಳಚರಂಡಿ ಕಾಮಗಾರಿ | 25.00 |
| 7 | ಕಾಡುಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಮುದಾಯ ಭವನದ | 7.00 |
| 8 | ಹೊಸೂರುಬಂಡೆ ಗ್ರಾಮದಲ್ಲಿ ಸ್ತ್ರೀ ಶಕ್ತಿ ಸಮುದಾಯ ಭವನದ | 10.00 |
| 9 | ಕನ್ನಮಂಗಲ ಕೆರೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು | 25.00 |
| 10 | ಬೈರತಿ ಬಂಡೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿ ನಿರ್ಮಾಣ | 10.00 |
| 11 | ಬಂಡೆಹೊಸೂರು ಗ್ರಾಮದಲ್ಲಿ ಸ್ತ್ರೀಶಕ್ತಿ ಭವನದ ನಿರ್ಮಾಣಕ್ಕೆ | 10.00 |
| 12 | ಹುಸ್ಕೂರು ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣದ ಉಳಿಕೆ ಕಾಮಗಾರಿಗೆ | 2.00 |
| 13 | ಹುವಾಯಿ(Huawei) ಕಂಪನಿಯ ಸಹಯೋಗದೊಂದಿಗೆ ಪಿ.ಪಿ.ಪಿ ಮಾದರಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ | 48.00 |
| 14 | ಆವಲಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕಾಂಪೌಂಡ್ ನಿರ್ಮಾಣ | 4.00 |
| 15 | ಮಂಡೂರು ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡದ ಹೆಚ್ಚುವರಿ ಹಾಗೂ ಸೇರ್ಪಡೆ ಕಾಮಗಾರಿಗೆ | 15.00 |
| 16 | ಬಿದರಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ | 5.00 |
| 17 | ಬಿದರಹಳ್ಳಿ ಗ್ರಾಮದಲ್ಲಿ ಕಾಲೋನಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ | 5.00 |
| 18 | ದಿನ್ನೂರು ಗ್ರಾಮದಲ್ಲಿನ (ಕಾಡುಗೋಡಿ ಪ್ಲಾಂಟೇಷನ್) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 2 ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು | 24.00 |
| 19 | ಕಣ್ಣೂರು ಗ್ರಾಮದಲ್ಲಿನ ಡಿವೈನ್ ಮರ್ಸಿ ಶಾಲೆಯವರು ಬಡಮಕ್ಕಳಿಗೆ ಉಚಿತ ವಸತಿ ನಿಲಯವನ್ನು ನಿರ್ಮಿಸುತ್ತಿದ್ದು ಸದರಿ ವಸತಿ ನಿಲಯದ ನಿರ್ಮಾಣಕ್ಕಾಗಿ | 25.00 |
| 20 | ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹುವಾಯ್ ಸಂಸ್ಥೆಯೊಂದಿಗೆ ಪಿ.ಪಿ.ಪಿ ಮಾದರಿಯಲ್ಲಿ ಅಳವಡಿಸಲು | 24.00 |
| 21 | ಕನ್ನಮಂಗಲ ಗ್ರಾಮದ ಅಟಲ್ ಬಿಹಾರಿ ಬಟಾನಿಕಲ್ ಗಾರ್ಡನ್ ರಸ್ತೆ ನಿರ್ಮಾಣ ಕಾಮಗಾರಿಗೆ | 2.26 |
| 22 | ಕನ್ನಮಂಗಲ ಗ್ರಾಮದ ಅಟಲ್ ಬಿಹಾರಿ ಬಟಾನಿಕಲ್ ಗಾರ್ಡನ್ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ | 5.00 |
| 23 | ಮಂಡೂರು ಗ್ರಾಮದ ಯೋಗಶಾಲೆ ಮತ್ತು ವ್ಯಾಯಾಮ ಶಾಲೆ (ಜಿಮ್ ರೂಂ) | 20.00 |
| 24 | ರಾಮಗೊಂಡನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲಾ ಕಟ್ಟಡ | 50.00 |
| 25 | ಅಂಬೇಡ್ಕರ್ ಗುಟ್ಟ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನಕ್ಕೆ | 25.00 |
| 26 | ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹುವಾಯ್ ಸಂಸ್ಥೆಯೊಂದಿಗೆ ಪಿ.ಪಿ.ಪಿ ಮಾದರಿಯಲ್ಲಿ ಅಳವಡಿಸಲು | 24.00 |
| 27 | ಚಿಕ್ಕಗುಬ್ಬಿ ಅನಾಥಾಶ್ರಮ | 10.00 |
| 28 | ಬಂಡೆಹೊಸೂರು ಗ್ರಾಮದ ಪ್ರಾಥಮಿಕ ಶಾಲೆಗೆ ರಂಗಮಂದಿರ | 10.00 |
| 29 | ವರ್ತೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 25.00 |
| 30 | ಸಮುದಾಯ ಭವನ ಕೆ ದೊಮ್ಮಸಂದ್ರ | 25.00 |
| 31 | ಡೈರಿ ಕಟ್ಟಡ ಕಾಟಂನಲ್ಲೂರು. | 10.00 |
| 32 | ಯೋಗ ಮಂದಿರ ಮಂಡೂರು. | 20.00 |
| 33 | ಸಮುದಾಯ ಭವನ ಉಳಿಕೆ ಕಾಮಗಾರಿ ಮಂಡೂರು. | 5.00 |
| 34 | ಸಮುದಾಯ ಭವನ ಉಳಿಕೆ ಕಾಮಗಾರಿ ಜ್ಯೋತಿಪುರ. | 10.00 |
| 35 | ಹುಸ್ಕೂರು ಸಮುದಾಯ ಭವನ ಕಾಮಗಾರಿ. | 10.00 |
| 36 | ಸಮುದಾಯ ಭವನ ಉಳಿಕೆ ಕಾಮಗಾರಿ ಆದೂರು. | 15.00 |
| 37 | ಬಿದರಹಳ್ಳಿ ಸರ್ಕಾರಿ ಶಾಲೆ ಉಳಿಕೆ ಕಾಮಗಾರಿ. | 10.00 |
| 38 | ಸಮುದಾಯ ಭವನ ಬಂಡಾಪುರ | 20.00 |
| 39 | ಜನಪದರು ರಂಗಮಂದಿರ ಗ್ರಂಥಾಲಯ ನಿರ್ಮಾಣ | 15.00 |
| 40 | ಹೂಡಿ ವಾರ್ಡಿನ ಬಸವಣ್ಣನಗರದಲ್ಲಿ ಸಮುದಾಯ ಭವನ ನಿರ್ಮಾಣ | 20.00 |
| 41 | ರೈತಸೇವಾ ಸೇವಾ ಸಹಕಾರ ಸಂಘ ಗೋದಾಮು ನಿರ್ಮಾಣ ಮಂಡೂರು | 22.00 |
| 42 | ಮಂಡೂರು ಗ್ರಾಮದಲ್ಲಿ ವ್ಯಾಯಾಮ ಶಾಲೆ | 22.00 |
| 43 | ಭೈರತಿಯ ಸೆಂಟ್ ಮೋರಿಸ್ ಶಾಲಾ ಆವರಣದಲ್ಲಿ ಸಮುದಾಯ ಭವನ ನಿರ್ಮಾಣ | 25.00 |
| 44 | ಬಿದರಹಳ್ಳಿ ಗ್ರಾಮದ ಯಾಜ್ಞವಲ್ಕ ಆಶ್ರಮದ ಸಮುದಾಯ ಭವನದ ಉಳಿಕೆ ಕಾಮಗಾರಿ | 20.00 |
| 45 | ಜುನ್ನಸಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ | 20.00 |
| 46 | ವರ್ತೂರಿನ ಕರ್ನಾಟಕ ಪಬ್ಲಿಕ್ ಶಾಲೆ | 14.74 |
| 47 | ದೊಡ್ಡಕನ್ನೆಲ್ಲಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ | 10.00 |
| 48 | ಹೂಡಿ ವಾರ್ಡಿನ ಕುಂಬೇನ ಅಗ್ರಹಾರ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ | 15.00 |
| 49 | ವರ್ತೂರು ವಾರ್ಡಿನ ಸೋರಹುಣಸೆ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ | 15.00 |
| 50 | ಬೆಳ್ಳಂದೂರು ವಾರ್ಡಿನ ಕಾಡುಬೀಸನಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ | 15.00 |
| 51 | ಬೆಳತೂರು ವಾರ್ಡಿನ ಹನುಮಂತನಗರ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ | 15.00 |
| 52 | ಇಮ್ಮಡಿಹಳ್ಳಿ ಗ್ರಾಮದಲ್ಲಿ ಡೈರಿ ಕಟ್ಟಡ | 15.00 |
| 53 | ಗುಂಜೂರು ಗ್ರಾಮದಲ್ಲಿ ಸಮುದಾಯ ಭವನ | 25.00 |
| 54 | ರಾಮಗೊಂಡನಹಳ್ಳಿ ಕ್ರೀಡಾಂಗಣಕ್ಕೆ ಸ್ಟೇಜ್ ನಿರ್ಮಾಣ | 25.00 |
| 55 | ವಾಲೇಪುರ ಗ್ರಾಮದಲ್ಲಿ ಸಮುದಾಯ ಭವನ | 20.00 |
| | **ಒಟ್ಟು : 898.00 ಲಕ್ಷ ರೂ.** | |

- ಬಿಬಿಎಂಪಿ ವತಿಯಿಂದ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಕಲಿಕೆಯ ಹಿತದೃಷ್ಟಿಯಿಂದ ಲ್ಯಾಪ್ ಟಾಪ್ ವಿತರಣೆ
- ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಕುಟುಂಬಗಳಿಗೆ 75 ಯೂನಿಟ್ ವರೆಗೆ ಉಚಿತ ವಿದ್ಯುತ್ ಸೌಲಭ್ಯಕ್ಕೆ ಚಾಲನೆ
- ಕೋವಿಡ್ ಹಾಗೂ ಅಪಘಾತದಿಂದ ಮೃತಪಟ್ಟ ಕಾರ್ಯಕರ್ತರ 18 ಮಕ್ಕಳ ವಿದ್ಯಾಭ್ಯಾಸಕ್ಕೆ ಅವರು ಓದುತ್ತಿರುವ ಶಾಲೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಲು ಆರ್ಥಿಕ ನೆರವು ಹಾಗೂ ಸುಮಾರು 25 ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿರುವ ವಾಗ್ದೇವಿ ಸೂಪರ್ ಶಿಕ್ಷಣ ಸಂಸ್ಥೆಯ ಸೇವೆಯ ಸ್ಮರಣೆ
- ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಸುಮಾರು 62 ಕ್ಕೂ ಹೆಚ್ಚು ಬಿ.ಪಿ.ಎಲ್ ಕಾರ್ಡುದಾರರಿಗೆ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸುಮಾರು 60.00 ಲಕ್ಷಕ್ಕೂ ಹೆಚ್ಚು ಪರಿಹಾರ ಧನ ಬಿಡುಗಡೆ.
- ಕ್ಷೇತ್ರದ ಬಡ ಕುಟುಂಬಗಳಿಗೆ 1836 ಅಂತ್ಯೋದಯ ಕಾರ್ಡ್ ಹಾಗೂ 49,964 ಬಿಪಿಎಲ್ ಕಾರ್ಡುಗಳಲ್ಲಿ ಹೊಸದಾಗಿ 3926 ಕಾರ್ಡುಗಳ ವಿತರಣೆ
- **ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ: ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಬಿ.ಪಿ.ಎಲ್ ಕಾರ್ಡುದಾರರಿಗೆ 2018 ರಿಂದ ಇಲ್ಲಿಯವರೆಗೆ ಒಟ್ಟು 62 ಫಲಾನುಭವಿಗಳಿಗೆ ರೂ 59,58,559 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.**

ಬೈರತಿ ಬಂಡೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿ ನಿರ್ಮಾಣ

ಕಣ್ಣೂರು ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಉದ್ಘಾಟನೆ

# 6 ಪರಿಸರ

ಸಸ್ಯ ಸಂಪತ್ತಿನ ವೃದ್ಧಿ , ಉದ್ಯಾನವನಗಳು, ಟ್ರೀ ಪಾರ್ಕ್‌ಗಳು, ಮಾಲಿನ್ಯ ನಿಯಂತ್ರಣ, ಕೆರೆಗಳ ಸುತ್ತ ಕಸ ಕಾಲ್ನಡಿಗೆ ಮಾರ್ಗ ಇತ್ಯಾದಿ

**ಶ್ರೀ ಲಿಂಗರಾಜ ಅರಸ್**
ಬಿಜೆಪಿ ನಾಯಕರು

**ಪರಿಸರ**

**ಮಹದೇವಪುರ ಟಾಸ್ಕ್‌ಫೋರ್ಸ್**

## ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಗೆ ಘಟಕಗಳು

- ಐದು ವಾರ್ಡ್‌ಗಳಲ್ಲಿ (ಗರುಡಾಚಾರ್ ಪಾಳ್ಯ, ದೊಡ್ಡನೆಕ್ಕುಂದಿ, ಮಾರತ್ತಹಳ್ಳಿ, ವತರ್ತೂರು ಮತ್ತು ಬೆಳ್ಳಂದೂರು) ಒಣಕಸ ವಿಂಗಡಣಾ ( ಡಿಡಬ್ಲ್ಯುಸಿಸಿ) ಕೇಂದ್ರಗಳಿವೆ / ನಿರ್ಮಾಣ ನಡೆದಿದೆ. ಇನ್ನು ಮೂರು ವಾರ್ಡ್‌ಗಳಲ್ಲಿ (ಹೂಡಿ, ಕಾಡುಗೋಡಿ, ಹಗದೂರು) ಈ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾವಿಸಲಾಗಿದೆ. ಪಣತ್ತೂರಿನಲ್ಲಿ ಹಸಿ ಕಸವನ್ನು ಸಂಸ್ಕರಿಸಲು ಬಯೋಮೀಥೇನೈಸೇಶನ್ ಘಟಕವನ್ನೂ ಸ್ಥಾಪಿಸಲಾಗಿದೆ. ಇಂತಹ ಇನ್ನೂ ಎರಡು ಕೇಂದ್ರಗಳನ್ನು ದೊಡ್ಡನೆಕ್ಕುಂದಿ ಮತ್ತು ಚನ್ನಸಂದ್ರಗಳಲ್ಲಿ ಸ್ಥಾಪಿಸಲಾಗುವುದು.
- ದೊಡ್ಡನೆಕ್ಕುಂದಿ ಮತ್ತು ವರ್ತೂರು ಕೇಂದ್ರಗಳಲ್ಲಿ ಮಿನಿ ವರ್ಗಾವಣೆ ಕೇಂದ್ರಗಳೂ ಇವೆ.
- ಇಂತಹ ಪ್ರತಿಯೊಂದೂ ಡಿಡಬ್ಲ್ಯುಸಿಸಿ ಕೇಂದ್ರಗಳಿಗೆ ತಲಾ ಒಂದು ಕೋಟಿ ರೂ. ವೆಚ್ಚ ಮಾಡಲಾಗಿದೆ.
- 150 ಮೆಟ್ರಿಕ್ ಟನ್ ಸಾಮರ್ಥ್ಯದ ದೊಡ್ಡ ಘಟಕವು ದೊಡ್ಡನೆಕ್ಕುಂದಿಯಲ್ಲಿ 11 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆಯಾಗಲಿದ್ದು, 2023ರ ಜುಲೈ ವೇಳೆಗೆ ಕಾರ್ಯಾರಂಭ ಮಾಡಲಿದೆ.
- ಬಿಬಿಎಂಪಿ ವ್ಯಾಪ್ತಿಯಲ್ಲಿ 2 ವಾರ್ಡುಗಳಿಗೆ ಒಂದರಂತೆ ಘನತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ಬಿಬಿಎಂಪಿ ವಾರ್ಡುಗಳಲ್ಲಿ ಪ್ರತಿದಿನ ಕಸ ಸಂಗ್ರಹಣೆ ಕಾರ್ಯ ನಡೆಯುತ್ತಿದೆ.

## ಹಲವೆಡೆ ಸುವ್ಯವಸ್ಥಿತ ಕಸ ನಿರ್ವಹಣಾ ಘಟಕಗಳು

ದೊಡ್ಡಗುಬ್ಬಿಯಲ್ಲಿ ಘನತ್ಯಾಜ್ಯ ವಿಲೇವಾರಿ ಕೇಂದ್ರ

ದೊಡ್ಡಗುಬ್ಬಿಯಲ್ಲಿ ಘನತ್ಯಾಜ್ಯ ವಿಲೇವಾರಿ ಕೇಂದ್ರ

ಟ್ವಿನ್ ಟ್ರಾನ್ಸ್‌ಫರ್ ಕೇಂದ್ರ

## ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ

- ಇರುವ 11 ಗ್ರಾಮ ಪಂಚಾಯತ್‌ಗಳ ಪೈಕಿ 9 ಕಡೆಗಳಲ್ಲಿ ಈಗಾಗಲೇ ಎಲ್ಲಾ ಬಗೆಯ ಕಸಗಳನ್ನು ನಿರ್ವಹಿಸಲು ಕಸ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಮನೆಯಿಂದ ಬೇರ್ಪಡಿಸಲಾದ ತ್ಯಾಜ್ಯವನ್ನು ಸಂಗ್ರಹಿಸಿ ಘನತ್ಯಾಜ್ಯ ನಿರ್ವಹಣಾ ಘಟಕಗಳಿಗೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆ.
- ಪ್ರತಿಯೊಂದೂ ಕಸ ಕೇಂದ್ರದಲ್ಲಿ ಹಸಿ, ಕಸ ಪ್ರತ್ಯೇಕಿಸಲು ಮತ್ತು ಮೂಲದಲ್ಲೇ ಬಳಸಲಾಗದ ಕಸವನ್ನು ಬೇರ್ಪಡಿಸಲು ಮಿನಿ ಟ್ರಾಕ್ಟರ್ ಗಳಲ್ಲಿ ಪ್ರತ್ಯೇಕ ಭಾಗಗಳಿರುತ್ತವೆ. ಈ ಟ್ರಾಕ್ಟರ್ ಗಳು ತೀರಾ ಚಿಕ್ಕದಾದ ರಸ್ತೆಗಳಲ್ಲೂ ಓಡಾಡುವ ಹಾಗೆ ಇರುತ್ತವೆ. ಇಂತಹ 24 ಟ್ರಾಕ್ಟರ್ ಗಳನ್ನು ಈಗ ಒದಗಿಸಲಾಗಿದೆ.
- ಪ್ರತಿಯೊಂದೂ ಟ್ರಾಕ್ಟರ್ ನ್ನು 4.35 ಲಕ್ಷ ರೂ. ವೆಚ್ಚದಲ್ಲಿ 3 ವರ್ಷಗಳ ನಿರ್ವಹಣಾ ಖಾತ್ರಿಯೊಂದಿಗೆ ಖರೀದಿಸಲಾಗಿದೆ. ಇವುಗಳು ಇಂಧನ ಬಳಕೆಯಲ್ಲೂ ಈಗಿನ ಮಾನದಂಡಕ್ಕೆ ಅನುಗುಣವಾಗಿವೆ.

## ಮಂಡೂರಿನ ತ್ಯಾಜ್ಯ ಕೇಂದ್ರ ತೆರವು - ಬಯೋಮೈನಿಂಗ್ ಆರಂಭ

- ಮಂಡೂರಿನಲ್ಲಿಹಾಲಿ ಇರುವ ಕಸವನ್ನು ಜೈವಿಕ ಸಂಪನ್ಮೂಲವಾಗಿ ಪರಿವರ್ತಿಸುವ **ಬಯೋ ಮೈನಿಂಗ್** ಕಾರ್ಯ 219 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭವಾಗಿದೆ. ಸದರಿ ಪ್ರದೇಶವನ್ನು ಸಾರ್ವಜನಿಕ, ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮೀಸಲಿಡಲಾಗುವುದು.

## ದೇಶದಲ್ಲೇ ಮೊದಲ ಬಾರಿಗೆ ಪ್ರಾಣಿತ್ಯಾಜ್ಯ ನಿರ್ವಹಣೆ ಘಟಕ

- ಹೊಸೂರು ಬಂಡೆ ಗ್ರಾಮದಲ್ಲಿ ಪ್ರಾಣಿ ತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲಾಗಿದೆ (ಬಾಕ್ಸ್ ನೋಡಿ)

## ದೇಶದಲ್ಲೇ ಅಪರೂಪ,ರಾಜ್ಯದಲ್ಲೇ ಮೊದಲು: ಪ್ರಾಣಿ ತ್ಯಾಜ್ಯ ನಿರ್ವಹಣೆ ಘಟಕ



ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಬಗೆಯ ಪ್ರಾಣಿ ತ್ಯಾಜ್ಯ ನಿರ್ವಹಣೆಗಾಗಿ 20 ಟನ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸಲಾಗಿದೆ. ರೆಫ್ರಿಜರೇಟರ್ ವ್ಯವಸ್ಥೆಯ ವಾಹನದಲ್ಲಿ ಅಂಗಡಿಗಳಿಂದ ಯಾವುದೇ ಶುಲ್ಕವಿಲ್ಲದೆ ಪ್ರಾಣಿ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ. ಇದನ್ನು ರೆಂಡರಿಂಗ್ ವಿಧಾನದ ಮೂಲಕ ಸಂಸ್ಕರಿಸಲಾಗುತ್ತದೆ. ಇದು ಸಂಪೂರ್ಣವಾಗಿ ವಾಸನೆ ರಹಿತ ಪ್ರಕ್ರಿಯೆಯಾಗಿದೆ. ಪ್ರಾಣಿತ್ಯಾಜ್ಯವನ್ನು ಸ್ಥಿರ ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಮಾಡಲಾಗುತ್ತಿದೆ.

ಎಣ್ಣೆ ಮತ್ತು ಗ್ರೀಸ್ ರೂಪದಲ್ಲಿ ಕೊಬ್ಬು, ರೆಕ್ಕೆಪುಕ್ಕ ಆಹಾರ, ಪೌಲ್ಟ್ರಿ ಆಹಾರ ಮತ್ತು ರಕ್ತದ ಆಹಾರ - ಹೀಗೆ ನಾಲ್ಕು ಬಗೆಯ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ.

ಈ ಘಟಕದ ನಿರ್ವಹಣೆಗಾಗಿ ಬಿಬಿಎಂಪಿ ವಾರ್ಡಿನ ಮತ್ತು ಗ್ರಾಮಪಂಚಾಯತ್‌ಗಳ ಪ್ರತಿಯೊಬ್ಬ ಸಿಬ್ಬಂದಿಗೂ ತರಬೇತಿ ನೀಡಲಾಗುತ್ತದೆ. 2023 ರ ಮಾರ್ಚ್ ಹೊತ್ತಿಗೆ ಈ ಘಟಕವು ತ್ಯಾಜ್ಯವನ್ನು ಸ್ವೀಕರಿಸಲು ಸಿದ್ಧವಾಗುತ್ತಿದೆ.

ಪಿಪಿಪಿ ಮಾದರಿಯಲ್ಲಿ ಈ ಘಟಕವನ್ನು ಸ್ಥಾಪಿಸಲಾಗುತ್ತಿದ್ದು ಇದರ ಆರಂಭಿಕ ವೆಚ್ಚ 15 ಕೋಟಿ ರೂ. ಆಗಿದೆ.



## ಮಂಡೂರಿನಲ್ಲಿ ಕಸ ತೆರವುಗೊಳಿಸುವ ಕಾರ್ಯಾಚರಣೆ

# ಭರದಿಂದ ನಡೆಯುತ್ತಿರುವ **ಬಯೋಮೈನಿಂಗ್:** ಕಸದಿಂದ ರಸ ತೆಗೆವ ಕಾರ್ಯಾಚರಣೆ

### ಪೌರ ಕಾರ್ಮಿಕರಿಗೆ ಪ್ರತ್ಯೇಕ ಸುವಿಧಾ ಕೇಂದ್ರ

- ಸ್ವಚ್ಛ ಭಾರತ ಆಗಬೇಕಾದರೆ ನಮ್ಮ ಪೌರ ಕಾರ್ಮಿಕರು ಆರೋಗ್ಯದಿಂದ ಇರಬೇಕು! ಅದಕ್ಕಂದೇ ಶ್ರೀ ಅರವಿಂದ ಲಿಂಬಾವಳಿಯವರು ಹೂಡಿಯ ವಾರ್ಡ್ ಕಚೇರಿಯಲ್ಲಿ ಪೌರ ಕಾರ್ಮಿಕರಿಗಾಗಿ ಶೌಚಾಲಯ, ವಿಶ್ರಾಂತಿ ಸ್ಥಳ, ಆಹಾರ-ವಸ್ತುಗಳನ್ನು ಇಡಲು, ಬಟ್ಟೆ ಬದಲಾಯಿಸುವ ಸ್ಥಳ - ಎಲ್ಲವೂ ಇರುವ ಸುವಿಧಾ ಕ್ಯಾಬಿನ್ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಇಂತಹ ಸುವಿಧಾ ಕೇಂದ್ರಗಳು ಎ.ಇ.ಸಿ. ಎಸ್ ಬಡಾವಣೆಯ ಎ ಬ್ಲಾಕ್, ವಾರ್ಡ್ ಕಚೇರಿ ಹತ್ತಿರ,, ಹಗದೂರು ಬಿಬಿಎಂಪಿ ಕಚೇರಿ ಮತ್ತು ರಾಮಗೊಂಡನಹಳ್ಳಿ ಶಾಲಾ ಮೈದಾನ, ಹೂಡಿ ಇನ್ನರ್ ಸರ್ಕಲ್ ಮೈದಾನ, ದೊಡ್ಡನೆಕ್ಕುಂದಿ ಟೋಟಲ್ ಮಾಲ್ ಹತ್ತಿರ, ವರ್ತೂರು ಕಾಲೇಜು ಮೈದಾನ, ಮುನ್ನೇಕೊಳಾಲ ಮುಖ್ಯರಸ್ತೆ ತೂಬರಹಳ್ಳಿ, ವರ್ತೂರಿನ ಗುಂಜೂರು ಸರ್ಕಾರಿ ಆಸ್ಪತ್ರೆ, ಬೆಳ್ಳಂದೂರು ದೇವರಬಿಸನಹಳ್ಳಿ ಸರ್ಕಾರಿ ಶಾಲೆ, ಬೆಳ್ಳಂದೂರಿನ ಹರಳೂರು ಅಂಗನವಾಡಿ, ಗರುಡಾಚಾರ್ ಪಾಳ್ಯದ ಬಿಬಿಎಂಪಿ ಕಚೇರಿ ಹಿಂಭಾಗದಲ್ಲಿ ಸಹಾ ಆರಂಭವಾಗಿವೆ.
- ತಲಾ 7 ಲಕ್ಷ ರೂ. ವೆಚ್ಚದಲ್ಲಿ 12 ಕಡೆಗಳಲ್ಲಿ ತೆರೆದಿರುವ ಈ ಸುವಿಧಾ ಕ್ಯಾಬಿನ್‌ಗಳನ್ನು ಇನ್ನೂ 14 ಕಡೆಗಳಲ್ಲಿ ಸ್ಥಾಪಿಸಲಾಗುವುದು.

# ಪೌರ ಕಾರ್ಮಿಕರಿಗೆ ಪ್ರತ್ಯೇಕ ಸುವಿಧಾ ಕೇಂದ್ರಗಳು

ಸುವಿಧಾ ಕ್ಯಾಬಿನ್‌ನ ಒಂದು ಮಾದರಿ ಚಿತ್ರ

ಹೂಡಿ

ಎಇಸಿಎಸ್

ವರ್ತೂರು

ಪೌರಕಾರ್ಮಿಕರಿಂದಲೇ ಉದ್ಘಾಟನೆ

ಗರುಡಾಚಾರ್ ಪಾಳ್ಯ

ಹಗದೂರು

## ಮಹದೇವಪುರ ವಿಭಾಗದಲ್ಲಿ ಯೋಜಿತ ವಿಕೇಂದ್ರೀಕೃತ ಘನತ್ಯಾಜ್ಯ ಘಟಕಗಳ ವಿವರ

| ಕ್ರ. | ವಾರ್ಡ್ | ಭೂಮಿ | ವಿಸ್ತಾರ | ಈಗಿನ ಸ್ಥಿತಿ | ಘಟಕದ ಉದ್ದೇಶ |
|---|---|---|---|---|---|
| 1 | 149 ವರ್ತೂರು | ಸರ್ವೆ ಸಂಖ್ಯೆ 99 ಪಣತ್ತೂರು ದಿನ್ನೆ | 2 ಎಕರೆ | ಹಸ್ತಾಂತರಿಸಿದೆ | ಘನತ್ಯಾಜ್ಯ ಸಂಗ್ರಹ ಕೇಂದ್ರ |
| | | | | ಹಸ್ತಾಂತರಿಸಿದೆ | ಬಯೋ ಮೀಥೇನೈಸೇಶನ್ ಘಟಕ |
| | | | | ಹಸ್ತಾಂತರಿಸಿದೆ | ಮಿನಿ ವರ್ಗಾವಣೆ ಕೇಂದ್ರ |
| 2 | 85 ದೊಡ್ಡನೆಕ್ಕುಂದಿ | ಸರ್ವೆ ಸಂಖ್ಯೆ 15 ದೊಡ್ಡನೆಕ್ಕುಂದಿ | 2 ಎಕರೆ | ಹಸ್ತಾಂತರಿಸಿದೆ | ವರ್ಗಾವಣೆ ಕೇಂದ್ರ |
| | | | | ಹಸ್ತಾಂತರಿಸಿದೆ | ಘನತ್ಯಾಜ್ಯ ಸಂಗ್ರಹ ಕೇಂದ್ರ |
| | | | | ಹಸ್ತಾಂತರಿಸಿದೆ | ಮಿನಿ ವರ್ಗಾವಣೆ ಕೇಂದ್ರ |
| 3 | 150 ಬೆಳ್ಳಂದೂರು | ಸರ್ವೆ ಸಂಖ್ಯೆ 15 ದೊಡ್ಡನೆಕ್ಕುಂದಿ | 2 ಎಕರೆ | ಹಸ್ತಾಂತರಿಸಿದೆ | ವಸ್ತು ಪುನರ್ ಸಂಗ್ರಹ ಸೌಲಭ್ಯ |
| | | | | ಹಸ್ತಾಂತರಿಸಿದೆ | ಒಣ ತ್ಯಾಜ್ಯ ಕೇಂದ್ರ |
| 4 | 86 ಮಾರತ್ತಹಳ್ಳಿ | ಮಂಜುನಾಥ ನಗರದ ಹಿಂಭಾಗ | 2 ಎಕರೆ | ಹಸ್ತಾಂತರಿಸಿದೆ | ಒಣತ್ಯಾಜ್ಯ ಸಂಗ್ರಹ ಕೇಂದ್ರ |

## ಹಲವೆಡೆ ಉದ್ಯಾನವನಗಳು, ಟ್ರೀ ಪಾರ್ಕ್ ಗಳ ಸ್ಥಾಪನೆ

- ಕನ್ನಮಂಗಲದಲ್ಲಿ ಅಟಲ್ ಬಿಹಾರಿ ಬಟಾನಿಕಲ್ ಗಾರ್ಡನ್ (ಮಿನಿ ಲಾಲ್ ಬಾಗ್), ಕಣ್ಣೂರಿನ ಕನಕಶ್ರೀ ಬಡಾವಣೆಯಲ್ಲಿ, ಬೊಮ್ಮೇನಹಳ್ಳಿ, ಹೀರಂಡಹಳ್ಳಿಯಲ್ಲಿ, ಭೈರತಿಯಲ್ಲಿ 2 ಉದ್ಯಾನವನಗಳು, ಬಿಳಿಶಿವಾಲೆಯಲ್ಲಿ 1 ಉದ್ಯಾನವನ, ಮುನ್ನೇಕೊಳಾಲ, ಗುಂಜೂರು ಪಾಳ್ಯದಲ್ಲಿ ಉದ್ಯಾನವನಗಳನ್ನು ನಿರ್ಮಾಣ ಮಾಡಲಾಗಿದೆ.
- ಕಾಡುಗೋಡಿಯಲ್ಲಿ ಟ್ರೀ ಪಾರ್ಕ್ ನಿರ್ಮಾಣ ಪೂರ್ಣಗೊಂಡಿದ್ದು ಈಗಾಗಲೇ ಸಾರ್ವಜನಿಕರ ಬಳಕೆಗೆ ಮುಕ್ತವಾಗಿದೆ ಮತ್ತು ಗುಂಜೂರಿನಲ್ಲಿ ಟ್ರೀ ಪಾರ್ಕ್ ಕಾಮಗಾರಿ ಪ್ರಗತಿಯ ಹಂತದಲ್ಲಿದೆ.
- ಮಿಟ್ಟಗಾನಹಳ್ಳಿ 18 ಎಕರೆ ತ್ಯಾಜ್ಯ ಭೂಭರ್ತಿ ಪ್ರದೇಶದಲ್ಲಿ ವೈಜ್ಞಾನಿಕವಾಗಿ ಮಡ್ ಕ್ಯಾಪಿಂಗ್ ಮಾಡಿ 21.64 ಕೋಟಿ ರೂ. ವೆಚ್ಚದಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು.
- ಅಭಿವೃದ್ಧಿಪಡಿಸಿದ ಎಲ್ಲಾ ಕೆರೆಗಳಲ್ಲಿ ಕಾಲ್ನಡಿಗೆ ಮಾರ್ಗ,ಉದ್ಯಾನವನ ಮತ್ತು ಮಕ್ಕಳ ಆಟದ ಕೇಂದ್ರಗಳನ್ನು ನಿರ್ಮಿಸಲಾಗಿದೆ.

ಕಾಡುಗೋಡಿ ಟ್ರೀ ಪಾರ್ಕ್

ಕನ್ನಮಂಗಲ ಲಾಲ್‌ಬಾಗ್ ಉದ್ಘಾಟನೆ

- ತೋಟಗಾರಿಕೆ ಇಲಾಖೆಯ 72 ಎಕರೆ ತೆಂಗಿನ ತೋಟವನ್ನು ಜೀವ ವೈವಿಧ್ಯದ ಅಟಲ್ ಬಿಹಾರಿ ಬಟಾನಿಕಲ್ ಉದ್ಯಾನವನವನ್ನಾಗಿ ಪರಿವರ್ತಿಸಲಾಗುತ್ತಿದೆ.
- ಈಗಾಗಲೇ ಸಾರ್ವಜನಿಕರ ನಡೆದಾಟಕ್ಕಾಗಿ 3.2 ಕಿಮೀ ನಡೆದಾರಿಯನ್ನು ಹಾಸಲಾಗಿದೆ.
- ಈಗ 4 ಸಾವಿರ ಬಹುವಿಧದ ತೆಂಗಿನ ಮರಗಳಿವೆ.
- ಕುಡಿಯುವ ನೀರಿಗಾಗಿ ಆರ್‌ಓ ಘಟಕಗಳನ್ನು ಸ್ಥಾಪಿಸಲಸಾಗಿದೆ. ಶೌಚಾಲಯಗಳೂ ಇವೆ.
- ಸಾರ್ವಜನಿಕರು ವಿಶ್ರಮಿಸುವ ತಾಣಗಳನ್ನೂ ನಿರ್ಮಿಸಲಾಗುತ್ತಿದೆ. ಸಿಎಸ್‌ಆರ್ ನಿಧಿಯ ಮೂಲಕ ಇಲ್ಲಿ ಮಿಯಾವಾಕಿ ಅರಣ್ಯವನ್ನು, ನಕ್ಷತ್ರವನವನ್ನು ಮತ್ತು ಆಯುರ್ವೇದ ವನವನ್ನು ಮತ್ತು ಚಿಟ್ಟ ಉದ್ಯಾನವನವನ್ನು ರೂಪಿಸಲಾಗುವುದು.
- ಇದಲ್ಲದೆ ಜೀವವೈವಿಧ್ಯದ ನಿರ್ವಹಣೆಗಾಗಿ ಮಾನವ ನಿರ್ಮಿತ ಕೆರೆಯನ್ನು ನಿರ್ಮಿಸಲಾಗುವುದು.





ದೊಡ್ಡನೆಕ್ಕುಂದಿ ಟ್ರೀ ಪಾರ್ಕ್

**ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ 50 ಸಾವಿರಕ್ಕೂ ಹೆಚ್ಚಿನ ಗಿಡಗಳನ್ನು ನೆಡಲಾಗಿದೆ.**

# ಕಲ್ಯಾಣಿ, ಕುಂಟೆ, ಗೋಕಟ್ಟೆಗಳಿಗೆ ಕಾಯಕಲ್ಪ

**ಮಹದೇವಪುರ ಕ್ಷೇತ್ರದ ಹಲವೆಡೆ ಇರುವ ಪಾರಂಪರಿಕ ಜಲ ಸ್ಥಾನಗಳಾದ ಕಲ್ಯಾಣಿಗಳು, ಕುಂಟೆಗಳು, ಗೋಕಟ್ಟೆಗಳನ್ನು ಅಭಿವೃದ್ಧಿಪಡಿಸಿ ಕೇವಲ ಅಂತರ್ಜಲ ರಕ್ಷಣೆಗೆ, ಜೀವವೈವಿಧ್ಯಕ್ಕಾಗಿ ಮಾತ್ರ ಬಳಸಲಾಗುತ್ತಿದೆ.**



ಮಂಡೂರು ಜಿಲ್ಲಾ ಪಂಚಾಯತ್ ಕಲ್ಯಾಣಿ

# ಮಹದೇವಪುರ ವಿಧಾನಸಭಾ ಕ್ಷೇತ್ರದ ಕಲ್ಯಾಣಿಗಳ ಅಭಿವೃದ್ಧಿ ಪಟ್ಟಿ

| | | |
|---|---|---|
| 1. | ಚಿಕ್ಕಗುಬ್ಬಿ ಕಲ್ಯಾಣಿ | ಕಣ್ಣೂರು |
| 2. | ಕಾಡಸೊನ್ನಪ್ಪನಹಳ್ಳಿ | ಕಣ್ಣೂರು |
| 3. | ಕಣ್ಣೂರು ಕಲ್ಯಾಣಿ | ಕಣ್ಣೂರು |
| 4. | ಯರಪ್ಪನಹಳ್ಳಿ ಕಲ್ಯಾಣಿ | ಕಣ್ಣೂರು |
| 5. | ಬಂಡೆ ಹೊಸೂರು ಕಲ್ಯಾಣಿ | ಕಣ್ಣೂರು |
| 6. | ದೊಡ್ಡಗುಬ್ಬಿ ಕಲ್ಯಾಣಿ | ದೊಡ್ಡಗುಬ್ಬಿ |
| 7. | ಬಿದರಹಳ್ಳಿ ಕಾಶಿ ವಿಶ್ವೇಶ್ವರ ಕಲ್ಯಾಣಿ | ಬಿದರಹಳ್ಳಿ |
| 8. | ಬೈಯಪ್ಪನಹಳ್ಳಿ ಕಲ್ಯಾಣಿ | ಬೈಯಪ್ಪನಹಳ್ಳಿ |
| 9. | ಈಸ್ಟ್ ಪಾಯಿಂಟ್ ಕಾಲೇಜು ಬಳಿ ಬಿದರಹಳ್ಳಿ ಕಲ್ಯಾಣಿ | ಬೈಯಪ್ಪನಹಳ್ಳಿ |
| 10. | ಚೀಮಸಂದ್ರ ಕಲ್ಯಾಣಿ | ಆವಲಹಳ್ಳಿ |
| 11. | ಜ್ಯೋತಿಪುರ ಕಲ್ಯಾಣಿ | ಮಂಡೂರು |
| 12. | ಮಂಡೂರು ಕಲ್ಯಾಣಿ | ಮಂಡೂರು |
| 13. | ಆಂಜನೇಯ ಕಲ್ಯಾಣಿ, ಹಂಚನಹಳ್ಳಿ | ಮಂಡೂರು |
| 14. | ಮುನೇಶ್ವರ ಗೋಕಟ್ಟೆ , ತಿರುಮೇನಹಳ್ಳಿ | ಮಂಡೂರು |
| 15. | ಕೊಡಿಗೇನಹಳ್ಳಿ ಗೋಕಟ್ಟೆ , ಕೊಡಿಗೇನಹಳ್ಳಿ | ಮಂಡೂರು |
| 16. | ಕೊಡಿಗೇನಹಳ್ಳಿ ಊರುಕುಂಟೆ | ಮಂಡೂರು |
| 17. | ಪೀತರಕುಂಟೆ, ಕೊಡಿಗೇನಹಳ್ಳಿ | ಮಂಡೂರು |
| 18. | ಮಂಡೂರು ಗೋಕಟ್ಟೆ | ಮಂಡೂರು |
| 19. | ಕಮ್ಮಸಂದ್ರಕುಂಟೆ | ಬಿದರಹಳ್ಳಿ |
| 20. | ಅಂಗಳಾಪುರ ಕುಂಟೆ | ದೊಡ್ಡಗುಬ್ಬಿ |
| 21. | ಕಾಚಮಾರನಹಳ್ಳಿ | ಕೊಡತಿ |
| 22. | ಮುಳ್ಳೂರು ಕುಂಟೆ | ಕೊಡತಿ |
| 23. | ಗೌರಮ್ಮ ಕಲ್ಯಾಣಿ | ಕೊಡತಿ |
| 24. | ಮುನೇಶ್ವರಮ್ಮ ದೇವಸ್ಥಾನದ ಕಲ್ಯಾಣಿ | ಕೊಡತಿ |
| 25. | ಸೂಲಿಕುಂಟೆ ಗೋಕಟ್ಟೆ | ಕೊಡತಿ |
| 26. | ಸೀಗೆಹಳ್ಳಿ ಕಲ್ಯಾಣಿ | ಸೀಗೆಹಳ್ಳಿ |
| 27. | ಗೊರವಿಗೆರೆ ಕಲ್ಯಾಣಿ | ದೊಡ್ಡಬನಹಟ್ಟಿ |
| 28. | ಗೊರವಿಗೆರೆ ಗೋಕಟ್ಟೆ | ದೊಡ್ಡಬನಹಟ್ಟಿ |
| 29. | ಕನ್ನಮಂಗಲ ಗೋಕಟ್ಟೆ | ಕನ್ನಮಂಗಲ |
| 30. | ಕಾಜಿಸೊಣ್ಣೇನಹಳ್ಳಿ ಗೋಕಟ್ಟೆ | ಕನ್ನಮಂಗಲ |
| 31. | ಕಾಜಿಸೊಣ್ಣೇನಹಳ್ಳಿ ಬಸವೇಶ್ವರ ದೇವಸ್ಥಾನದ ಕಲ್ಯಾಣಿ | ಕನ್ನಮಂಗಲ |

**ಒಟ್ಟು ಮೊತ್ತ 3.20 ಕೋಟಿ ರೂ.**

ಜ್ಯೋತಿಪುರ ಕಲ್ಯಾಣಿ

ಬಿದರಹಳ್ಳಿ ಕಲ್ಯಾಣಿ

ಕಾಡುಸೊಣ್ಣೆಪ್ಪನಹಳ್ಳಿ ಕಲ್ಯಾಣಿಗೆ ಮರುಜೀವ ತರಲು ಯತ್ನ

ಕಾಡುಸೊಣ್ಣೆಪ್ಪನಹಳ್ಳಿ ಕಲ್ಯಾಣಿ

ಚೀಮಸಂದ್ರ ಕಲ್ಯಾಣಿ

ದೊಡ್ಡಗುಬ್ಬಿ ಕಲ್ಯಾಣಿ

# ಕ್ಲೀನ್‌ಸ್ಟ್ರೀಟ್ 75 ಕಿಮೀ ಚಾಲೆಂಜ್ @ ಮಹದೇವಪುರ

- "ಕ್ಲೀನ್‌ಸ್ಟ್ರೀಟ್ 75 ಕಿಮೀ ಚಾಲೆಂಜ್ @ ಮಹದೇವಪುರ" ಎಂದ ಅಭಿಯಾನವನ್ನು ಆರಂಭಿಸಿ ಮಹದೇವಪುರ ಕ್ಷೇತ್ರದ ಸ್ವಚ್ಛತೆ ಮತ್ತು ನಡೆದಾಟ ಸುಗಮತೆಯನ್ನು ಪ್ರೋತ್ಸಾಹಿಸುವ ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

# ಮಹದೇವಪುರ ವಿಧಾನಸಭಾ ಕ್ಷೇತ್ರದ ಪರಿಸರ ವಿಭಾಗದಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಯೋಜನೆಗಳ ವಿವರ

| ಇಲಾಖೆ | ಕಾಮಗಾರಿಯ ವಿವರ | ಯೋಜನಾ ವೆಚ್ಚ (ಲಕ್ಷ ರೂ) |
|---|---|---|
| | ENVIRONMENT \| ಪರಿಸರ | |
| | ONGOING WORKS / ಪ್ರಗತಿಯಲ್ಲಿರುವ ಕಾಮಗಾರಿಗಳು | |
| ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ | ಮಂಡೂರು ಗ್ರಾಮದ ಘನತ್ಯಾಜ್ಯ ಘಟಕದಲ್ಲಿ ಕಸ ಎತ್ತುವ ಕಾಮಗಾರಿಗೆ ಚಾಲನೆ ಭಾಗ-1 | 8900.00 |
| ಘನ ತ್ಯಾಜ್ಯ ನಿರ್ವಹಣೆ | ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಸರಾಗ ಹರಿವಿಗಾಗಿ ಮತ್ತು SWD ಗಡಿಯನ್ನು ನಿಶ್ಚಯಿಸಲು SWD ಗಾಗಿ ಅತಿಕ್ರಮಣ ತೆರವು ಮತ್ತು ಅಗೆತ ಕಾಮಗಾರಿ | 500.00 |
| | SANCTIONED WORKS / ಮಂಜೂರಾಗಿರುವ ಕಾಮಗಾರಿಗಳು | |
| ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ | ಮಂಡೂರು ಗ್ರಾಮದ ಘನತ್ಯಾಜ್ಯ ಘಟಕದಲ್ಲಿ ಕಸ ಎತ್ತುವ ಕಾಮಗಾರಿಗೆ ಚಾಲನೆ ಭಾಗ-2 | 13000.00 |

ಸೋಮೇಶ್ವರ ದೇವಾಲಯದ ಹತ್ತಿರ ಕಲ್ಯಾಣಿ ಮತ್ತು ಫುಟ್ಪಾತ್ ಅಭಿವೃದ್ಧಿ ಕಾಮಗಾರಿಗೆ ಚಾಲನೆ

# 7 ಪಿಪಿಪಿ

## ಪಬ್ಲಿಕ್ - ಪ್ರೈವೇಟ್ ಪಾರ್ಟ್‌ನರ್‌ಶಿಪ್ : ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳು ಹಾಗೂ ಸಿಎಸ್‌ಆರ್ ಚಟುವಟಿಕೆಗಳು

**ಸಾರ್ವಜನಿಕ ಸಂಪನ್ಮೂಲದ ಜೊತೆಗೇ ಖಾಸಗಿ ಸಂಪನ್ಮೂಲವನ್ನೂ ಜೋಡಿಸಿದರೆ ವಿಕಾಸದ ವೇಗ ಹೆಚ್ಚಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಮಹದೇವಪುರ ಕ್ಷೇತ್ರದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಪಿಪಿಪಿ ಯೋಜನೆಗಳನ್ನು ಜಾರಿ ಮಾಡಲಾಗಿದೆ. ಕ್ಷೇತ್ರದ ಹಲವಾರು ಐಟಿ - ಐಟಿಯೇತರ ಸಂಸ್ಥೆಗಳು, ಸ್ವಯಂಸೇವಾ ಸಂಘಟನೆಗಳು, ದಾನಿಗಳು ಈ ರಚನಾತ್ಮಕ ಅಭಿಯಾನದಲ್ಲಿ ಕೈಗೂಡಿಸಿದ್ದಾರೆ. ಶಾಸಕರ ನಿಧಿಯನ್ನೂ ಸಮರ್ಥವಾಗಿ ಬಳಸಿಕೊಂಡು ಕ್ಷೇತ್ರದ ಜನತೆಗೆ ಹೆಚ್ಚು ಹೆಚ್ಚು ಸೇವೆಗಳನ್ನು ನೀಡಲಾಗುತ್ತಿದೆ. ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆಯ ನಿಧಿಯನ್ನೂ ಈ ಸೇವೆಗಳಿಗಾಗಿ ಬಳಸಲಾಗಿದೆ.**

**ಶ್ರೀ ವೆಂಕಟರಮಣಪ್ಪ**
**(ಪಾಪಣ್ಣ )**
ಬಿಜೆಪಿ ನಾಯಕರು

**ಪಿಪಿಪಿ**

**ಮಹದೇವಪುರ ಟಾಸ್ಕ್‌ಫೋರ್ಸ್**

- **ಹಾವೆ, ಮಿ.ಡಾಕ್ಟರ್ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಪಿಪಿಪಿ ಮಾದರಿಯಲ್ಲಿ ಕ್ಷೇತ್ರದ ವ್ಯಾಪ್ತಿಯಲ್ಲಿ ಸುಮಾರು 28 ಶುದ್ಧ ಕುಡಿಯುವ ನೀರಿನ (ಆರ್ ಓ) ಘಟಕಗಳ ಸ್ಥಾಪನೆ (2.64 ಕೋಟಿ ರೂ.)**
- ಪಿಪಿಪಿ ಮಾದರಿಯಲ್ಲಿ ಕನ್ನಮಂಗಲ ಕೆರೆ (3.00 ಕೋಟಿ), ಕಾಟಂನಲ್ಲೂರು ಕೆರೆ (95.00 ಲಕ್ಷ ರೂ), ಬಿದರೆ ಅಗ್ರಹಾರ (75.00 ಲಕ್ಷ) ಮತ್ತು ಮುಳ್ಳೂರು ಕೆರೆಗಳ ಅಭಿವೃದ್ಧಿ
- ರಾಮಗೊಂಡನಹಳ್ಳಿಯಲ್ಲಿ ರೋಟರಿ ಮತ್ತು ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಪಿಪಿಪಿ ಮಾದರಿಯಲ್ಲಿ ರೂ 2.00 ಕೋಟಿಗಳ ವೆಚ್ಚದಲ್ಲಿ ಸುಸಜ್ಜಿತವಾದ ಪ್ರೌಢಶಾಲಾ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಇಲ್ಲಿ ಈ ಹಿಂದೆ ಇನ್ನೂರಕ್ಕಿಂತ ಕಡಿಮೆ ದಾಖಲಾತಿ ಇದ್ದು , ದತ್ತು ಪಡೆದ ನಂತರ 800 ಕ್ಕೂ ಹೆಚ್ಚಿನ ದಾಖಲಾತಿ ಹೊಂದಿದೆ. ಇಲ್ಲಿನ ವಿದ್ಯಾರ್ಥಿಗಳು ಕ್ರೀಡೆ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಎಲ್ಲಾ ರಂಗದಲ್ಲೂ ಮುಂಚೂಣಿಯಲ್ಲಿದ್ದು , ಇತ್ತೀಚಿಗೆ ದೆಹಲಿಯಲ್ಲಿ ನಡೆದ ಪುಟ್ಬಾಲ್ ಪಂದ್ಯದಲ್ಲಿ ಇಲ್ಲಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.
- ಪಿಪಿಪಿ ಮಾದರಿಯಲ್ಲಿ ಅವಸರ್ ಫೌಂಡೇಶನ್ ವತಿಯಿಂದ ಶೀಗೇಹಳ್ಳಿ ಸರ್ಕಾರಿ ಶಾಲೆಯಲ್ಲಿ 2 ಮತ್ತು ಚನ್ನಸಂದ್ರ ಸರ್ಕಾರಿ ಶಾಲೆಯಲ್ಲಿ 4 ಸುಸಜ್ಜಿತ ಕೊಠಡಿ ನಿರ್ಮಾಣ ಸೇರಿದಂತೆ ಕ್ಷೇತ್ರದ ವಿವಿಧ ಸರ್ಕಾರಿ ಶಾಲೆಗಳಲ್ಲಿ 90.00 ಲಕ್ಷ ರೂ.ಗಳ ವೆಚ್ಚದಲ್ಲಿ 6 ಹೆಚ್ಚುವರಿ ಕೊಠಡಿಗಳು, ಬಿದರಹಳ್ಳಿಯ ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ 15.00 ಲಕ್ಷ ರೂ.ಗಳ ವೆಚ್ಚದಲ್ಲಿ ಡಿಜಿಟಲ್ ಲೈಬ್ರರಿ, 1.00 ಕೋಟಿ ರೂ.ಗಳ ವೆಚ್ಚದಲ್ಲಿ 10 ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಗಳು ಆರಂಭವಾಗಿದ್ದು , ಜಿಇ ಕಂಪನಿಯ ವತಿಯಿಂದ 30.00 ಲಕ್ಷ ರೂಗಳ ವೆಚ್ಚದಲ್ಲಿ 2 ಶಾಲಾ ಕೊಠಡಿಗಳ ನಿರ್ಮಾಣ ಮಾಡಲಾಗಿದೆ.
- ಹುವಾಯ್ ಸಂಸ್ಥೆ ನೆರವಿನಿಂದ ನಲ್ಲೂರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಿಪಿಪಿ ಮಾದರಿಯಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿದ್ದು , ಹಳೇ ಶಾಲೆಯನ್ನು ಪುನಃಶ್ಚೇತನ ಮಾಡಲಾಗಿದೆ.
- ಪಿಪಿಪಿ ಅಡಿಯಲ್ಲಿ 20 ಟನ್ ಸಾಮರ್ಥ್ಯದ ಪ್ರಾಣಿ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ (ರೂ 14.00 ಕೋಟಿ)
- ಪಿಪಿಪಿ ಅಡಿಯಲ್ಲಿ ಹಾಲಿ ಇರುವ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್.ಪಿ-ಇ ವತಿಯಿಂದ ಇ-ಹೆಲ್ತ್ ಸೆಂಟರ್ ನೆರವು

# ಗೋರಕ್ಷಣೆಯ ಸಂಕಲ್ಪ: ಗೋಶಾಲೆ

ರಾಜ್ಯ ಸರ್ಕಾರದ ಅನುದಾನದಿಂದ ಮಹದೇವಪುರದ ಹೊಸೂರು ಬಂಡೆಯಲ್ಲಿ ಗೋಶಾಲೆ ನಿರ್ಮಾಣಕ್ಕೆ ಭೂಮಿಪೂಜೆ ಮಾಡಲಾಗಿದೆ. ಶ್ರೀ ಮಾತೇಶ್ವರಿ ಭಕ್ತ ಮಂಡಲ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಗೋ ಸೇವಾ ಆಶ್ರಮಗಳು ನಿರ್ವಹಿಸುತ್ತಿರುವ ಈ ಗೋಶಾಲೆಯಲ್ಲಿ 384 ಗೋವುಗಳಲ್ಲದೆ ಒಂಟೆ, ಕುರಿಗಳು, ಮೊಲಗಳೂ ಇವೆ.

# ವಿವಿಧ ಎನ್.ಜಿ.ಒಗಳಿಂದ ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಲೆಗಳಿಗೆ ನೀಡಿದ ವಿವಿಧ ಸೌಲಭ್ಯಗಳ ವಿವರ

| ಕ್ರ. ಸಂ | ಎನ್.ಜಿ.ಒ ಸಂಸ್ಥೆಯ ಹೆಸರು | ಸಂಸ್ಥೆಯು ಒದಗಿಸಿದ ಸೌಲಭ್ಯಗಳು | ಸೌಲಭ್ಯ ಪಡೆದ ಶಾಲೆ | ಅಂದಾಜು ಮೊತ್ತ (ಲಕ್ಷ ರೂ.) |
|---|---|---|---|---|
| 1 | ಆಚಾರ್ಯ ಫಾರ್ ಬೆಟರ್ ಕಮ್ಯುನಿಟಿ | ಭೌತಿಕ ಸೌಲಭ್ಯ ಮತ್ತು ಕಂಪ್ಯೂಟರ್, ಲ್ಯಾಪ್‌ಟಾಪ್ ಸೌಲಭ್ಯ | ಸ.ಕಿ.ಪ್ರಾ.ಶಾಲೆ ಅಂಬೇಡ್ಕರ್‌ನಗರ | **10.00** |
| 2 | ಅಗಸ್ತ ಇಂಡಿಯ ಫೌಂಡೇಷನ್ | ಮೊಬೈಲ್ ವಿಜ್ಞಾನ ಪ್ರಯೋಗಾಲಯ, ಸಂಚಾರಿ ಪ್ರಯೋಗಾಲಯ, ವಿಜ್ಞಾನ ವಸ್ತು ಪ್ರದರ್ಶನ | ಸ.ಹಿ.ಪ್ರಾ.ಶಾಲೆ ಇಮ್ಮಡಿಹಳ್ಳಿ, ದೊಡ್ಡನೆಕ್ಕುಂದಿ, ಕಾಡುಗುಡಿ, ಬೆಳತೂರು ಕಾಲೋನಿ,ಶೀಗೇಹಳ್ಳಿ ಬೆಳತೂರು | **15.00** |
| 3 | ಟೆಕ್ ಮಹೇಂದ್ರ ಫೌಂಡೇಷನ್ | ಶಿಕ್ಷಕರಿಗೆ ವಿಜ್ಞಾನ, ಕನ್ನಡ, ಸಮಾಜ ವಿಜ್ಞಾನ ವಿಷಯಗಳಲ್ಲಿ ತರಬೇತಿ | ಬಿದರಹಳ್ಳಿ ಮತ್ತು ಕ್ಯಾಲಸನಹಳ್ಳಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಶಾಲೆಗಳು | **3.00** |
| 4 | ಅರಿವು ದಿಶಾ ಫೌಂಡೇಷನ್, ಹೆಡ್ ಸ್ಟ್ರೀಮ್ಸ್ | ಸೃಜನಾತ್ಮಕ ಕಲಿಕೆ ಮತ್ತು ಮಾನಸಿಕ ಬೆಳವಣಿಗೆ | ಸ.ಹಿ.ಪ್ರಾ.ಶಾಲೆ, ಹೂಡಿ, ಕೆ.ಆರ್ ಪುರ, ಮುನ್ನೇಕೊಳಾಲ | **5.00** |
| 5 | ರೀಚಿಂಗ್ ಹ್ಯಾಂಡ್ ಫೌಂಡೇಶನ್ | ಸಟ್ ತರಗತಿಗಳು, ಶೌಚಾಲಯಗಳ ನಿರ್ಮಾಣ | ಸ.ಪ್ರೌ.ಶಾಲೆ ಗುಂಜೂರು, ಬಿ ನಾರಾಯಣಪುರ, ದೊಡ್ಡನೆಕ್ಕುಂದಿ | **8.00** |
| 6 | ಯುನೈಟೆಡ್ ವೆ ಆಫ್ ಬೆಂಗಳೂರು ಫೌಂಡೇಷನ್ | ಸಿವಿಲ್ ಕಾಮಗಾರಿಗಳು, ಪೀಠೋಪಕರಣಗಳು, | ಸ.ಹಿ.ಪ್ರಾ.ಶಾಲೆ ತೂಬರಹಳ್ಳಿ, ಸಿದ್ಧಾಪುರ, ಮುನ್ನೇಕೊಳಾಲ, ಯಮಲೂರು, ಹೂಡಿ | **60.00** |
| 7 | ಆಪರ್ಚುನಿಟಿ ಫೌಂಡೇಷನ್ ಟ್ರಸ್ಟ್ | ಗಣಕಯಂತ್ರ ಕೊಠಡಿಗಳ ಆಧುನೀಕರಣ, ಪೀಠೋಪಕರಣಗಳು, ಇಂಟರ್‌ನೆಟ್ ವ್ಯವಸ್ಥೆ, ಪ್ರೊಜೆಕ್ಟರ್, ಯುಪಿಸ್ | ಸ.ಹಿ.ಪ್ರಾ.ಶಾಲೆ ಶೀಗೇಹಳ್ಳಿ, ಬೆಳತೂರು ಕಾಲೋನಿ, ಕಾಡುಗೋಡಿ, ಜ್ಯೋತಿಪುರ | **20.00** |
| 8 | ಜಸ್ಟ್ ಫಾರ್ ಕಿಕ್ಸ್ | 10 ರಿಂದ 12 ವರ್ಷದ ಬಾಲಕ ಹಾಗೂ ಬಾಲಕಿಯರಿಗೆ ಫುಟ್‌ಬಾಲ್ ತರಬೇತಿ. | ಸ.ಹಿ.ಪ್ರಾ.ಶಾಲೆ ಇಮ್ಮಡಿಹಳ್ಳಿ, ಚನ್ನಸಂದ್ರ, ಕಾಡುಗೋಡಿ, ನಲ್ಲೂರಹಳ್ಳಿ | **3.00** |
| 9 | ಅವಸರ್ ಕಂಪನಿ | 15 ಕಂಪ್ಯೂಟರ್, ಯು.ಪಿ.ಎಸ್, ಪ್ರೊಜೆಕ್ಟರ್, ವಾಚನಾಲಯ | ಸ.ಪ್ರೌ.ಶಾಲೆ ಕನ್ನಮಂಗಲ | **6.00** |
| 10 | ಮ್ಯಾಜಿಕ್ ಬಸ್ | ಶಾಲಾ ಶೈಕ್ಷಣಿಕ ಮತ್ತು ಭೌತಿಕ ಸೌಲಭ್ಯಗಳು | ಸ.ಹಿ.ಪ್ರಾ.ಶಾಲೆ ದೊಡ್ಡಕನ್ನೆಲ್ಲಿ, ವರ್ತೂರು | **2.00** |
| 11 | ಎಸ್.ಆರ್.ಎಫ್ ಫೌಂಡೇಷನ್ | ಕಂಪ್ಯೂಟರ್, ಯು.ಪಿ.ಎಸ್, ವಾಚನಾಲಯ. ಟಿವಿ, ಶೌಚಾಲಯ, ಸಿಸಿ ಕ್ಯಾಮರ, ಶಾಲೆ ಸುಣ್ಣ-ಬಣ್ಣ , ಸ್ಮಾರ್ಟ್ ಕ್ಲಾಸ್, ಪ್ರಯೋಗಾಲಯ | 19 ಸರ್ಕಾರಿ ಶಾಲೆಗಳು | **120.00** |
| 12 | ನಯೋನಿಕ ಐ ಕೇರ್ ಸಂಸ್ಥೆ | ಉಚಿತ ಕಣ್ಣಿನ ತಪಾಸಣೆ, ಕನ್ನಡಕ ವಿತರಣೆ, ಕಣ್ಣಿನ ಪರೀಕ್ಷೆಯ ಚಾರ್ಟ್, | ವಲಯದ ಎಲ್ಲಾ ಸರ್ಕಾರಿ ಶಾಲೆಗಳು | **5.00** |
| 13 | ಅವಸರ್ ಪ್ಲೇ ಸ್ಕೂಲ್ | ನರ್ಸರಿ ಶಾಲೆ | ಸ.ಹಿ.ಪ್ರಾ.ಶಾಲೆ ಶೀಗೇಹಳ್ಳಿ | **20.00** |
| 14 | ಯುನೈಟೆಡ್ ವೆ ಆಫ್ ಬೆಂಗಳೂರು ಫೌಂಡೇಷನ್ | ನಲಿಕಲಿ ತರಗತಿಗಳು, ಇಂಗ್ಲೀಷ್ ಭಾಷೆ ಕಲಿಕೆ, ಬೇಸಿಗೆ ಶಿಬಿರಗಳು, | ಸರ್ಕಾರಿ ಶಾಲೆಗಳಾದ ಕೊಡತಿ, ಸೂಲಿಕುಂಟೆದಿಣ್ಣೆ , ಎ ಕೃಷ್ಣಪ್ಪನಗರ | **70.00** |
| 15 | ಕಾಗ್ನಿಜೆಂಟ್ ಇಂಡಿಯ, ಪ್ರೈವೇಟ್ ಲಿಮಿಟೆಡ್ ಮತ್ತು ನಿರ್ಮಾಣ್ ಆರ್ಗನೈಸೇಷನ್ ಬೆಂಗಳೂರು | 71 ಟ್ಯಾಬ್ಲೆಟ್ | ಸರ್ಕಾರಿ ಪ್ರೌಢಶಾಲೆ ಬಿಳಿಶಿವಾಲೆ | **4.97** |

| | | | | |
|---|---|---|---|---|
| 16 | ಐ ಡ್ರೀಮ್ ಮತ್ತು ಸಿಪ್ಲಾ ಸಂಸ್ಥೆ ಬೆಂಗಳೂರು | 60 ಟ್ಯಾಬ್ಲೆಟ್ | ಸರ್ಕಾರಿ ಪ್ರೌಢಶಾಲೆ ದೊಡ್ಡಬನಹಳ್ಳಿ | 4.20 |
| 17 | ಎಸ್.ಆರ್.ಎಫ್. ಫೌಂಡೇಶನ್, ಕ್ಯಾಪ್ ಜೆಮಿನಿ, ಬೆಂಗಳೂರು | 10 ಟ್ಯಾಬ್ಲೆಟ್ | ಸರ್ಕಾರಿ ಪ್ರೌಢಶಾಲೆ ಗರುಡಾಚಾರ್‌ಪಾಳ್ಯ | 0.70 |
| 18 | ಜುನ್ನಸಂದ್ರ ಗ್ರಾಮದ ಗ್ರಾಮಸ್ಥರು | 2 ಹೊಸ ಕೊಠಡಿಗಳು | ಸ.ಕಿ.ಪ್ರಾ.ಶಾಲೆ ಜುನ್ನಸಂದ್ರ | 30.00 |
| 19 | ಬ್ರೀಲಿಯೋಅಲೋನಾ ಮತ್ತು ಎಸ್.ಆರ್.ಎಪ್. ಸಂಸ್ಥೆ ಬೆಂಗಳೂರು | 18 ಟ್ಯಾಬ್ಲೆಟ್ | ಸರ್ಕಾರಿ ಪ್ರೌಢಶಾಲೆ ಇಮ್ಮಡಿಹಳ್ಳಿ | 1.26 |
| 20 | ಇನ್‌ವೆಂಚರ್ ಮತ್ತು ರೋಟರಿ ಸಂಸ್ಥೆ ವೈಟ್ ಫೀಲ್ಡ್ | 4 ಹೊಸ ಕೊಠಡಿಗಳ ನಿರ್ಮಾಣ | ಸ.ಹಿ.ಪ್ರಾ.ಶಾಲೆ ರಾಮಗೊಂಡನಹಳ್ಳಿ | 60.00 |
| 21 | | ವಿದ್ಯಾರ್ಥಿಗಳ ಭೋಜನಾಲಯ ನಿರ್ಮಾಣ | | 10.00 |
| 22 | | ವಿದ್ಯಾರ್ಥಿಗಳ ಆನ್‌ಲೈನ್ ಭೋಧನೆಗೆ 100 ಟ್ಯಾಬ್ಲೆಟ್ ವಿತರಣೆ | | 7.00 |
| 23 | | 10 ಕೊಠಡಿಗಳ ರಿಪೇರಿ ಮತ್ತು ಸುಣ್ಣ ಬಣ್ಣ | | 10.00 |
| 24 | | ವಾಟರ್ ಫಿಲ್ಟರ್ | | 1.50 |
| 25 | | ಪೀಠೋಪಕರಣಗಳ ವಿತರಣೆ | | 2.00 |
| | **ಒಟ್ಟು ಮೊತ್ತ** | | | **478.63** |

## ಇತರೆ ಸಿಎಸ್‌ಆರ್ ನಿಧಿಗಳು ಮತ್ತು ಪಿಪಿಪಿ ಯೋಜನೆಗಳ ವಿವರ

| ಕೆಲಸ | ದಾನಿ ಸಂಸ್ಥೆ | ಮೊತ್ತ (ಲ.ರೂ.) |
|---|---|---|
| ಮಂಡೂರು ಡಿಜಿಟಲ್ ಗ್ರಂಥಾಲಯ | ಗ್ರೈಂಡ್‌ವೆಲ್ | 10.00 |
| ಆವಲಹಳ್ಳಿ ಡಿಜಿಟಲ್ ಗ್ರಂಥಾಲಯ | ಗ್ರೈಂಡ್‌ವೆಲ್ | 10.00 |
| ಆವಲಹಳ್ಳಿ ಬಿಸಿಎಂ ಹಾಸ್ಟೆಲ್ ಮತ್ತು ಡಿಜಿಟಲ್ ಗ್ರಂಥಾಲಯ | ಅವಸರ್ ಫೌಂಡೇಶನ್ | 15.00 |
| ಕನ್ನಮಂಗಲ ದೊಡ್ಡ ಬನಹಳ್ಳಿಯಲ್ಲಿ ವಾರ್ಡ್ ಒಳಚರಂಡಿ | ಶೋಭಾ | 15.00 |
| ಕನ್ನಮಂಗಲ ದೊಡ್ಡ ಬನಹಳ್ಳಿಯಲ್ಲಿ ವಾರ್ಡ್ ಒಳಚರಂಡಿ | ಸುಮಧುರ ಬಿಲ್ಡರ್ಸ್ | 25.00 |
| ಕನ್ನಮಂಗಲ ಕೆರೆ | ಯೂನಿಟೈಡ್ ವೇಸ್ | 300.00 |
| ಕಾಟಂನಲ್ಲೂರು ಕೆರೆ | | 95.00 |
| ಮುಳ್ಳೂರು ಕೆರೆ | | 50.00 |
| ಬಿದರೆ ಅಗ್ರಹಾರ ಕೆರೆ | | 75.00 |
| **ಒಟ್ಟು** | **(5.95 ಕೋಟಿ ರೂ.)** | **595.00** |

# 2018-23ರ ಅವಧಿಯ ಸ್ಕೈವಾಕ್‌ಗಳ ಪಟ್ಟಿ

| | | |
|---|---|---|
| 1 | ಬೆಳ್ಳಂದೂರು ಸೆಂಟ್ರಲ್ ಮಾಲ್, ಓಆರ್‌ಆರ್ ಬಳಿ ಸ್ಕೈವಾಕ್ | ಪೂರ್ಣಗೊಂಡಿದೆ |
| 2 | ಕಾಡುಬಿಸನಹಳ್ಳಿಯ ಜೆಪಿ ಮೋರ್ಗನ್ / ಪ್ರೆಸ್ಟೀಜ್ ಟೆಕ್ ಪಾರ್ಕ್ ಸ್ಕೈವಾಕ್ | ಪೂರ್ಣಗೊಂಡಿದೆ |
| 3 | ಕಾಡುಬಿಸನಹಳ್ಳಿಯ ನ್ಯೂ ಹೊರೈಝೂನ್ ಕಾಲೇಜ್ ಆಫ್ ಇಂಜಿನಿಯರಿಂಗ್ ಸ್ಕೈವಾಕ್ | ಪೂರ್ಣಗೊಂಡಿದೆ |
| 4 | ಇಬ್ಬಲೂರು ಜಂಕ್ಷನ್ ಬಳಿ ಔಟರ್ ರಿಂಗ್ ರೋಡ್‌ನ ಸ್ಕೈವಾಕ್ | ಪೂರ್ಣಗೊಂಡಿದೆ |
| 5 | ಮಾರತ್ತಹಳ್ಳಿ ಕಳಾಮಂದಿರದ ಹತ್ತಿರ ಸ್ಕೈವಾಕ್ | ಪೂರ್ಣಗೊಂಡಿದೆ |
| 6 | ಗ್ರಾಫೈಟ್ ಇಂಡಿಯಾ ಜಂಕ್ಷನ್ ಬಳಿ ಎಲ್ ಆಕಾರದ ಸ್ಕೈವಾಕ್ | ಪ್ರಗತಿಯಲ್ಲಿದೆ |
| 7 | ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಹುಸ್ಕೂರು ಗೇಟ್ ಬಳಿ ಸ್ಕೈವಾಕ್ | ಪೂರ್ಣಗೊಂಡಿದೆ |
| 9 | ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಚೀಮಸಂದ್ರ ಗೇಟ್ ಬಳಿ ಸ್ಕೈವಾಕ್ | ಪೂರ್ಣಗೊಂಡಿದೆ |
| 9 | ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ವೀರೇನಹಳ್ಳಿ ಗೇಟ್ ಬಳಿ ಸ್ಕೈವಾಕ್ | ಪೂರ್ಣಗೊಂಡಿದೆ |
| 10 | ಮಾರತ್ತಹಳ್ಳಿ ಇನ್ನೋವೇಟಿವ್ ಮಲ್ಟಿಪ್ಲೆಕ್ಸ್ ಬಳಿ ಸ್ಕೈವಾಕ್ | ಪೂರ್ಣಗೊಂಡಿದೆ |

## ಕೆಲವು ಸ್ಕೈವಾಕ್‌ಗಳ ಉದ್ಘಾಟನಾ ದೃಶ್ಯಗಳು

ಮಾರತ್ತಹಳ್ಳಿ ಕಲಾಮಂದಿರ ಬಳಿ

ಇನೋವೇಟೀವ್ ಮಲ್ಟಿಪ್ಲೆಕ್ಸ್ ಹತ್ತಿರ

ಇಬ್ಬಲೂರು ಜಂಕ್ಷನ್ ನ ಕೊಲಂಬಿಯಾ ಏಷಿಯಾ ಆಸ್ಪತ್ರೆ ಹತ್ತಿರ

# 8 ಕಾನೂನು - ಸುವ್ಯವಸ್ಥೆ

**ಸುರಕ್ಷತೆ, ಅಪರಾಧ ನಿಯಂತ್ರಣ, ಸಿಸಿಟಿವಿ, ಸಂಚಾರ ಪೊಲೀಸ್, ದೂರು ನಿರ್ವಹಣೆ ಇತ್ಯಾದಿ**

**ಶ್ರೀ ಸುರೇಶ ರೆಡ್ಡಿ**
ಬಿಜೆಪಿ ನಾಯಕರು

**ಕಾನೂನು ಮತ್ತು ಸುವ್ಯವಸ್ಥೆ**

**ಮಹದೇವಪುರ ಟಾಸ್ಕ್‌ಫೋರ್ಸ್**

- **ಕಳೆದ 15 ವರ್ಷಗಳಿಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಾ ಜಾತಿಯ ಜನರು ಯಾವುದೇ ಜಾತಿ ಆಧಾರಿತ ಪ್ರಕರಣಗಳು ದಾಖಲಾಗದೇ ಸಾರ್ವಜನಿಕರು ಸಾಮರಸ್ಯದ ಸಹಬಾಳ್ವೆಯನ್ನು ನಡೆಸುತ್ತಿದ್ದಾರೆ.**
- ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ನಲ್ಲಿ ವಿಶೇಷವಾಗಿ ಸೈಬರ್ ಕ್ರೈ ಪೊಲೀಸ್ ಠಾಣೆ ಇದ್ದು, ಕಳೆದ ವರ್ಷ ಆನ್ ಲೈನ್ ಕ್ರೈಂ ಸಂಬಂಧ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಿ ರೂ 7.00 ಕೋಟಿಗೂ ಮೇಲ್ಪಟ್ಟ ಹಣವನ್ನು ಹಣ ಕಳೆದುಕೊಂಡವರಿಗೆ ಮರಳಿಸುವಲ್ಲಿ ಯಶಸ್ವಿಯಾಗಿದೆ.
- ಕ್ಷೇತ್ರದ ಪೊಲೀಸರು ವಾಹನ ಕಳುವು ಪ್ರಕರಣಗಳನ್ನು ಯಶಸ್ವಿಯಾಗಿ ಪತ್ತೆ ಮಾಡಿದ್ದಾರೆ.
- ಕ್ಷೇತ್ರದ ವ್ಯಾಪ್ತಿಯಲ್ಲಿ ಅಪರಾಧ ಪ್ರಮಾಣ ನಿಯಂತ್ರಣದಲ್ಲಿದೆ.
- ಕೊಲೆ-ದರೋಡೆಯಂತಹ ಪ್ರಕರಣಗಳು ಗಣನೀಯವಾಗಿ ಇಳಿಕೆಯಾಗಿದೆ.
- ಮಹದೇವಪುರ ವಿಧಾನಸಭಾ ಕ್ಷೇತ್ರವು 10 ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳನ್ನು ಹಾಗೂ 5 ಸಂಚಾರಿ ಪೊಲೀಸ್ ಠಾಣೆಗಳನ್ನು ಹೊಂದಿದೆ. ಸದರಿ ಠಾಣೆಗಳಿಗೆ ಅತ್ಯಾಧುನಿಕ ವಾಹನಗಳ ವ್ಯವಸ್ಥೆ ಮಾಡಲಾಗಿದೆ.
- ಎಲ್ಲಾ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ಕ್ಷೇತ್ರದ ಮಹಿಳೆಯರ ಸುರಕ್ಷತೆಯ ಹಿತದೃಷ್ಟಿಯಿಂದ ಮಹಿಳಾ ಸಹಾಯ ಡೆಸ್ಕ್ ತೆರೆಯಲಾಗಿದೆ.
- ಕ್ಷೇತ್ರದ ಪ್ರಮುಖ ಭಾಗಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಮಹಿಳೆಯರ, ಮಕ್ಕಳ ಮತ್ತು ಸಾರ್ವಜನಿಕರ ಸುರಕ್ಷತೆಯ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಲಾಗಿದೆ.
- ಕ್ಷೇತ್ರದ ಹಲವಾರು ಕಡೆ ಪೊಲೀಸ್ ಔಟ್ ಪೋಸ್ಟ್ ನಿರ್ಮಾಣ ಮಾಡಿ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಮುಂಜಾಗ್ರತೆ ವಹಿಸಲಾಗಿದೆ.
- ಕೋವಿಡ್ ಸಮಯದಲ್ಲಿ ಮಹಾಮಾರಿಯನ್ನು ನಿಯಂತ್ರಿಸಲು ಆರಕ್ಷಕ ಇಲಾಖೆಯು ಗಣನೀಯವಾದ ಪಾತ್ರವನ್ನು ನಿರ್ವಹಿಸಿದ್ದು, ಈ ಸಮಯದಲ್ಲಿ ಅವರ ಸೇವೆಯನ್ನು ಸ್ಮರಿಸುತ್ತೇನೆ.
- ಕೋವಿಡ್ ಸಮಯದಲ್ಲಿ ಕ್ಷೇತ್ರದ ಎಲ್ಲಾ ಆರಕ್ಷಕ ಠಾಣೆಗಳಲ್ಲಿ ಸ್ಯಾನಿಟೈಸಿಂಗ್ ಟನಲ್ ಒದಗಿಸಿ ಪೊಲೀಸ್ ಸಿಬ್ಬಂದಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗಿದೆ.
- ಸಂಚಾರದ ಹಿತದೃಷ್ಟಿಯಿಂದ ಮಹದೇವಪುರ ಮತ್ತು ಬೆಳ್ಳಂದೂರಿನಲ್ಲಿ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭ
- ಮಹದೇವಪುರ ಎ.ಸಿ.ಪಿ ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ಉದ್ಘಾಟನೆಗೊಳ್ಳಲಿದೆ, ಮಾರತ್ತಹಳ್ಳಿ ಪೊಲೀಸ್ ಠಾಣೆಗೆ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಮತ್ತು ಕ್ಷೇತ್ರದ ವೈಟ್ ಫೀಲ್ಡ್ ನಲ್ಲಿ ವಿಶೇಷವಾಗಿ ಸೈಬರ್ ಕ್ರೈಂ ಠಾಣೆ ಇದ್ದು, ಸದರಿ ಠಾಣೆಯ ಕಟ್ಟಡ ಕಾಮಗಾರಿ ಸದರಿ ಠಾಣೆಯ ಕಟ್ಟಡ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಸದರಿ ಕಾಮಗಾರಿಗಳನ್ನು ಮೆಟ್ರೋ ವತಿಯಿಂದ ರೂ 10.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

**ಒಟ್ಟಾರೆಯಾಗಿ ಮಹದೇವಪುರ ಕ್ಷೇತ್ರದಲ್ಲಿ ಜನರು ಯಾವುದೇ ಭಯವಿಲ್ಲದೇ ನೆಮ್ಮದಿಯ ಜೀವನವನ್ನು ನಡೆಸುವಲ್ಲಿ ಸಹಕರಿಸಿದ ಪೊಲೀಸ್ ಇಲಾಖೆಗೆ ಧನ್ಯವಾದಗಳು!**

ಮಾರತ್ತಹಳ್ಳಿ ಪೊಲೀಸ್ ಠಾಣೆ ನೂತನ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮ

ಕೊರೋನಾ ಕಾಲದಲ್ಲಿ ಪೊಲೀಸ್ ಸಿಬ್ಬಂದಿಗೆ ನೆರವಿನ ಬೆಂಬಲ

ಮಾರತ್ತಹಳ್ಳಿ ಪೊಲೀಸ್ ಠಾಣೆ ಕೆಲಸ

ಎಸಿಪಿ ಕಚೇರಿ ಮತ್ತು ಸೈಬರ್ ಕ್ರೈಮ್ ಕಚೇರಿ

# 9 ವಿಪತ್ತು ನಿರ್ವಹಣೆ

**ಅನಿರೀಕ್ಷಿತ ಮಹಾಮಳೆ ತಂದ ನೆರೆಗೆ ಪರಿಹಾರ, ಕೋವಿಡ್ ಸಂಕಷ್ಟದಲ್ಲಿ ಪರಿಹಾರ ಕಾರ್ಯ ಇತ್ಯಾದಿ ಸವಾಲುಗಳ ನಿರ್ವಹಣೆ**

## ಜನಸೇವೆಯೇ ದಿನಚರಿಯಾದ ಕೊರೋನಾ - ಕೋವಿಡ್ ಸಂಕಷ್ಟಕಾಲ

### ಸಂತ್ರಸ್ತರು, ನಾಗರಿಕರ ಸೇವೆಯಲ್ಲಿ ಶಕ್ತಿಮೀರಿ ದುಡಿದು ಜನರ ಸಂಕಷ್ಟ ನಿವಾರಿಸಿದ ಅರವಿಂದ ಲಿಂಬಾವಳಿ ತಂಡ

**ಶ್ರೀ ನಟರಾಜ್**
ಅಧ್ಯಕ್ಷರು, ಮಹದೇವಪುರ ಕ್ಷೇತ್ರ, ಗ್ರಾಮಾಂತರ ಮಂಡಲ

**ವಿಪತ್ತು ನಿರ್ವಹಣೆ**

**ಮಹದೇವಪುರ ಟಾಸ್ಕ್‌ಫೋರ್ಸ್**

**ಚೀನಾದಿಂದ ಆರಂಭವಾಗಿ ಇಡೀ ಜಗತ್ತನ್ನೇ ನಡುಗಿಸಿದ ಕೊರೋನಾವೈರಸ್ ಮಹಾಪಿಡುಗಿನಿಂದ ಮಹದೇವಪುರ ವಿಧಾನಸಭಾ ಕ್ಷೇತ್ರವೂ ನಲುಗಿತು. 2020ರ ಮಾರ್ಚ್ ನಿಂದ ಆರಂಭವಾದ ಕೋವಿಡ್ ಮಹಾರೋಗದ ದುಷ್ಪರಿಣಾಮವನ್ನು ತಗ್ಗಿಸಲು, ರೋಗಿಗಳನ್ನು ಗುರುತಿಸಿ ಆರೈಕೆ ಮಾಡಲು ಶ್ರೀ ಅರವಿಂದ ಲಿಂಬಾವಳಿಯವರ ನೇತೃತ್ವದ ಕಾರ್ಯಕರ್ತರು - ನಾಗರಿಕರ ತಂಡವು ಯಶಸ್ವಿಯಾಯಿತು.**

ಮಹದೇವಪುರ ಕ್ಷೇತ್ರದಲ್ಲಿ ಸುಮಾರು 92000 ಕ್ಕೂ ಹೆಚ್ಚು ವಲಸಿಗರು, ಬಡ ಕುಟುಂಬದವರು, ಕಟ್ಟಡ ಕೂಲಿ ಕಾರ್ಮಿಕರು ಇದ್ದರು. 35 ಅನಾಥಾಶ್ರಮಗಳು, ಪಾವತಿಸುವ ಅತಿಥಿಗೃಹಗಳಲ್ಲಿ ಇದ್ದ ನೌಕರರು ಲಾಕ್‌ಡೌನ್ ಪ್ರಯುಕ್ತ ಹಿಂತಿರುಗಲು ಸಾಧ್ಯವಾಗದೇ ಇಲ್ಲೇ ಇರಬೇಕಾಯಿತು. ತಕ್ಷಣವೇ ಶ್ರೀ ಅರವಿಂದ ಲಿಂಬಾವಳಿಯವರು ನಾಗರಿಕರು, ಆರೋಗ್ಯ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ, ಕಾರ್ಯಕರ್ತರ ಪಡೆಯನ್ನು ಈ ಮಹಾಪಿಡುಗು ಎದುರಿಸಲು ಸಜ್ಜುಗೊಳಿಸಿದರು.

ಆಶಾ ಕಾರ್ಯಕರ್ತೆಯರಿಗೆ ಆಹಾರ ಧಾನ್ಯ ವಿತರಣೆ

ಬೀದಿ ಬದಿ ವ್ಯಾಪಾರಿಗಳಿಗೆ ನೆರವು

ದೇಶದ ಜನರ ಆರೋಗ್ಯ ರಕ್ಷಣೆಯ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಘೋಷಿಸಿದ ಭಾರತ್ ಲಾಕ್‌ಡೌನ್ ಆರಂಭವಾದ 2020ರ ಮಾರ್ಚ್ 27ರಿಂದ ಮೊದಲ ಅಲೆಯ ಮುಕ್ತಾಯದವರೆಗೆ 131380ದಿನಸಿ ಕಿಟ್‌ಗಳನ್ನು ವಿತರಿಸಲಾಗಿದೆ. ಅಲ್ಲದೇ 28530 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 10 ಕೆ.ಜಿ.ಯಂತೆ ತರಕಾರಿಯನ್ನು ಹಾಗೂ 3000 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 10 ಕೆ.ಜಿ.ಯಂತೆ ಹಣ್ಣುಗಳನ್ನು ವಿತರಿಸಲಾಗಿದೆ.

ಸರ್ಕಾರದ ವತಿಯಿಂದ ಲಾಕ್‌ಡೌನ್ ಘೋಷಣೆಯಾದ ನಂತರ ಪಿ ಜಿ ಗಳಲ್ಲಿ ಉಳಿದಿರುವವರಿಗೆ, ಕ್ಷೇತ್ರವ್ಯಾಪ್ತಿಯಲ್ಲಿ ಇರುವ ಬಡವರಿಗೆ, ರಸ್ತೆ ಬದಿ ಇರುವವರಿಗೆ, ಕ್ಯಾಬ್ ಡ್ರೈವರ್‌ಗಳಿಗೆ, ಗಾರ್ಮೆಂಟ್ ಕೆಲಸದವರು, ಮಂಗಳಮುಖಿ ಯವರುಗಳಿಗೆ ಪಕ್ಷದ ಮುಖಂಡರು ಹಾಗೂ ವಿವಿಧ ಸಂಘ ಸಂಸ್ಥೆಗಳು ಸುಮಾರು 9 ಲಕ್ಷಕ್ಕೂ ಹೆಚ್ಚು ಆಹಾರ ಪ್ಯಾಕೆಟ್‌ಗಳನ್ನು ವಿತರಿಸಿ ಕ್ಷೇತ್ರವ್ಯಾಪ್ತಿಯಲ್ಲಿ ಯಾರೂ ಹಸಿವಿನಿಂದ ಇರದ ಹಾಗೆ ನೋಡಿಕೊಂಡರು.

ಕೋವಿಡ್ ಪರೀಕ್ಷೆಗಳನ್ನು ಮಾಡಿಸುವುದು, ನಿರ್ಬಂಧಿತ ವಲಯಗಳ ರಚನೆ ನಿರ್ವಹಣೆ ಕುರಿತು ಪೊಲೀಸರಿಗೆ ನೆರವಾಗುವುದು, ರೋಗಿಗಳ ಆರೈಕೆ, ಆಸ್ಪತ್ರೆ ಸೇರಿಸುವಿಕೆ ಮುಂತಾದ ಚಟುವಟಿಕೆಗಳಲ್ಲಿ ಆರೋಗ್ಯ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ನೆರವಾಗುವುದು, ರೋಗಿಗಳಿಗೆ ಆಹಾರ, ಹಣ್ಣು ಹಂಪಲುಗಳನ್ನು ಒದಗಿಸುವುದು, ಪಿಡುಗಿಗೆ ಬಲಿಯಾದ ಕುಟುಂಬಗಳ ಮನೆಗೆ ಹೋಗಿ ಸಾಂತ್ವನ ಹೇಳುವುದು - ಹೀಗೆ ಕೋವಿಡ್ ಮಹಾಸಾಂಕ್ರಾಮಿಕ ರೋಗದ ವಿರುದ್ಧ ನಿರಂತರ ಹೋರಾಟ ನಡೆದಿದ್ದು ಈಗ ಇತಿಹಾಸ.

ಕೋವಿಡ್ ದೃಢೀಕೃತ ವ್ಯಕ್ತಿಗಳನ್ನು ಕ್ವಾರಂಟೈನ್ ಮಾಡುವಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ನಮ್ಮ ಸ್ವಯಂಸೇವಕರು/ಕಾರ್ಯಕರ್ತರು/ಆರ್‌ಡಬ್ಲ್ಯೂಎ ಸಹಕರಿಸಿದರು. ಕ್ಷೇತ್ರ ವ್ಯಾಪ್ತಿಯಲ್ಲಿ ಸೋಂಕು ಹರಡದಂತೆ ತಡೆಯಲು ಸಂಬಂದಪಟ್ಟ ಎಲ್ಲಾ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ಆಗಿಂದಾಗ್ಗೆ ನೀಡಲಾಗಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿನ ಪೊಲೀಸ್ ಠಾಣೆಗಳಲ್ಲಿನ ಎಲ್ಲಾ ಸಿಬ್ಬಂದಿಯವರಿಗೆ, ಬೆಸ್ಕಾಂ ಇಲಾಖೆ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತರಿಗೆ, ಆರೋಗ್ಯ ಸಹಾಯಕರಿಗೆ, ಹಾಗೂ ರಸ್ತೆಯಲ್ಲಿ ಮಾಸ್ಕ್ ಇಲ್ಲದೆ ಓಡಾಡುವ ಜನರಿಗೆ ಹಾಗೂ ಕ್ಷೇತ್ರದ ಜನತೆಗೆ ಮೊದಲ ಅಲೆಯ ಕಾಲಾವಧಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಾಸ್ಕ್‌ಗಳನ್ನು ಮತ್ತು 26 ಸಾವಿರಕ್ಕೂ ಹೆಚ್ಚು ಸ್ಯಾನಿಟೈಸರ್ ಬಾಟಲಿಗಳನ್ನು ಮತ್ತು ೪ ಥರ್ಮಲ್ ಸ್ಕ್ಯಾನರ್‌ಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ. ಹಾಗೂ ಜನಜಾಗೃತಿ ಮೂಡಿಸಲು ಮನೆ ಮನೆಗೆ ಭಿತ್ತಿ ಪತ್ರಗಳನ್ನು ಹಂಚಲಾಯಿತು. ಆಟೋಗಳಿಗೆ ಧ್ವನಿವರ್ಧಕ ಅಳವಡಿಸಿ ಜನಜಾಗೃತಿ ಮೂಡಿಸಲಾಯಿತು.

**ಪಕ್ಷದ ಮುಖಂಡರು, ದಾನಿಗಳು, ಕಾರ್ಯಕರ್ತರು, ಆರೋಗ್ಯ ಇಲಾಖೆಯವರು, ಪೊಲೀಸ್ ಇಲಾಖೆಯವರು, ಬಿ.ಬಿ.ಎಂ.ಪಿ. ಇಲಾಖೆ, ಕಂದಾಯ ಇಲಾಖೆ, ತಾಲ್ಲೂಕು ಪಂಚಾಯಿತಿ, ಸ್ವಯಂ ಸೇವಾ ಸಂಘಗಳು ಮತ್ತು ಸಾರ್ವಜನಿಕರು - ಎಲ್ಲರೂ ನಿರಂತರವಾಗಿ ಶ್ರಮಿಸಿದರು. ಶ್ರೀ ಅರವಿಂದ ಲಿಂಬಾವಳಿಯವರು ಸ್ವತಃ ಮಾಸ್ಕ್ ಧರಿಸಿ ಈ ಎಲ್ಲ ಪರಿಹಾರ, ವೈದ್ಯಕೀಯ ನೆರವು, ಸ್ವಚ್ಛತೆ ಕಾರ್ಯಗಳಲ್ಲಿ ಭಾಗಿಯಾಗಿದ್ದರು.**

ನೆರವಿಗಾಗಿ ಸಂಗ್ರಹಿಸಿದ ಆಹಾರ ದಾಸ್ತಾನಿನ ಪರಿಶೀಲನೆ

ಪೌರಕಾರ್ಮಿಕರಿಗೆ ನಿರಂತರ ಆಹಾರ ಧಾನ್ಯ ಪೂರೈಕೆ

# ಕೋವಿಡ್ 2ನೇ ಅಲೆಯಲ್ಲೂ ಸತತ ಸೇವೆ

ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 45 ವರ್ಷ ಮೇಲ್ಪಟ್ಟ 242756 ಜನರಿಗೆ, 18 ರಿಂದ 44ರ ವಯಸ್ಸಿನ 65363 ಜನರಿಗೆ, ಆಸ್ಪತ್ರೆಯ ಸಿಬ್ಬಂದಿಗಳು, ಪೌರ ಕಾರ್ಮಿಕರು ಇತ್ಯಾದಿ 16653 ಫ್ರಂಟ್ ಲೈನ್ ನೌಕರರನ್ನು ಒಳಗೊಂಡಂತೆ ಎರಡನೇ ಅಲೆಯ ಕಾಲದಲ್ಲಿ 324772 ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ.

ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೀಸ್ ಹೋಟೆಲ್, ಹೋಟೆಲ್ ಓಯೋ ಟೌನ್‌ಶಿಪ್, ಜಿಂಕ್ ಹೋಟೆಲ್, ಆಕ್ವೀವ ಹೋಟೆಲ್, ಐವಿರೋಜ ರೆಸಾರ್ಟ್, ಹಾಗೂ ಈಸ್ಟ್ ಪಾಯಿಂಟ್ ಮೆಡಿಕಲ್ ಕಾಲೇಜ್ ಗಳಲ್ಲಿ ಒಟ್ಟು ಆರು ಟ್ರಯಾಜ್ ಸೆಂಟರ್‌ಗಳನ್ನು ಸ್ಥಾಪನೆ ಮಾಡಲಾಯಿತು. ಈ ಟ್ರಯಾಜ್‌ಗಳಲ್ಲಿ 742ಕ್ಕೂ ಸಾರ್ವಜನಿಕರು ಸಂಪೂರ್ಣವಾಗಿ ಗುಣಮುಖರಾಗಿ ಬಿಡುಗಡೆ ಹೊಂದಿದರು.

ಮಹದೇವಪುರ ಕ್ಷೇತ್ರದಲ್ಲಿನ ಕೂಲಿ ಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರಿಗೆ, ಆಟೋ-ಟ್ಯಾಕ್ಸಿ ಚಾಲಕರಿಗೆ, ಕಲಾವಿದರಿಗೆ ಹಾಗೂ ಬಡವರಿಗೆ ಕೊರೋನಾ ೨ನೇ ಅಲೆಯ ಸಂದರ್ಭದಲ್ಲಿ 50 ಸಾವಿರಕ್ಕೂ ಅಧಿಕ ಆಹಾರ/ದಿನಸಿ ಕಿಟ್‌ಗಳನ್ನು ಬಿ.ಜೆ.ಪಿ. ಪಕ್ಷದ ವತಿಯಿಂದ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಸೇರಿ ದೇಣಿಗೆ ಹಾಕಿ ವಿತರಣೆ ಮಾಡಿದರು.

ಕೋವಿಡ್ ನಿರ್ವಹಣೆಗಾಗಿ ರಾಜ್ಯಸರ್ಕಾರದ ಭಾಗವಾಗಿಯೂ ಶ್ರೀ ಅರವಿಂದ ಲಿಂಬಾವಳಿ ಕಾರ್ಯ ನಿರ್ವಹಿಸಿ ಟ್ರಯಾಜ್ ಕೇಂದ್ರಗಳ ಸ್ಥಾಪನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಮಹಾಪಿಡುಗಿನ ಬಗ್ಗೆ ನಡೆದ ಉನ್ನತ ಮಟ್ಟದ ಸಭೆಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಶೇ. 50ರಷ್ಟು ಹಾಸಿಗೆಗಳನ್ನು ಮೀಸಲಿಡುವುದನ್ನು ಖಾತ್ರಿ ಪಡಿಸಿಕೊಳ್ಳುವುದೂ ಸೇರಿದಂತೆ ಹತ್ತಾರು ಜನಸ್ನೇಹಿ ಉಪಕ್ರಮಗಳಲ್ಲಿ ಶ್ರೀ ಅರವಿಂದ ಲಿಂಬಾವಳಿ ಪಾತ್ರ ಮುಖ್ಯವಾಗಿದೆ. ರಾಜ್ಯದಾದ್ಯಂತ ಟ್ರಯಾಜ್ ಆರೈಕೆ ಮತ್ತು ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಬಹುಮುಖ್ಯ ಪರಿಹಾರವನ್ನೂ ಶ್ರೀ ಅರವಿಂದ ಲಿಂಬಾವಳಿಯವರು ಕೈಗೊಂಡರು.

ಮಹದೇವಪುರದ ಆಸ್ಪತ್ರೆಗಳಿಗೆ ನಿರಂತರ ಭೇಟಿ, ಆಹಾರ ಪೊಟ್ಟಣಗಳ - ದಿನಸಿ ಸಾಮಾನುಗಳ ವಿತರಣೆ, ಮಾಸ್ಕ್‌ಗಳ ವಿತರಣೆ, ಸ್ಯಾನಿಟೈಸೇಶನ್ ಅಭಿಯಾನ, ಕೊರೋನಾ ವಾರಿಯರ್‌ಗಳ ಬಗ್ಗೆ ಸತತ ಗಮನ ಮತ್ತು ಬೆಂಬಲ, - ಹೀಗೆ ಮಹಾಪಿಡುಗನ್ನು ನಿಯಂತ್ರಿಸುವ ಹಲವು ಆಯಾಮದ ಚಟುವಟಿಕೆಗಳಲ್ಲಿ ಶ್ರೀ ಅರವಿಂದ ಲಿಂಬಾವಳಿಯವರು ಮುಂಚೂಣಿಯಲ್ಲಿ ನಿಂತು ಓಡಾಡುತ್ತ ಭಾಗಿಯಾಗಿದ್ದರು. ಫ್ರಂಟ್‌ಲೈನ್ ವಾರಿಯರ್‌ಗಳೊಂದಿಗೆ ನೇರ ಸಂಪರ್ಕ ಇಟ್ಟುಕೊಂಡು ಅವರ ಬಗ್ಗೆಯೂ

ವಾಹನ ಚಾಲಕರಿಗೂ ಆಹಾರ ವಿತರಣೆ

ನೆರವು ಅಭಿಯಾನದಲ್ಲಿ ಸ್ವಾಮೀಜಿಗಳ ಮಾರ್ಗದರ್ಶನ

ಕಾಳಜಿ ವಹಿಸಿದರು. ಕೋವಿಡ್‌ನಿಂದ ಮೃತರಾದವರ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದರು; ಅಧಿಕಾರಿಗಳನ್ನು ಸತತವಾಗಿ ಮಾತಾಡಿಸುತ್ತ ಎಲ್ಲ ಬಗೆಯ ಪರಿಹಾರ ಕಾರ್ಯಗಳೂ ನಡೆಯುವಂತೆ ನಿಗಾ ವಹಿಸಿದರು.

ಆರೋಗ್ಯ ಕಾರ್ಯಕರ್ತರು, ಸಾಮಾಜಿಕ ಕಾರ್ಯಕರ್ತರು, ಸುರಕ್ಷತಾ ಸಿಬ್ಬಂದಿ, ಸ್ವಯಂಸೇವಾ ನಾಗರಿಕರು, ಆಶಾ ಕಾರ್ಯಕರ್ತೆಯರು, - ಹೀಗೆ ಕೊರೋನಾ ಪಿಡುಗಿನ ವಿರುದ್ಧ ದಣಿವರಿಯದೆ ಕ್ಷೇತ್ರಕಾರ್ಯ ಮಾಡಿದ ಎಲ್ಲರನ್ನೂ ಅತ್ಯಂತ ಗೌರವಪೂರ್ವಕವಾಗಿ ಆದರಿಸಿ ಸತ್ಕರಿಸಲಾಯಿತು. ಅವರೆಲ್ಲರನ್ನೂ ಹೂವಿನ ಹಾದಿಯಲ್ಲಿ ಸ್ವಾಗತಿಸಿ ಪುಷ್ಪಾರ್ಚನೆಯ ಮೂಲಕ ಅಭಿನಂದಿಸಲಾಯಿತು.

**ಕೊರೋನಾ ಮಹಾಪಿಡುಗಿನ ಕಾಲದ ನೂರಾರು ಸೇವಾಕಾರ್ಯಗಳನ್ನು ಕೆಲವೇ ಪುಟಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಶ್ರೀ ಅರವಿಂದ ಲಿಂಬಾವಳಿಯವರು ಆರಂಭದಿಂದ ಇಂದಿನವರೆಗೂ ಎಡಬಿಡದೆ ಪಿಡುಗಿನ ನಿಯಂತ್ರಣದ ಬಗ್ಗೆ ನಿಗಾ ವಹಿಸಿದರು.**



ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೋನಾ ನಿಭಾವಣೆಯ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಶ್ರೀ ಬಿ ಎಸ್ ಯಡಿಯೂರಪ್ಪ ಜೊತೆ ಚರ್ಚೆ

ಆರೋಗ್ಯ ಮತ್ತು ಇತರೆ ಅಧಿಕಾರಿಗಳೊಂದಿಗೆ ಸಭೆ

ಆಮ್ಲಜನಕ ಸರಬರಾಜಿನ ಬಗ್ಗೆ ಮೇಲ್ವಿಚಾರಣೆ

ಆರೋಗ್ಯ ಸಾಧನ ವಿತರಣೆ

ಆಸ್ಪತ್ರೆಗಳ ಸನ್ನದ್ಧತೆ ಪರಿಶೀಲನೆ

## ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಕೋವಿಡ್ ಕಾಲಾವಧಿಯಲ್ಲಿ ವಿತರಿಸಿದ ಆಹಾರ ಪದಾರ್ಥಗಳು, ಮಾಸ್ಕ್‌ಗಳು, ಸ್ಯಾನಿಟೈಸರ್‌ಗಳು ಮತ್ತು ಆರೋಗ್ಯ ಕಿಟ್‌ಗಳ ಅಂಕಿ - ಅಂಶ

| ಕ್ರ. | ವಾರ್ಡ್ | ಆಹಾರ ಧಾನ್ಯ ಕಿಟ್ | ಹಣ್ಣಿನ ಕಿಟ್ | ತರಕಾರಿ ಕಿಟ್ | ಆಹಾರ ಪೊಟ್ಟಣಗಳು | ಮಾಸ್ಕ್‌ಗಳು | ಸ್ಯಾನಿಟೈಸರ್‌ಗಳು | ಪಿ ಪಿ ಇ ಕಿಟ್‌ಗಳು | ಸ್ಯಾನಿಟೈಸಿಂಗ್ ಸುರಂಗಗಳು |
|---|---|---|---|---|---|---|---|---|---|
| 1 | ಬೆಳ್ಳಂದೂರು | 40350 | - | 6000 | - | 60450 | 8000 | 6500 | ಬೆಳ್ಳಂದೂರು ಪೊಲೀಸ್ ಠಾಣೆ |
| 2 | ಮಾರತ್ತಹಳ್ಳಿ | 7404 | - | - | - | 10200 | 2000 | 2500 | ಮಾರತ್ತಹಳ್ಳಿ ಪೊಲೀಸ್ ಠಾಣೆ |
| 3 | ದೊಡ್ಡನೆಕ್ಕುಂದಿ | 22500 | 2000 | 9000 | - | 34000 | 3800 | 5200 | ಎಚ್‌ಎಎಲ್ ಪೊಲೀಸ್ ಠಾಣೆ, ಎಚ್‌ಎಎಲ್ ಸಂಚಾರ ಪೊಲೀಸ್ ಠಾಣೆ |
| 4 | ಗರುಡಾಚಾರ್ ಪಾಳ್ಯ | 5352 | - | 1000 | - | 8100 | 1500 | 3600 | ಮಹದೇವಪುರ ಪೊಲೀಸ್ ಠಾಣೆ |
| 5 | ಹಗದೂರು | 9000 | - | 2500 | - | 14250 | 2500 | 4400 | ವೈಟ್‌ಫೀಲ್ಡ್ ಪೊಲೀಸ್ ಠಾಣೆ |
| 6 | ವರ್ತೂರು | 15000 | - | 530 | - | 23000 | 3000 | 4700 | ವರ್ತೂರು ಪೊಲೀಸ್ ಠಾಣೆ |
| 7 | ಕೊಡತಿ | 3000 | - | - | - | 4500 | 800 | 1600 | |
| 8 | ಹೂಡಿ | 10150 | 2000 | 7000 | - | 15075 | 2000 | 5100 | |
| 9 | ಕಾಡುಗೋಡಿ | 5100 | - | 2500 | - | 7800 | 1200 | 3600 | ಕಾಡುಗೋಡಿ ಪೊಲೀಸ್ ಠಾಣೆ |
| 10 | ಕನ್ನಮಂಗಲ | 3000 | - | - | - | 4000 | 400 | 2300 | ಕಾಡುಗೋಡಿ ಸಂಚಾರ ಪೊಲೀಸ್ ಠಾಣೆ |
| 11 | ಆವಲಹಳ್ಳಿ | 10100 | - | - | - | 12300 | 1500 | 2300 | ಆವಲಹಳ್ಳಿ ಪೊಲೀಸ್ ಠಾಣೆ |
| 12 | ಬಿದರಹಳ್ಳಿ | 3200 | - | - | - | 4600 | 460 | 1700 | |
| 13 | ಕಣ್ಣೂರು | 15170 | - | - | - | 20100 | 800 | 1900 | ಕೊತ್ತನೂರು ಪೊಲೀಸ್ ಠಾಣೆ |
| 14 | ಮಂಡೂರು | 2160 | - | - | - | 3250 | 450 | 1200 | |
| | ಕಂಟೈನ್‌ಮೆಂಟ್ ವಲಯಗಳು | - | - | - | - | 70000 | 6590 | 5100 | |
| ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ಪ್ರಮಾಣ | | 151486 | 4000 | 28530 | 933410 | 291625 | 35000 | 51700 | |
| | ಆರೋಗ್ಯ ಇಲಾಖೆಗೆ 200 **ಥರ್ಮಲ್ ಸ್ಕ್ಯಾನರ್**‌ಗಳನ್ನು ನೀಡಲಾಗಿದೆ. | | | | | | | | |
| | ಆರೋಗ್ಯ ಇಲಾಖೆಗೆ 200 **ಪಲ್ಸ್ ಆಕ್ಸಿಮೀಟರ್**‌ಗಳನ್ನು ನೀಡಲಾಗಿದೆ. | | | | | | | | |

ಕೋವಿಡ್ ಪಿಡುಗಿನ ಸಮಯದಲ್ಲಿ ಕೆಎಂಎಫ್ ವತಿಯಿಂದ ಹಾಲು ಉತ್ಪಾದಕರಿಗೆ 64.5 ಲಕ್ಷ ರೂ.ಗಳ ವೆಚ್ಚದಲ್ಲಿ ತುಪ್ಪ, ಶುದ್ಧ ಕುಡಿಯುವ ನೀರಿನ ಘಟಕಗಳು, ಪೀಠೋಪಕರಣಗಳು ಮುಂತಾದ ಸೌಲಭ್ಯಗಳನ್ನು ನೀಡಲಾಗಿದೆ.

ಬಿ.ಪ್ಯಾಕ್ ವತಿಯಿಂದ ಆಯೋಜಿಸಿದ್ದ ನಿರ್ಭಯ ಚಾಲಕ ಯೋಜನೆಯಡಿ ಆಟೋ ಮತ್ತು ಕ್ಯಾಬ್ ಚಾಲಕರಿಗೆ ತರಬೇತಿ ಹಾಗೂ ಉಚಿತ ಕೋವಿಡ್ ಲಸಿಕೆ ವಿತರಣಾ ಕಾರ್ಯಕ್ರಮ

ಶ್ರೀ ನರೇಂದ್ರ ಮೋದಿ ಜೀ ರವರ ಹುಟ್ಟುಹಬ್ಬದ ಪ್ರಯುಕ್ತ ಆಟೋ ಚಾಲಕರಿಗೆ ಸಮವಸ್ತ್ರ, ಶಾಲಾ ಮಕ್ಕಳಿಗೆ ನೋಟ್ ಬುಕ್ ಹಾಗೂ ಸಿಹಿ ವಿತರಣೆ

# ಕೊರೋನಾ ವಾರಿಯರ್‌ಗಳಿಗೆ ನಿರಂತರ ನೆರವು

**ಕೊರೋನಾವೈರಸ್ ಮಹಾಪಿಡುಗಿನ ಸಂದರ್ಭದಲ್ಲಿ ಸಾರ್ವಜನಿಕರಿಗೆ ನೆರವಾದ ರೀತಿಯಲ್ಲೇ ಮುಂಚೂಣಿಯಲ್ಲಿದ್ದು ಕೋವಿಡ್ ಪೀಡಿತರ ಆರೈಕೆ ಮಾಡಿದ ಮಹದೇವಪುರ ವಿಧಾನಸಭಾ ಕ್ಷೇತ್ರದ ಪೌರಕಾರ್ಮಿಕರು, ದಾದಿಯರು, ಆಶಾ ಕಾರ್ಯಕರ್ತೆಯರು, ವೈದ್ಯರು, ಚಾಲಕರು, ಪೊಲೀಸರು, ಅಧಿಕಾರಿಗಳು - ಎಲ್ಲರಿಗೂ ಶ್ರೀ ಅರವಿಂದ ಲಿಂಬಾವಳಿಯವರು ಪಕ್ಷದ ಕಾರ್ಯಕರ್ತರು ಹಾಗೂ ದಾನಿಗಳ ನೆರವಿನಿಂದ ನಿಯಮಿತವಾಗಿ ಆಹಾರ, ಆರೋಗ್ಯ ಪರಿಕರಗಳು ಮುಂತಾದವುಗಳನ್ನು ಪೂರೈಸಿದರು.**

# ಕೊರೋನಾ ವಾರಿಯರ್‌ಗಳಿಗೆ ಹೂಮಳೆಯ ಅಭಿನಂದನೆ

**ಕೊರೋನಾವೈರಸ್ ಮಹಾಪಿಡುಗಿನ ಸಂದರ್ಭದಲ್ಲಿ ಜೀವವನ್ನೇ ಪಣಕ್ಕಿಟ್ಟು ಜನರ ಸೇವೆ ಮಾಡಿದ ಮಹದೇವಪುರ ವಿಧಾನಸಭಾ ಕ್ಷೇತ್ರದ ಪೌರಕಾರ್ಮಿಕರು, ದಾದಿಯರು, ಆಶಾ ಕಾರ್ಯಕರ್ತೆಯರು, ವೈದ್ಯರು, ಚಾಲಕರು, ಪೊಲೀಸರು, ಅಧಿಕಾರಿಗಳು - ಎಲ್ಲರನ್ನೂ ಶ್ರೀ ಅರವಿಂದ ಲಿಂಬಾವಳಿಯವರು ಹೂಮಳೆಗರೆದು, ಹೂವಿನ ಹಾದಿಯಲ್ಲಿ ಸ್ವಾಗತಿಸಿ ಮನಸಾರೆ ಅಭಿನಂದಿಸಿದರು.**

# ಮಹಾಮಳೆ-ಪ್ರವಾಹ: ಜಲಾವೃತ ಮಹದೇವಪುರದಲ್ಲಿ ತುರ್ತು ಕ್ರಮ

2022ರ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿಗೆ ಅಪ್ಪಳಿಸಿದ, ಐತಿಹಾಸಿಕ ದಾಖಲೆಯ ಮಹಾಮಳೆಯು ತಗ್ಗುಪ್ರದೇಶವಾದ ಮಹದೇವಪುರದ ಹಲವೆಡೆ ನೆರೆ ಉಂಟು ಮಾಡಿತು. ಮನೆಗಳಿಗೆ ನೀರು ನುಗ್ಗಿತು; ರಸ್ತೆಗಳು ನದಿಯಾದವು. ಆ ದಿನಗಳಲ್ಲಿ ಶ್ರೀ ಅರವಿಂದ ಲಿಂಬಾವಳಿಯವರು ಅಧಿಕಾರಿಗಳು, ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಪಡೆ, ಕಾರ್ಯಕರ್ತರು, ಸ್ವಯಂಸೇವಾ ಕಾರ್ಯಕರ್ತರು ಎಲ್ಲರನ್ನೂ ಒಳಗೊಂಡಂತೆ ಬೃಹತ್ ಪರಿಹಾರ ಅಭಿಯಾನವನ್ನು ಕೈಗೊಂಡರು. ಹಿಂದಿನಿಂದಲೂ ಜಾರಿಯಲ್ಲಿದ್ದ ರಾಜಕಾಲುವೆ ಒತ್ತುವರಿ ತೆರವನ್ನು ಚುರುಕುಗೊಳಿಸಿದರು.

- **ಈ ಮಳೆಯಿಂದ ಸಂತ್ರಸ್ತರಾದವರಿಗೆ ನೀಡಿದ ನೆರವಿನ ವಿವರವನ್ನು ಪ್ರತ್ಯೇಕ ಕೋಷ್ಟಕದಲ್ಲಿ ನೀಡಿದೆ.**

FIRE
SDRF

JCB

TATAHITACHI

## ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿನ ಜನರಿಗೆ ವಿತರಣೆಗಳ ವಿವರ (ಸೆ.2022)

| ಕ್ರ. | ವಾರ್ಡ್ | ಮಳೆಯಿಂದ ನೀರು ತುಂಬಿದ ಸ್ಥಳಗಳು | ಹಾಲು | | ನೀರಿನ ಕ್ಯಾನ್ | | ಇತರೆ |
|---|---|---|---|---|---|---|---|
| | | | ಬಿಬಿಎಂಪಿ | ಕಾರ್ಯಕರ್ತರಿಂದ | ಬಿಬಿಎಂಪಿ | ಕಾರ್ಯಕರ್ತರಿಂದ | ಕಾರ್ಯಕರ್ತರಿಂದ |
| 1 | ವೈಟ್ ಫೀಲ್ಡ್ | ಡಿಎನ್ಎ ಅಪಾರ್ಟ್ಮೆಂಟ್ | - | - | 500 | - | - |
| 2 | ಹಗದೂರು | ಇಮ್ಮಡಿಹಳ್ಳಿ ಕೈತೋಟ ರಸ್ತೆ | - | - | - | - | - |
| 3 | ಹಗದೂರು | ಹಗದೂರು ವಾರ್ಡ್ | - | - | - | - | - |
| 4 | ಕಾಡುಗೋಡಿ | ಸಿದ್ದಾರ್ಥ ಲೇಔಟ್ & ರಾಮಯ್ಯ ಗಾರ್ಡನ್ | - | - | 200 | - | - |
| 5 | ಮುನ್ನೇಕೊಳಾಲ | ಪಾಪಯ್ಯ ರೆಡ್ಡಿ ಲೇಔಟ್, ಮುನ್ನೇಕೊಳಾಲ | 1000 ಲೀ | 600 ಲೀ | 300 | - | 4000 ನೀರಿನ ಬಾಟಲ್ |
| 6 | ಮುನ್ನೇಕೊಳಾಲ | ಮುನ್ನೇಕೊಳಾಲ ವಾರ್ಡ್ | - | - | - | - | - |
| 7 | ಬೆಳ್ಳಂದೂರು | ಸ್ಟರ್ಲಿಂಗ್ ಅಪಾರ್ಟ್ಮೆಂಟ್ ಎಕೋ ಸ್ಪೇಸ್ ಮುಂಭಾಗ, ರೈನ್ಬೋ ಡ್ರೈವ್, ಗ್ರೀನ್ ವುಡ್ ರೆಜೆನ್ಸಿ | - | - | 250 | 100 | - |
| 8 | ಬೆಳ್ಳಂದೂರು | ಕರಿಯಮ್ಮನ ಅಗಹಾರ | - | - | - | - | 2 ಕ್ಯಾಂಡಲ್ ಬಾಕ್ಸ್, 2 ನೀರಿನ ಟ್ಯಾಂಕರ್ |
| 9 | ಬೆಳ್ಳಂದೂರು | ಬೆಳ್ಳಂದೂರು ಕೋಡಿ | - | - | - | - | - |
| 10 | ಬೆಳ್ಳಂದೂರು | ಯಮಲೂರು | - | - | - | - | - |
| 11 | ಬೆಳ್ಳಂದೂರು | ಬೆಳ್ಳಂದೂರು ವಾರ್ಡ್ | - | - | - | - | - |
| 12 | ದೊಡ್ಡಕನ್ನೆಲ್ಲಿ | ನಾರಾಯಣರೆಡ್ಡಿ ಗಾರ್ಡನ್, ಚೌಳಕೆರೆ | - | - | 50 | - | - |
| 13 | ದೊಡ್ಡಕನ್ನೆಲ್ಲಿ | ಜುನ್ನಸಂದ್ರ | - | 50 ಲೀ | - | - | 25 ಪೌಂಡ್ ಬ್ರೆಡ್ |
| 14 | ದೊಡ್ಡಕನ್ನೆಲ್ಲಿ | ಗ್ರೀನ್ ವುಡ್, ಕೈಕೊಂಡ್ರಹಳ್ಳಿ | | | | 200 | |
| 15 | ಮಾರತ್ತಹಳ್ಳಿ | ದಿವ್ಯಶ್ರೀ ಅಪಾರ್ಟ್ಮೆಂಟ್ | - | - | 250 | - | - |
| 16 | ಮಾರತ್ತಹಳ್ಳಿ | ಮಾರತ್ತಹಳ್ಳಿ | - | 600 ಲೀ | - | 100 | 150 ಕೆಜಿ ಸಕ್ಕರೆ |
| 17 | ದೊಡ್ಡನೆಕ್ಕುಂದಿ | ಟಿ.ಎನ್.ಆರ್ ವೈಷ್ಣವಿ ಅಪಾರ್ಟ್ಮೆಂಟ್ | - | - | 250 | - | - |
| 18 | ದೊಡ್ಡನೆಕ್ಕುಂದಿ | ದೊಡ್ಡನೆಕ್ಕುಂದಿ ವಾರ್ಡ್ | - | - | - | - | - |
| 19 | ಕೊಡತಿ | ರಾಧಾರೆಡ್ಡಿ ಲೇಔಟ್, ಹಾಲನಾಯಕನಹಳ್ಳಿ | - | 100 ಲೀ | - | 100 | - |
| 20 | ಬೆಳತೂರು | ಕೀರ್ತಿ ಹೈಲೈಟ್ ಮಹಾವೀರ್ ಅಪಾರ್ಟ್ಮೆಂಟ್ | - | 155 ಲೀ | - | 100 | 257 ಪೌಂಡ್ ಬ್ರೆಡ್, 200 ನೀರಿನ ಬಾಟಲ್ |
| | | **ಒಟ್ಟು** | 1000 ಲೀ | 1505 ಲೀ | 1800 | 600 | |

# ನಾಡಿಗೆ ನೆರೆ: ಮಹದೇವಪುರ ಸ್ಪಂದನೆ

**2019ರಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಉಂಟಾದ ನೆರೆ ಸಂದರ್ಭದಲ್ಲಿ ಮಹದೇವಪುರದ ಜನತೆಯ ಪರವಾಗಿ ಶ್ರೀ ಅರವಿಂದ ಲಿಂಬಾವಳಿಯವರು ಬಟ್ಟೆ , ಆಹಾರ, ಅತ್ಯಾವಶ್ಯಕ ವಸ್ತುಗಳನ್ನು ಸಂಗ್ರಹಿಸಿ ಕಳಿಸಿಕೊಡುವ ನಾಯಕತ್ವ ವಹಿಸಿದರು. ರೂ. 45,03,317 ಗಳು ಮತ್ತು ಸುಮಾರು 56 ಲಕ್ಷ ರೂಗಳ ಆಹಾರ ಸಾಮಗ್ರಿ ಮತ್ತು ನಿತ್ಯ ಬಳಕೆಯ ಸಾಮಗ್ರಿಗಳನ್ನು ಕಳಿಸಿಕೊಡಲಾಯಿತು. ಹಲವು ಶಾಸಕರು ಅವರ ನೆರವನ್ನು ಹೃತ್ಪೂರ್ವಕ ಅಭಿನಂದಿಸಿದ್ದಾರೆ.**

## 2018ರ ಚುನಾವಣಾ ಪ್ರಣಾಳಿಕೆಯಲ್ಲಿ
## ಶ್ರೀ ಅರವಿಂದ ಲಿಂಬಾವಳಿ ಕೊಟ್ಟ ಭರವಸೆಗಳನ್ನು ಜಾರಿಗೊಳಿಸಿದ ಬಗ್ಗೆ

# ಸಂಕ್ಷಿಪ್ತ ರಿಪೋರ್ಟ್ ಕಾರ್ಡ್ (2018-23)

| ಕ್ರ. | 2018ರ ಭರವಸೆ | 2023ರ ರಿಪೋರ್ಟ್ ಕಾರ್ಡ್ |
|---|---|---|
| 1 | • ಮಹದೇವಪುರ ಕ್ಷೇತ್ರಕ್ಕಾಗಿ ಒಂದು ಕಾರ್ಯಪಡೆಯನ್ನು ರಚಿಸುವುದು ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನೂ ಗಮನಿಸಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದು | • ಮಹದೇವಪುರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ನಿಗಾ ವಹಿಸಲು ಮಹದೇವಪುರ ಕಾರ್ಯಪಡೆಯನ್ನು 2018ರಲ್ಲೇ ಸ್ಥಾಪಿಸಲಾಗಿದೆ. ಕಾರ್ಯಪಡೆಯ ಬಗ್ಗೆ ಪ್ರತ್ಯೇಕ ಅಧ್ಯಾಯವನ್ನೇ ನೀಡಲಾಗಿದೆ. |
| 2 | • ಕ್ಷೇತ್ರದ ಮೇಲ್ಸೇತುವೆ, ಅಂಡರ್‌ಪಾಸ್, ಸ್ಕೈವಾಕ್, ಪಾದಚಾರಿ ಮಾರ್ಗಗಳು, ಸಂಪರ್ಕ ರಸ್ತೆಗಳು ಮುಂತಾದ ಬಾಕಿ ಉಳಿದ ಕಾರ್ಯಗಳನ್ನು ಪೂರ್ಣಗೊಳಿಸುವುದು | • 2018 ರಲ್ಲಿ ಬಾಕಿ ಇದ್ದ ಇಂತಹ ಬಹುತೇಕ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಬಗ್ಗೆ ಅಭಿವೃದ್ಧಿ ಕಾಮಗಾರಿ ಪಟ್ಟಿಗಳಲ್ಲಿ ಸಂಪೂರ್ಣ ಮಾಹಿತಿ ನೀಡಲಾಗಿದೆ. |
| 3 | • ಮೇಲ್ಸೇತುವೆಗಳನ್ನು ಕಟ್ಟುವುದರ ಜೊತೆಗೇ ಸಾರ್ವಜನಿಕರು ರಸ್ತೆ ದಾಟಲು ಮತ್ತು ಓಡಾಡಲು ಪಾದಚಾರಿ ಮಾರ್ಗಗಳನ್ನು ನಿರ್ಮಿಸುವುದು | • ಹಲವು ಪಾದಚಾರಿ ಮಾರ್ಗಗಳ ಕಾಮಗಾರಿ ಪೂರ್ಣಗೊಂಡಿದೆ; ಬಾಕಿ ಕೆಲವು ಪಾದಚಾರಿ ಮಾರ್ಗಗಳ ಕಾಮಗಾರಿ ಪ್ರಗತಿಯಲ್ಲಿದೆ. |
| 4 | • ಜನತೆಗೆ ರಸ್ತೆಗಳನ್ನು ದಾಟುವುದೇ ಒಂದು ಸವಾಲಾಗಿದೆ. ಆದ್ದರಿಂದ ಸ್ಕೈವಾಕ್ ಸ್ಥಾಪನೆ ಅಭಿಯಾನವನ್ನು ಕೈಗೊಳ್ಳಲಾಗುವುದು ಮತ್ತು ಮುಂದಿನ ಐದು ವರ್ಷಗಳಲ್ಲಿ ಹಲವಾರು ಸ್ಕೈವಾಕ್‌ಗಳನ್ನು ನಿರ್ಮಿಸಲಾಗುವುದು. | • 2018ರಲ್ಲಿ ಪ್ರಗತಿಯಲ್ಲಿದ್ದ ಎಲ್ಲಾ ಸ್ಕೈವಾಕ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಮಾರತ್ತಹಳ್ಳಿ ಒಎಆರ್ ರಸ್ತೆ ಮತ್ತು ಕುಂದಲಹಳ್ಳಿ ಜಂಕ್ಷನ್ ಬಳಿ - ಹೀಗೆ ಎರಡು ಸ್ಕೈವಾಕ್‌ಗಳ ನಿರ್ಮಾಣವು ಭೂಸ್ವಾಧೀನ ಅಗತ್ಯದಿಂದಾಗಿ ಆರಂಭಿಸಬೇಕಿದೆ (ಹೊಸ ಸ್ಕೈವಾಕ್‌ಗಳ ಪಟ್ಟಿ ಪ್ರತ್ಯೇಕವಾಗಿ ನೀಡಿದೆ) |
| 5 | • ಕೆರೆಗಳ ಶುದ್ಧೀಕರಣ, ಘನತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆ, ಮಳೆನೀರು ಕಾಲುವೆಗಳ ಬಲಪಡಿಸುವಿಕೆ, ಒತ್ತುವರಿ ತೆರವು | • ಈ ಕಾರ್ಯಗಳನ್ನು ನಿರಂತರವಾಗಿ ಕೈಗೊಂಡಿದ್ದು ಇತ್ತೀಚೆಗೆ ಒತ್ತುವರಿ ತೆರವು ಕಾರ್ಯವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ಈ ಕಾರ್ಯವು ಇನ್ನೂ ಮುಂದುವರಿಯಲಿದೆ. |

| ಕ್ರ. | 2018ರ ಭರವಸೆ | 2023ರ ರಿಪೋರ್ಟ್ ಕಾರ್ಡ್ |
|---|---|---|
| 6 | • ಮಹದೇವಪುರ ಕ್ಷೇತ್ರದಲ್ಲಿ ಕನ್ನಡ ಸಂಬಂಧಿತ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ; ಮಹದೇವಪುರ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸುವುದು. | • ಕ್ಷೇತ್ರದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಕನ್ನಡದ ಕಾರ್ಯಕ್ರಮಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಅಂಬೇಡ್ಕರ್ ಜಯಂತಿ, ಕೆಂಪೇಗೌಡ ಜಯಂತಿ, ವೇಮನ ಜಯಂತಿ, 75ನೇ ಸ್ವಾತಂತ್ರೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮ, ಕುಟುಂಬ ಮಿಲನ, ಕನಕದಾಸರ ಜಯಂತಿ, ವಾಲ್ಮೀಕಿ ಜಯಂತಿ, ಬಸವ ಜಯಂತಿ, ಸಂಕ್ರಾಂತಿ ಉತ್ಸವ, ಛಟ್ ಪೂಜಾ, ದುರ್ಗಾ ಪೂಜೆಗಳು, ಕಾಳಿ ಪೂಜೆ, - ಇವುಗಳನ್ನು ಅತ್ಯಂತ ಸಂಭ್ರಮ ಸಡಗರಗಳಿಂದ ನಡೆಸಲಾಗಿದೆ. |
| 7 | • ಐಟಿ ಸಮುದಾಯವೂ ಸೇರಿದಂತೆ ಹಲವು ರಂಗಗಳ ಪ್ರತಿನಿಧಿಗಳ ಸಲಹೆ ಸೂಚನೆಗಳನ್ನು ಗಮನಕ್ಕೆ ತೆಗೆದುಕೊಂಡು ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸುವುದು. | • ಇಂತಹ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಶ್ರೀ ಅರವಿಂದ ಲಿಂಬಾವಳಿಯವರು ಬೆಂಗಳೂರಿನ ಮಹತ್ವದ ಐಟಿ ಶೃಂಗಸಭೆಗಳಲ್ಲಿ , ಪ್ರಶಸ್ತಿ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ.<br>• ಹಲವೆಡೆ ಆರ್ ಡಬ್ಲ್ಯು ಎ ಗಳ ರಚನೆ, ಐ.ಟಿ.ಮಿಲನ, ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಪ್ರಾಯೋಜಕತ್ವ ನೀಡಿದ ದಾನಿ ಸಂಸ್ಥೆಗಳಿಗೆ ಸನ್ಮಾನ, ಐ.ಟಿ. ಕಂಪನಿಗಳ ಸಹಯೋಗದೊಂದಿಗೆ ವಿವಿಧ ಮ್ಯಾರಥಾನ್ ಗಳು ನಡೆದಿವೆ. |
| 8 | • ಸಾರ್ವಜನಿಕರಿಗೆ ಸಮಸ್ಯೆ ಆಗದಂತೆ ರಸ್ತೆಗಳ ವಿನ್ಯಾಸ; ಅಗತ್ಯ ಬಿದ್ದರೆ ಪರ್ಯಾಯ ರಸ್ತೆಗಳ ನಿರ್ಮಾಣ. | • ಕೆಲವು ಪರ್ಯಾಯ ರಸ್ತೆಗಳನ್ನು ನಿರ್ಮಿಸಲಾಗಿದೆ; ಇನ್ನೂ ಕೆಲವು ಪ್ರಗತಿಯಲ್ಲಿವೆ.<br>• (ಹೊಸ ಪರ್ಯಾಯ ರಸ್ತೆಗಳ ಪಟ್ಟಿ ಪ್ರತ್ಯೇಕವಾಗಿ ನೀಡಿದೆ) |
| 9 | • ಟಿನ್ ಫ್ಯಾಕ್ಟರಿಯಿಂದ ವೈಟ್‌ಫೀಲ್ಡ್‌ವರೆಗೆ ಮೆಟ್ರೋ ರೈಲು ಜಾಲದ ವಿಸ್ತರಣೆ. | • ಈ ಕಾರ್ಯವು ನಡೆಯುತ್ತಿದ್ದು ಪ್ರಗತಿಯಲ್ಲಿದೆ. |
| 10 | • ಕಾಡುಗೋಡಿಯಿಂದ ಹಳೆ ಮದ್ರಾಸ್ ರಸ್ತೆ, ಕಾಟಂನಲ್ಲೂರುವರೆಗೆ ಮೆಟ್ರೋ ಸೇವೆಯ ವಿಸ್ತರಣೆ<br>• ಸರ್ಜಾಪುರ - ಇಬ್ಬಲೂರು ಮೆಟ್ರೋ | • ಇದು ಈಗ ಪರಿಶೀಲನೆಯ ಹಂತದಲ್ಲಿದ್ದು ಮುಂದಿನ ಹಂತದಲ್ಲಿ ಕೈಗೆತ್ತಿಕೊಳ್ಳಲಾಗುವುದು.<br>• ಸರ್ಜಾಪುರ - ಇಬ್ಬಲೂರು ಮೆಟ್ರೋ ಸಮೀಕ್ಷೆ ಆರಂಭವಾಗಿದೆ. |
| 11 | • ಪೂರ್ವ ವಿಮಾನ ನಿಲ್ದಾಣ ಅಪ್ರೋಚ್ ರಸ್ತೆ | • ಮಹದೇವಪುರ ಕ್ಷೇತ್ರವನ್ನೂ ಮೀರಿ ವ್ಯಾಪ್ತಿ ಹೊಂದಿರುವ ಇವೆರಡೂ ಯೋಜನೆಗಳು ಪರಿಶೀಲನೆಯ ಹಂತದಲ್ಲಿವೆ. |

| ಕ್ರ. | 2018ರ ಭರವಸೆ | 2023ರ ರಿಪೋರ್ಟ್ ಕಾರ್ಡ್ |
|---|---|---|
| 12 | • ಕೆ ಆರ್ ಪುರಂ - ಹೊಸಕೋಟೆ ಎಲೆವೇಟೆಡ್ ರಸ್ತೆಯನ್ನು ಬೈಯಪ್ಪನಹಳ್ಳಿಯವರೆಗೂ ವಿಸ್ತರಿಸುವುದು | • ಇದೂ ಸಹ ಮೇಲಿನ ಯೋಜನೆಯೊಂದಿಗೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. |
| 13 | • ಎಲೆಕ್ಟ್ರಾನಿಕ್ ಸಿಟಿಯಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಪ್ರೋಚ್ ರಸ್ತೆ ನಿರ್ಮಾಣ | • ಪೂರ್ವ ವಿಮಾನ ನಿಲ್ದಾಣ ಅಪ್ರೋಚ್ ರಸ್ತೆಯು ಪ್ರಗತಿಯಲ್ಲಿದೆ. |
| 14 | • ಎರಡು ವಾರ್ಡ್‌ಗಳಿಗೆ ಮಂಜೂರಾದ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸುವುದು. | • ಈ ಎರಡೂ ಘನತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆ ಕಾರ್ಯವು ಅಂತಿಮ ಹಂತದಲ್ಲಿದೆ. |
| 15 | • ರಾಜಕಾಲುವೆಗಳನ್ನು ಶುದ್ಧೀಕರಿಸಿ ಅವುಗಳ ಸಂಪರ್ಕಜಾಲವನ್ನು ಮರುಸ್ಥಾಪಿಸುವುದು. | • ಇದನ್ನು ನಿರಂತರವಾಗಿ ಮಾಡಲಾಗುತ್ತಿದೆ. |
| 16 | • ಸಾರ್ವಜನಿಕ ನಿವೇಶನಗಳ ಒತ್ತುವರಿಗಳನ್ನು ತೆರವುಗೊಳಿಸಿ ಅವುಗಳನ್ನು ಸಾರ್ವಜನಿಕ ಉದ್ದೇಶಗಳಿಗೇ ಮೀಸಲಾಗಿಡುವುದು | • ಇದನ್ನೂ ಸಹ ನಿರಂತರವಾಗಿ ಮಾಡಲಾಗುತ್ತಿದೆ. |
| 17 | • ಮಹದೇವಪುರ ಕ್ಷೇತ್ರದಲ್ಲಿ ಬೈಸಿಕಲ್ ಸೇವೆಯನ್ನು ಆರಂಭಿಸಲು ಗಂಭೀರ ಪ್ರಯತ್ನ ಮಾಡಲಾಗುವುದು. ಇದನ್ನು ಬೆಂಗಳೂರಿನ ಮಾದರಿ ವ್ಯವಸ್ಥೆಯಾಗಿ ರೂಪಿಸಲಾಗುವುದು. | • ಇದನ್ನು ಆರಂಭಿಸಲಾಗಿದ್ದು ಮೆಟ್ರೋ ಮತ್ತು ಔಟರ್ ರಿಂಗ್ ರಸ್ತೆ ಕಾಮಗಾರಿಗಳಿಂದಾಗಿ ನಿಲ್ಲಿಸಲಾಗಿದೆ. ಮೆಟ್ರೋ ಕಾಮಗಾರಿ ಮುಗಿದ ಕೂಡಲೇ ಇದನ್ನು ಕೈಗೆತ್ತಿಕೊಳ್ಳಲಾಗುವುದು. |
| 18 | • ನಗರ - ಗ್ರಾಮಾಂತರ ಪ್ರದೇಶಗಳನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಮರಗಳ ಸಂಖ್ಯೆ ಕಡಿಮೆಯಾಗಿದ್ದು ಕೆರೆಗಳ ಸುತ್ತ, ರಸ್ತೆಗಳ ಬದಿಗಳಲ್ಲಿ ಮರಗಳನ್ನು ಬೆಳೆಸಲು ಕ್ರಮ. | • ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ 50 ಸಾವಿರ ಸಸ್ಯಗಳನ್ನು ಕ್ಷೇತ್ರದಾದ್ಯಂತ ನೆಡಲಾಗಿದೆ. ಕಾಡುಗೋಡಿ ಮತ್ತು ಗುಂಜೂರುಗಳಲ್ಲಿ ಟ್ರೀ ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಅಟಲ್ ಬಿಹಾರಿ ವಾಜಪೇಯಿ ಮಿನಿ ಲಾಲ್‌ಬಾಗನ್ನೂ ಸ್ಥಾಪಿಸಲಾಗಿದೆ. |
| 19 | • ಈಗಾಗಲೇ ಕ್ಷೇತ್ರದಲ್ಲಿ ನೆಲೆಸಿರುವ ಶಾಂತಿ ಸುವ್ಯವಸ್ಥೆಯನ್ನು ಮುಂದುವರಿಸುವುದು ಮತ್ತು ಅಪರಾಧ ಮುಕ್ತ ಕ್ಷೇತ್ರವನ್ನಾಗಿ ಮಾಡುವುದು. | • ಇಡೀ ಕ್ಷೇತ್ರದಲ್ಲಿ ಶಾಂತಿಯುತ ಮತ್ತು ಸ್ವತಂತ್ರ ವಾತಾವರಣವನ್ನು ಮೂಡಿಸಲಾಗಿದೆ; ಅಪರಾಧ ಪ್ರಕರಣಗಳು ತಗ್ಗಿವೆ. |

| ಕ್ರ. | 2018ರ ಭರವಸೆ | 2023ರ ರಿಪೋರ್ಟ್ ಕಾರ್ಡ್ |
|---|---|---|
| 20 | • ಮಹದೇವಪುರದಲ್ಲಿ ಮನೆಯಿಲ್ಲದವರಿಗೆ ಮನೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಲಾಗುವುದು. ಹಕ್ಕುಪತ್ರಗಳನ್ನು ವಿತರಿಸಲೂ ಆದ್ಯತೆ ನೀಡಲಾಗುವುದು. | • ಇದನ್ನೂ ಸಹ ನಿರಂತರವಾಗಿ ಮಾಡಲಾಗುತ್ತಿದೆ. ಈ ಅವಧಿಯಲ್ಲಿ 3411 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಅಲ್ಲದೆ ನಿವೇಶನ ಹೊಂದಿರುವವರಿಗೆ 169 ಮನೆಗಳನ್ನು ಸಹಾ ನೀಡಲಾಗುತ್ತಿದ್ದು 9 ಮನೆಗಳು ಪೂರ್ಣಗೊಂಡಿವೆ. |
| 21 | • ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ದೊರೆಯುವಂತೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. | • ಐಟಿ ಸಂಸ್ಥೆಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದು ಈ ಕುರಿತು ಸದಾ ನಿಗಾ ವಹಿಸಲಾಗಿದೆ. ಕನ್ನಡಿಗರು ಗಮನಾರ್ಹ ಸಂಖ್ಯೆಯಲ್ಲಿ ಸೇರ್ಪಡೆಯಾಗುವಂತೆ ಪ್ರಯತ್ನಿಸಲಾಗಿದೆ. |
| 22 | • ಯುವ ಸಮುದಾಯಕ್ಕೆ ಉದ್ಯೋಗ ನೀಡಲು ಉದ್ಯೋಗ ಮೇಳಗಳನ್ನು ನಡೆಸುವುದು; ಆರೋಗ್ಯ ಪಾಲನೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು, ಕ್ರೀಡಾ ಮೇಳಗಳನ್ನು ಸಂಘಟಿಸುವುದು. | • ಕೊರೋನಾ ಮಹಾಪಿಡುಗಿನಿಂದಾಗಿ ಇಂತಹ ಮೇಳಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಡೆಸಲಾಗಿಲ್ಲ. ಆದರೆ ಈ ನಿಟ್ಟಿನಲ್ಲಿ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಲ್ಲದೇ ಆರೋಗ್ಯದ ಜಾಗೃತಿಗೆ ನಿರಂತರ ಅಭಿಯಾನಗಳನ್ನು ನಡೆಸಲಾಗಿದೆ. |
| 23 | • ಆರೋಗ್ಯ ಕೇಂದ್ರಗಳು, ಶಾಲೆ - ಕಾಲೇಜು - ಪಾಲಿಟೆಕ್ನಿಕ್ ಕಟ್ಟಡಗಳ ನಿರ್ಮಾಣ, ಇತರೆ ಸೌಲಭ್ಯಗಳ ನೀಡಿಕೆ | • ಕಾಡುಗೋಡಿ ಕಾಲೇಜಿನ ನಿರ್ಮಾಣ ಪ್ರಗತಿಯಲ್ಲಿದೆ; ಬಾಕಿ ಉಳಿದ ಶಾಲೆ- ಪಾಲಿಟೆಕ್ನಿಕ್ ನಿರ್ಮಾಣಗಳು ಪೂರ್ಣಗೊಂಡಿವೆ. ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ ಪ್ರಗತಿಯಲ್ಲಿದೆ. |
| 24 | • ಕಾವೇರಿ ನೀರು ಸೌಲಭ್ಯವನ್ನು ಬಿಬಿಎಂಪಿಯಲ್ಲಿ ವಿಲೀನವಾದ 31 ಹಳ್ಳಿಗಳಿಗೂ ವಿಸ್ತರಿಸುವುದು | • ಕಾವೇರಿ ಐದನೆಯ ಹಂತದ ಕೊಳವೆ ಸ್ಥಾಪನೆ ಪ್ರಗತಿಯಲ್ಲಿದೆ; ಪರ್ಯಾಯ ಪೈಪ್‌ಲೈನ್ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದೆ. |
| 25 | • ಕೆರೆಗಳ ಅಭಿವೃದ್ಧಿಗೆ, ರಾಜಕಾಲುವೆ, ಒಳಚರಂಡಿ ವ್ಯವಸ್ಥೆಗೆ ಗಮನ ನೀಡುವುದು | • ಎಲ್ಲಾ ಕೆರೆಗಳ ಅಭಿವೃದ್ಧಿ ಕಾರ್ಯಗಳು ಸತತ ನಡೆಯುತ್ತಿವೆ; ಒಳಚರಂಡಿ ನಿರ್ಮಾಣವು ಬಹುತೇಕ ಪೂರ್ಣಗೊಂಡಿದೆ; ಕೊಳಚೆ ಶುದ್ಧೀಕರಣ ಘಟಕಗಳ ನಿರ್ಮಾಣ ಪ್ರಗತಿಯಲ್ಲಿದೆ. ರಾಜಕಾಲುವೆ ಕಾಮಗಾರಿಗಳೂ ಪ್ರಗತಿಯಲ್ಲಿವೆ. |
| 26 | • ಕ್ಷೇತ್ರದಲ್ಲಿ ಉದ್ಯಾನವನಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದು | • ಕ್ಷೇತ್ರಕ್ಕೆ ಆರು ಹೊಸ ಉದ್ಯಾನವನಗಳು ಸೇರ್ಪಡೆಯಾಗಿದೆ. |
| 27 | • ಪ್ರತಿಯೊಂದು ಮನೆಗೂ ಎಲ್‌ಪಿಜಿ ಗ್ಯಾಸ್ ಪೈಪ್ ಸಂಪರ್ಕ ಕೊಡಿಸುವುದು | • ಈ ಕಾರ್ಯವೂ ಈಗ ಪ್ರಗತಿಯಲ್ಲಿದೆ. **(ವಿವರಗಳು ಬೇರೆ ಪುಟದಲ್ಲಿವೆ)** |

# ಮಹದೇವಪುರ ಟಾಸ್ಕ್ ಫೋರ್ಸ್

ಮಹದೇವಪುರ ವಿಧಾನಸಭಾ ಕ್ಷೇತ್ರದಿಂದ ಮೂರನೆಯ ಸಲ ಸತತವಾಗಿ ಆಯ್ಕೆಯಾದ ಕೂಡಲೇ ಶ್ರೀ ಅರವಿಂದ ಲಿಂಬಾವಳಿಯವರು ಸ್ಥಾಪಿಸಿದ ಅತಿಮುಖ್ಯ ವ್ಯವಸ್ಥೆ ಎಂದರೆ **ಮಹದೇವಪುರ ಟಾಸ್ಕ್‌ಫೋರ್ಸ್** - MTF. ಆರು ತಿಂಗಳುಗಳ ಪೂರ್ವತಯಾರಿಯೊಂದಿಗೆ 2018ರ ನವೆಂಬರಿನಲ್ಲಿ ಆರಂಭವಾದ ಮಹದೇವಪುರ ಟಾಸ್ಕ್‌ಫೋರ್ಸ್ ಇಂದಿಗೂ ಅತ್ಯಂತ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಶ್ರೀ ಅರವಿಂದ ಲಿಂಬಾವಳಿಯವರು ಕ್ಷೇತ್ರದ ಜನತೆಯಲ್ಲಿ ಇಟ್ಟಿರುವ ವಿಶ್ವಾಸ ಮತ್ತು ಜನಸಂಪರ್ಕದ ಮೂಲಕವೇ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು. **ಇಂತಹ ನಾಗರಿಕ ಕೇಂದ್ರಿತ ವ್ಯವಸ್ಥೆಯು ಭಾರತದಲ್ಲೇ ಅತ್ಯಂತ ವಿಶಿಷ್ಟ ಉಪಕ್ರಮವೆಂದು ಪರಿಗಣಿತವಾಗಿದೆ.**

ಈ ಕಾರ್ಯಪಡೆಯನ್ನು ಶ್ರೀ ಅರವಿಂದ ಲಿಂಬಾವಳಿಯವರು ಗಣ್ಯರ, ಕಾರ್ಯಕರ್ತರ ಸಮ್ಮುಖದಲ್ಲಿ ಕಾರ್ಯಪಡೆಯ ಲಾಂಛನವನ್ನು ಅನಾವರಣ ಮಾಡುವ ಮೂಲಕ ಉದ್ಘಾಟಿಸಿದರು.

ಈ ಮಹತ್ವದ ಕಾರ್ಯಕ್ರಮದಲ್ಲಿ ಸ್ವಯಂಸ್ಫೂರ್ತಿಯಿಂದ ಅಭಿವೃದ್ಧಿ ಕಾರ್ಯದಲ್ಲಿ ಜೋಡಿಸಿಕೊಳ್ಳಲು ನೋಂದಾಯಿಸಿದ 350ಕ್ಕೂ ಹೆಚ್ಚು ನಾಗರಿಕರು ಸೇರಿದಂತೆ 9700ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಶನ್‌ಗಳಿಂದಲೂ ಗಮನಾರ್ಹ ಸಂಖ್ಯೆಯಲ್ಲಿ ಸಕ್ರಿಯ ನಾಗರಿಕರು ಭಾಗವಹಿಸಿದರು.

ಮಹದೇವಪುರ ಕಾರ್ಯಪಡೆಯ ಸಂಚಾಲನಾ ಸಮಿತಿಯನ್ನು ಶ್ರೀ ಅರವಿಂದ ಲಿಂಬಾವಳಿಯವರು ಪ್ರಕಟಿಸಿದರು. ಅವರು ಅಧ್ಯಕ್ಷರಾಗಿರುವ ಈ ಸಮಿತಿಯಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಸದಸ್ಯ ಶ್ರೀ ಪಿ ಸಿ ಮೋಹನ್, ಮಾಜಿರಾಜ್ಯಸಭಾ ಸದಸ್ಯ ಶ್ರೀ ಕುಪೇಂದ್ರ ರೆಡ್ಡಿ, ಮುಖ್ಯಮಂತ್ರಿಯವರ ಬೆಂಗಳೂರು ಮೂಲಸೌಕರ್ಯ ಸಲಹೆಗಾರರಾಗಿದ್ದ ಶ್ರೀ ಆರ್ ಕೆ ಮಿಶ್ರಾ, ಶಿಕ್ಷಣ ತಜ್ಞ ಹಾಗೂ ನ್ಯೂ ಹೊರೈಝೂನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ|| ಮೋಹನ್ ಮಂಘ್ನಾನಿ, ಉದ್ದಿಮೆದಾರ ಶ್ರೀ ರಾಜ ಭಾಗಮನೆ, ನಾಗರಿಕ ಕಾರ್ಯಕರ್ತ ಶ್ರೀ ವಿನೋದ್ ಜಂದ್ರ, ಒರಾಕ್ ಸಂಸ್ಥೆಯ ಶ್ರೀ ರವಿಕೃಷ್ಣನ್, ಸಾಕ್ರ ಆಸ್ಪತ್ರೆಯ ಡಾ|| ಸತೀಶ್ ರಾಜ್ಯಸಭಾ ಸದಸ್ಯ ಶ್ರೀ ಕೆ ಸಿ ರಾಮಮೂರ್ತಿ, ಪ್ರೆಸ್ಟೀಜ್ ಗ್ರೂಪ್‌ನ ಶ್ರೀ ಇರ್ಫಾನ್, ಕ್ರೆಡಾಯ್ ಪ್ರತಿನಿಧಿಸುವ ಗೋಲ್ಡ್‌ಮನ್ ಸಾಕ್ಸ್‌ನ ಶ್ರೀ ರಾಜೇಶ್ ಬಜಾಜ್, ಮಹದೇವಪುರ ಬಿಜೆಪಿ ಅಧ್ಯಕ್ಷ ಶ್ರೀ ರಾಜರೆಡ್ಡಿ, ಗ್ರಾಮಾಂತರ ಅಧ್ಯಕ್ಷ ಶ್ರೀ ನಟರಾಜ್ ಸದಸ್ಯರಾಗಿದ್ದಾರೆ. ಬಿಜೆಪಿ ರಾಜ್ಯ ಸಮಿತಿ ಸದಸ್ಯ ಶ್ರೀ ಜಯಚಂದ್ರ ರೆಡ್ಡಿಯವರು ಸದಸ್ಯ ಕಾರ್ಯದರ್ಶಿಯಾಗಿ ನಿಯುಕ್ತಿಗೊಂಡರು.

ಈ ಕಾರ್ಯಪಡೆಯ ಭಾಗವಾಗಿ ವಾರ್ಡ್ ಸೌಕರ್ಯಗಳು, ಪರಿಸರ, ಸಾಮಾಜಿಕ ಸಬಲೀಕರಣ, ಸುರಕ್ಷತೆ, ಕಾನೂನು ಮತ್ತು ಸುವ್ಯವಸ್ಥೆ, ಮೂಲಸೌಕರ್ಯ, ಪಿಪಿಪಿ ಕಾರ್ಯ, ಸಂಚಾರ ಮತ್ತು ಪ್ರಮುಖ ರಸ್ತೆಗಳು – ಹೀಗೆ ಏಳು ಸಮಿತಿಗಳನ್ನು ರಚಿಸಲಾಯಿತು. ಈ ಏಳೂ ಸಮಿತಿಗಳ ಪ್ರತ್ಯೇಕ ಸಭೆಗಳು ಈ ಸಂದರ್ಭದಲ್ಲಿ ನಡೆದು ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ, ಚರ್ಚೆ ನಡೆಯಿತು. ಪ್ರತಿಯೊಂದೂ ಸಮಿತಿಯ ಸಭೆಯಲ್ಲಿ 30 ನಾಗರಿಕ ಕಾರ್ಯಕರ್ತರು ಮತ್ತು 10 ಅಧಿಕಾರಿಗಳು ಇರುವಂತೆ ವ್ಯವಸ್ಥೆ ಕಲ್ಪಿಸಲಾಯಿತು. ಕ್ಷೇತ್ರದ ಅಗತ್ಯಗಳನ್ನು ಮನಗಂಡು ಇನ್ನೂ ಎರಡು ಸಮಿತಿಗಳನ್ನು ಈಗ ರೂಪಿಸಲಾಗಿದೆ.

# ಮಹದೇವಪುರ ಟಾಸ್ಕ್ ಫೋರ್ಸ್ ಸಭೆಗಳು

ಮಹದೇವಪುರ ವಿಧಾನಸಭಾ ಕ್ಷೇತ್ರದ ಬಹುತೇಕ ಎಲ್ಲ ಅಭಿವೃದ್ಧಿ ಕಾರ್ಯಗಳು, ಜನಪರ ಕಾರ್ಯಕ್ರಮಗಳು, ಸೇವಾ ಯೋಜನೆಗಳು, ನೆರೆ- ಕೋವಿಡ್ ಪರಿಹಾರ, ಕಸ ನಿರ್ವಹಣೆ, ನೀರು, ರಸ್ತೆ, ಶಿಕ್ಷಣ, ಒಳಚರಂಡಿ, ಮೇಲು ಸೇತುವೆ - ಕೆಳಸೇತುವೆ, ರೈಲ್ವೆ , - ಎಲ್ಲ ಯೋಜನೆಗಳಲ್ಲೂ ಟಾಸ್ಕ್‌ಫೋರ್ಸ್ ಕಾರ್ಯಕರ್ತರು ಅತ್ಯಂತ ಸಕ್ರಿಯವಾಗಿ ಭಾಗವಹಿಸಿ, ಶ್ರೀ ಅರವಿಂದ ಲಿಂಬಾವಳಿಯವರ ಎಲ್ಲಾ ಉಪಕ್ರಮಗಳಿಗೆ ಬೆನ್ನೆಲುಬಾಗಿ ನಿಂತು ಕ್ಷೇತ್ರದ ಅಭಿವೃದ್ಧಿಗೆ ಕಾರಣವಾಗಿದ್ದಾರೆ.

**ಅಲ್ಲದೆ ನೂರಾರು ಅಧಿಕಾರಿಗಳು, ಸಿಬ್ಬಂದಿ ಕೂಡಾ ಸಂಪೂರ್ಣ ಬೆಂಬಲ, ಸಹಕಾರ ನೀಡಿ, ಸ್ಪಂದನಶೀಲರಾಗಿ ಕ್ಷೇತ್ರದ ಅಭಿವೃದ್ಧಿಗೆ ನೆರವಾಗಿದ್ದಾರೆ.**

ತಂತ್ರಜ್ಞಾನದ ನೆರವಿನಿಂದ ಜನಸೇವೆಯ ಗುಣಮಟ್ಟ ಹೆಚ್ಚಿಸಲು ಶ್ರೀ ಅರವಿಂದ ಲಿಂಬಾವಳಿ ರೂಪಿಸಿದ

# ಮಹದೇವಪುರ ಜನಹಿತ ಆ್ಯಪ್

## ಅಭಿವೃದ್ಧಿ ಮಾಹಿತಿಗಳ ಪಾರದರ್ಶಕ ಪ್ರಕಟಣೆ ಮತ್ತು ಸಾರ್ವಜನಿಕ ಸಮಸ್ಯೆಗಳ ನಿವಾರಣೆಗೆ ದೇಶದಲ್ಲೇ ಮೊಟ್ಟಮೊದಲ ಆ್ಯಪ್



ಮಹದೇವಪುರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ವಿಧಾನಸಭಾ ಸದಸ್ಯ ಶ್ರೀ ಅರವಿಂದ ಲಿಂಬಾವಳಿಯವರು ಭಾರತದಲ್ಲೇ ಮೊದಲ ಬಾರಿಗೆ ಕ್ಷೇತ್ರದ ಅಭಿವೃದ್ಧಿ ಮಾಹಿತಿಗಳನ್ನು ಜನತೆಗೆ ಪಾರದರ್ಶಕವಾಗಿ ತಿಳಿಸಲು ಮತ್ತು ಜನರ ದೂರು ದುಮ್ಮಾನಗಳನ್ನು ಸ್ವೀಕರಿಸಿ ಪರಿಹರಿಸಲು "ಮಹದೇವಪುರ ಜನಹಿತ" ಎಂಬ ಸ್ಮಾರ್ಟ್‌ಫೋನ್ ಆ್ಯಪ್‌ನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ್ದಾರೆ. ನೂರಾರು ದೂರು ದುಮ್ಮಾನಗಳನ್ನು ಈ ಆ್ಯಪ್ ಮೂಲಕವೇ ಬಗೆಹರಿಸಲಾಗಿದೆ.

## ● ಮಹದೇವಪುರ ಜನಹಿತ ಆ್ಯಪ್‌ನಲ್ಲಿ ಈ ಕೆಳಗಿನ ಮಾಹಿತಿ ವಿಭಾಗಗಳಿವೆ

1. **ಅಭಿವೃದ್ಧಿ ಮಾಹಿತಿ :** ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಈ ಕಾಲಾವಧಿಯಲ್ಲಿ (2018-23) ಕೈಗೊಂಡು ಪೂರ್ಣವಾದ, ನಡೆಯುತ್ತಿರುವ ಮತ್ತು ಮಂಜೂರಾದ ಕಾಮಗಾರಿಗಳ ಮಾಹಿತಿಗಳು ಇಲ್ಲಿವೆ. ಇವುಗಳನ್ನು ಸಕ್ರಿಯಾತ್ಮಕ ಮಾಹಿತಿ ವಿಭಾಗದಲ್ಲಿ ನೋಡಬಹುದು.

2. **ನಾಗರಿಕ ಸಮಸ್ಯೆ ಪರಿಹಾರ:** ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ಸಮಸ್ಯೆಗಳಿದ್ದರೆ ನಾಗರಿಕರು ಆ ಆ್ಯಪ್ ಮೂಲಕವೇ ಶಾಸಕರ ಕಚೇರಿಗೆ ಸಲ್ಲಿಸಬಹುದು. ಇದಕ್ಕಾಗಿ ಒಮ್ಮೆ ಆ್ಯಪ್‌ನ್ನು ಸ್ಥಾಪಿಸಿಕೊಳ್ಳಬೇಕಾಗುತ್ತದೆ. ಕ್ಷೇತ್ರದ ನಾಗರಿಕರೇ ಎಂದು ಖಚಿತಪಡಿಸಿಕೊಳ್ಳಲು ಕೆಲವು ಮೂಲಭೂತ ಮಾಹಿತಿಗಳನ್ನು ನಾಗರಿಕರು ತಿಳಿಸಬೇಕಾಗುತ್ತದೆ; ಜೊತೆಗೇ ಹೆಚ್ಚಿನ ಸಂಪರ್ಕಕ್ಕಾಗಿ ಮೊಬೈಲ್ ಸಂಖ್ಯೆಯನ್ನೂ ನೀಡಬೇಕಾಗುತ್ತದೆ.

3. **ನನ್ನ ನಾಗರಿಕ ಸಮಸ್ಯೆಗಳು :** ಇಲ್ಲಿ ನಾಗರಿಕರು ಸಲ್ಲಿಸುವ ಎಲ್ಲಾ ಸಾರ್ವಜನಿಕ ಸಮಸ್ಯೆಗಳ ಪಟ್ಟಿಯನ್ನು ನೀಡಲಾಗಿದ್ದು ಪರಿಹಾರದ ಬಗ್ಗೆ ಮಾಹಿತಿ ಇರುತ್ತದೆ.




4. **ನನ್ನ ಪ್ರೊಫೈಲ್:** ಇಲ್ಲಿ ನಾಗರಿಕರು ತಮ್ಮ ಬಗ್ಗೆ ಪ್ರಾಥಮಿಕ ಮಾಹಿತಿಗಳನ್ನು ತುಂಬಬಹುದು. ಇದರಿಂದ ಅವರೊಂದಿಗೆ ಸಂಪರ್ಕ ಸಾಧಿಸಲು ಇನ್ನಷ್ಟು ಅನುಕೂಲವಾಗುತ್ತದೆ.

5. **ಕೇಂದ್ರ / ರಾಜ್ಯ ಸರ್ಕಾರದ ಆ್ಯಪ್ ಗಳು:** ಈ ವಿಭಾಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಾಗರಿಕರ ಅನುಕೂಲಕ್ಕಾಗಿ ರೂಪಿಸಿರುವ ವಿವಿಧ ಆ್ಯಪ್‌ಗಳ ಮತ್ತು ವೆಬ್‌ಸೈಟ್‌ಗಳ ಮಾಹಿತಿ ಇರುತ್ತದೆ. ಇದರಿಂದ ನಾಗರಿಕರು ಸರ್ಕಾರದಿಂದ ತಮಗೆ ಸಿಗಬಹುದಾದ ಹೆಚ್ಚಿನ ಅನುಕೂಲಗಳ ಬಗ್ಗೆ ತಿಳಿದು ಅರ್ಜಿ ಸಲ್ಲಿಸಬಹುದು.

6. **ಸಂಪರ್ಕ ಮಾಹಿತಿ:** ಶಾಸಕರ ಕಚೇರಿ ವಿಳಾಸ ಮತ್ತಿತರ ಸಂಪರ್ಕ ಮಾಹಿತಿಗಳನ್ನು ಇಲ್ಲಿ ನೀಡಲಾಗಿದೆ.

7. **ಶಾಸಕರ ಸಮಾಜತಾಣಗಳ ಅಪ್‌ಡೇಟ್:** ಆ್ಯಪ್‌ನ ಮುಖಪುಟದಲ್ಲೇ ನಾಗರಿಕರು ಶ್ರೀ ಅರವಿಂದ ಲಿಂಬಾವಳಿಯವರ ಫೇಸ್‌ಬುಕ್, ಕೂ, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಂ ಖಾತೆಗಳ ಅಪ್‌ಡೇಟ್‌ಗಳನ್ನು ನೋಡಿ ಅಲ್ಲಿಯೇ ಲೈಕ್, ಶೇರ್ ಕಾಮೆಂಟ್ ಮಾಡಬಹುದು.

8. **ಇತರೆ ಅನುಕೂಲಗಳು:** ಈ ಆ್ಯಪ್ ಕನ್ನಡ ಮತ್ತು ಇಂಗ್ಲಿಶ್ ಭಾಷೆಗಳಲ್ಲಿ ಲಭ್ಯವಿದೆ. ಆ್ಯಪ್‌ನಲ್ಲಿ ಮಹದೇವಪುರ ಕ್ಷೇತ್ರದ ಡಿಜಿಟಲ್ ಗಡಿಗಳನ್ನು ಗುರುತು ಮಾಡಲಾಗಿದ್ದು ದೂರುದಾರರ ಸ್ಥಳವನ್ನೂ ಗುರುತಿಸಲಾಗುವುದು. ಇದರಿಂದ ಮಾಹಿತಿ ನಿರ್ವಹಣೆ ನಿಖರ ವೈಜ್ಞಾನಿಕವಾಗಲಿದೆ. ಅಭಿವೃದ್ಧಿ ಕಾರ್ಯಗಳ ಗೂಗಲ್ ನಕಾಶೆಯನ್ನೂ ನಾಗರಿಕರು ವೀಕ್ಷಿಸಬಹುದು.

- **ಸಾರ್ವಜನಿಕ ಸಮಸ್ಯೆಗಳ ನಿರ್ವಹಣೆ ಹೇಗೆ ನಡೆಯುತ್ತದೆ?**

- ಮೊದಲು ಮಹದೇವಪುರ ವ್ಯಾಪ್ತಿಯಲ್ಲಿ ಇರುವ ನಾಗರಿಕರು ತಮ್ಮ ಕ್ಷೇತ್ರದ ಭೌಗೋಳಿಕ ವ್ಯಾಪ್ತಿಯಲ್ಲೇ ಈ ಆ್ಯಪ್‌ನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಕ್ಷೇತ್ರದ ಹೊರಗಡೆ ಇರುವ, ಅಥವಾ ಕ್ಷೇತ್ರಕ್ಕೆ ಸಂಬಂಧಿಸದ ವ್ಯಕ್ತಿಗಳಿಗೆ ಈ ಆ್ಯಪ್‌ನ್ನು ಬಳಸುವ ಅವಕಾಶ ಇರುವುದಿಲ್ಲ.

- ನಾಗರಿಕರು ಮೊದಲ ಹಂತದಲ್ಲಿ ಓಟಿಪಿ ಮೂಲಕ ನೋಂದಣಿ ಮಾಡಿಕೊಳ್ಳಬೇಕು ಮತ್ತು ತಮ್ಮ ಕುರಿತ ಪ್ರಾಥಮಿಕ ಮಾಹಿತಿಗಳನ್ನು ತುಂಬಬೇಕು.
- ಸಾರ್ವಜನಿಕ ಸಮಸ್ಯೆ ಬಗ್ಗೆ ಮಾಹಿತಿ ಸಲ್ಲಿಸಬೇಕು ಎಂದಿದ್ದರೆ ನಾಗರಿಕರು ಮೊದಲು ಮಹದೇವಪುರ ಕ್ಷೇತ್ರದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಓದಬೇಕಾಗುತ್ತದೆ ಮತ್ತು ಓದಿದ್ದೇನೆ ಎಂದು ಸಮ್ಮತಿಸಬೇಕಾಗುತ್ತದೆ. ಈ ಅಭಿವೃದ್ಧಿ ಕಾರ್ಯಗಳ ಹೊರತಾಗಿಯೂ ಗಂಭೀರವಾದ ಸಾರ್ವಜನಿಕ ಸಮಸ್ಯೆ ಇದ್ದರೆ, ತಮ್ಮ ವಾರ್ಡ್, ಸಮಸ್ಯೆಯನ್ನು ಪರಿಹರಿಸಬೇಕಾದ ಇಲಾಖೆ, ಸಮಸ್ಯೆಯ ವಿಭಾಗ ಇತ್ಯಾದಿಗಳನ್ನು ನಮೂದಿಸಿ, ಸ್ಥಳದಲ್ಲೇ ಸೂಕ್ತ ಛಾಯಾಚಿತ್ರಗಳನ್ನು ತೆಗೆದು, ಹೆಚ್ಚುವರಿ ಮಾಹಿತಿಗಳನ್ನು ಸೇರಿಸಿ ಅಪ್‌ಲೋಡ್ ಮಾಡಬೇಕು.
- ಸಾರ್ವಜನಿಕ ಸಮಸ್ಯೆ ಸಲ್ಲಿಕೆಯಾದ ಕೂಡಲೇ ಅದನ್ನು ಸ್ವೀಕರಿಸಿ ಒಂದು ಟಿಕೆಟ್ ಸಂಖ್ಯೆಯನ್ನು ನೀಡಲಾಗುತ್ತದೆ. ಈ ಕುರಿತ ಸಂದೇಶವನ್ನು ಆ್ಯಪ್‌ನ ಒಳಗೇ ಸಂದೇಶ (ಪರದೆಯ ಮೇಲ್ಭಾಗದಲ್ಲಿ ಸೂಚನಾ ಗಂಟೆ ಇದೆ) ಬರುತ್ತದೆ. ಆದ್ದರಿಂದ ನಾಗರಿಕರು ಯಾವಾಗಲೂ ಆ್ಯಪ್‌ನ್ನು ಗಮನಿಸುತ್ತಲೇ ಇರಬೇಕಾಗುತ್ತದೆ.
- ಈ ದೂರನ್ನು ಸ್ವೀಕರಿಸಿದ ಶ್ರೀ ಅರವಿಂದ ಲಿಂಬಾವಳಿಯವರ ಕಚೇರಿಯಲ್ಲಿ ಸಮಸ್ಯೆಯ ನೈಜತೆಯನ್ನು ಪರಿಶೀಲಿಸಿ ಅದಕ್ಕೆ ತಕ್ಕಂತೆ ಪರಿಹಾರವನ್ನು ನೀಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸಮಸ್ಯೆಗಳ ಸಂಕೀರ್ಣತೆಯನ್ನು ಆಧರಿಸಿ ಪರಿಹಾರ ಇರುತ್ತದೆ ಎಂಬುದನ್ನು ಎಲ್ಲರೂ ಗಮನಿಸಬೇಕು.
- ಸಮಸ್ಯೆ ಪರಿಹಾರವಾದ ಬಗ್ಗೆ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡಲಾಗುವುದು. ಅದನ್ನು ಪಕ್ಷದ ಸ್ಥಳೀಯ ಕಾರ್ಯಕರ್ತರೂ ಗಮನಿಸುತ್ತಾರೆ. ಎಲ್ಲರೂ ಸಮ್ಮತಿಸಿದ ಮೇಲೆ ಸಂಬಂಧಿತ ನಾಗರಿಕರಿಗೆ ಸಮಸ್ಯೆ ಪರಿಹಾರವಾದ ಬಗ್ಗೆ ಸಂದೇಶವು ಚಿತ್ರಗಳೊಂದಿಗೆ ಹೋಗುತ್ತದೆ. ಒಂದುವೇಳೆ ಈ ಪರಿಹಾರದ ಬಗ್ಗೆ ಯಾವುದೇ ಆಕ್ಷೇಪಗಳಿದ್ದರೆ ಮತ್ತೆ ಸಂದೇಶ ಕಳಿಸಬಹುದು. ಅದನ್ನೂ ಪರಿಶೀಲಿಸಿ ಟಿಕೆಟನ್ನು ಕೊನೆಗೊಳಿಸಲಾಗುತ್ತದೆ.
- ಸಮಸ್ಯೆ ನಿವಾರಣೆ ನಂತರ ನಾಗರಿಕರು ಪರಿಹಾರದ ಚಿತ್ರಗಳನ್ನು ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಶೇರ್ ಮಾಡಿಕೊಳ್ಳುವ ಅವಕಾಶವನ್ನೂ ನೀಡಲಾಗುತ್ತದೆ.

## ಮಹದೇವಪುರ ಜನಹಿತ ಆ್ಯಪ್

### ದೇಶದಲ್ಲೇ ಇಂತಹ ಮೊದಲ ಸಮಗ್ರ ಸೇವೆಯ ಆ್ಯಪ್.

# ನಾಡಿನ ಮಹನೀಯರಿಗೆ ನಮನ

**ಮಹದೇವಪುರ ಕ್ಷೇತ್ರದಲ್ಲಿ ಪ್ರತಿವರ್ಷವೂ ನಾಡಿನ ಮಹನೀಯರ ಜಯಂತಿ, ಪುಣ್ಯತಿಥಿ ಮುಂತಾದ ಸ್ಮರಣ ಕಾರ್ಯಕ್ರಮಗಳನ್ನು ರಚನಾತ್ಮಕವಾಗಿ, ನಾಗರಿಕರ ಪಾಲ್ಗೊಳ್ಳುವಿಕೆಯಿಂದ ತಪ್ಪದೇ ನಡೆಸಿಕೊಂಡು ಬರಲಾಗುತ್ತಿದೆ.**

ಕಳೆದ ವರ್ಷಗಳಲ್ಲಿ ಕೋವಿಡ್ ಪಿಡುಗಿನಿಂದ ಹೊರಬಂದ ನಂತರ ನಾಡಪ್ರಭು ಕೆಂಪೇಗೌಡ ಜಯಂತಿ, ಡಾ|| ಬಿ.ಆರ್. ಅಂಬೇಡ್ಕರ್ ಜಯಂತಿ, ಕನಕದಾಸರ ಜಯಂತಿ, ವಾಲ್ಮೀಕಿ ಜಯಂತಿ, ಬಸವ ಜಯಂತಿ, ಸಂಕ್ರಾಂತಿ ಉತ್ಸವ, ಛಟ್ ಪೂಜಾ, ದುರ್ಗಾ ಪೂಜೆಗಳು, ಕಾಳಿ ಪೂಜೆ, ವೇಮನ ಜಯಂತಿ, 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮ, ಕುಟುಂಬ ಮಿಲನ ಮತ್ತು ಭಾರತ ಮಾತಾ ಪೂಜೆ ಹಾಗೂ ಮುಂತಾದ ಜಯಂತಿ ಉತ್ಸವಗಳನ್ನು ಸಾರ್ವಜನಿಕವಾಗಿ ನಡೆಸಲಾಗಿದೆ.

ಶಿವಾಜಿ ಜಯಂತಿ

ಕೆಂಪೇಗೌಡ ಜಯಂತಿ

ವೇಮನ ಜಯಂತಿ

ಅಂಬೇಡ್ಕರ್ ಜಯಂತಿ

ಮಾಚಿದೇವ ಜಯಂತಿ

ಡಾ. ಶಾಮಪ್ರಸಾದ್ ಮುಖರ್ಜೀ

ಬಸವ ಜಯಂತಿ

ಬಾಬು ಜಗಜೀವನರಾಂ ಜಯಂತಿ

ಕನಕದಾಸ ಜಯಂತಿ

# ಪ್ರಗತಿಯ ಪ್ರತಿಮೆಗೆ ಮೃತ್ತಿಕೆ ಸಂಗ್ರಹ ಅಭಿಯಾನ

**ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಾಡಪ್ರಭು ಶ್ರೀ ಕೆಂಪೇಗೌಡ ಅವರ 108 ಅಡಿ ಎತ್ತರದ ಭವ್ಯ ಕಂಚಿನ ಪ್ರತಿಮೆ Statue of Prosperity (ಪ್ರಗತಿಯ ಪ್ರತಿಮೆ) ಆವರಣದ ಉದ್ಯಾನಕ್ಕೆ ಮೃತ್ತಿಕೆ (ಪವಿತ್ರ ಮಣ್ಣು ) ಸಂಗ್ರಹ ಅಭಿಯಾನದ ಭಾಗವಾಗಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಉದ್ದಗಲಕ್ಕೂ ಸಂಚರಿಸಿ ನಾಡಪ್ರಭು ಕೆಂಪೇಗೌಡರ ರಥಯಾತ್ರೆ ಮತ್ತು ಪವಿತ್ರ ಮೃತ್ತಿಕೆ (ಮಣ್ಣು ) ಸಂಗ್ರಹ ಅಭಿಯಾನ ನಡೆಸಲಾಯಿತು.**

## ಪ್ರಗತಿಯ ಪ್ರತಿಮೆಗೆ ಮೃತ್ತಿಕೆ ಸಂಗ್ರಹ ಅಭಿಯಾನ

# ಸ್ವಾತಂತ್ರ್ಯದ ಅಮೃತ ಮಹೋತ್ಸವ: ಮಹದೇವಪುರದಲ್ಲಿ ಸಾಂಸ್ಕೃತಿಕ ಉತ್ಸವ

ಸಾಂಸ್ಕೃತಿಕ ಜಾಗೃತಿ ಮೂಡಿಸುವುದೂ ಕ್ಷೇತ್ರದ ಅಭಿವೃದ್ಧಿ ಕಾರ್ಯದ ಅವಿಭಾಜ್ಯ ಅಂಗವೆಂದು ನಂಬಿರುವ ಶ್ರೀ ಅರವಿಂದ ಲಿಂಬಾವಳಿಯವರು 2022ರ ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸಿದ್ದು ಹೀಗೆ. ನಾಡಿನ ಖ್ಯಾತ ಸಂಗೀತಗಾರರು, ನರ್ತಕರು, ಯೋಗಪಟುಗಳು, ರಂಗ ಕಲಾವಿದರು, ಗಾಯಕರು, ಜಾನಪದ ಕಲಾವಿದರು ಇದರಲ್ಲಿ ಭಾಗವಹಿಸಿದ್ದರು.





# ಮಹದೇವಪುರ ಕುಟುಂಬ ಮಿಲನ

ಆಧುನಿಕತೆಯ ಭರಾಟೆಯಲ್ಲಿ ಕುಟುಂಬ ಪರಂಪರೆಯನ್ನು, ಸಂಸ್ಕೃತಿಯ ಸಂಕೇತಗಳನ್ನು ಎಂದಿಗೂ ಮರೆಯಬಾರದು ಎಂಬುದು ಶ್ರೀ ಅರವಿಂದ ಲಿಂಬಾವಳಿಯವರ ಕಾಳಜಿ. ಈ ಹಿನ್ನೆಲೆಯಲ್ಲಿ ಕ್ಷೇತ್ರದ ಜನತೆಗಾಗಿ ಅವರು ಕುಟುಂಬ ಮಿಲನ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಕಳೆದ ವರ್ಷವೂ ಕುಟುಂಬ ಮಿಲನ ಕಾರ್ಯಕ್ರಮವು ಕಾಟಂನಲ್ಲೂರಿನಲ್ಲಿ ಅತ್ಯಂತ ಸಡಗರದಿಂದ ನಡೆಯಿತು. ಸಾಂಸ್ಕೃತಿಕ - ಕ್ರೀಡಾ ಕಾರ್ಯಕ್ರಮಗಳು ಜನರ ಮನಸೂರೆಗೊಂಡವು.

# ಜನ್ಮದಿನವೂ ಸೇವೆಯ ದಿನವೇ!

ಶ್ರೀ ಅರವಿಂದ ಲಿಂಬಾವಳಿಯವರ ಜನ್ಮದಿನವೆಂದರೆ ಇಡೀ ಕ್ಷೇತ್ರದಲ್ಲಿ ಸಾಮಾಜಿಕ ಚಟುವಟಿಕೆಗಳ ಸಡಗರ. ವರ್ಷವಿಡೀ ಜನಸೇವೆ ನಡೆಯುತ್ತಿದ್ದರೂ ಈ ದಿನ ಸ್ವತಃ ಅವರೇ ಮುಂದಾಗಿನಿಂತು ಕ್ಷೇತ್ರವಿಡೀ ಸಂಚರಿಸುತ್ತಾರೆ. ಅಶಕ್ತರು, ದುರ್ಬಲರೊಂದಿಗೆ ದಿನ ಕಳೆಯುತ್ತಾರೆ. ಕ್ಷೇತ್ರದ ಕಾರ್ಯಕರ್ತರು ರಕ್ತದಾನ ಶಿಬಿರ, ಬಟ್ಟೆ ವಿತರಣೆ ಇತ್ಯಾದಿ ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಾರೆ. ಹುಟ್ಟಿದ ದಿನದ ಹಬ್ಬವೆಂದರೆ ಜನಸೇವೆಯ ಮುಂದುವರಿಕೆ. **ಪ್ರತಿ ವರ್ಷವೂ ಅವರ ಜನ್ಮದಿನದಂದು ಕ್ಷೇತ್ ನೂರಾರು ಕಡೆಗಳಲ್ಲಿ ಸೇವಾ ಕಾರ್ಯಕ್ರಮಗಳು ನಡೆಯುತ್ತವೆ.**

# ಐಟಿ ಸಮುದಾಯದಲ್ಲಿ ಸಕ್ರಿಯ ಭಾಗಿತ್ವ

**ಮಹದೇವಪುರ ಕ್ಷೇತ್ರವೇ ದೇಶದ ಸಿಲಿಕಾನ್ ಕಣಿವೆ. ನೂರಾರು ಐಟಿ ಸಂಸ್ಥೆಗಳ ಜೊತೆ ಶ್ರೀ ಅರವಿಂದ ಲಿಂಬಾವಳಿ ನಿರಂತರ ಸಂಪರ್ಕದಲ್ಲಿದ್ದಾರೆ. ಹಲವು ಪ್ರತಿಷ್ಠಿತ ಮತ್ತು ನೀತಿ ನಿರೂಪಣೆ ಕುರಿತ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನಾಡಿಗೆ ಐಟಿ ಸಮುದಾಯವು ನೀಡುವ ಕೊಡುಗೆಯ ಬಗ್ಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುತ್ತಾರೆ.**

# ಸಾಂಸ್ಕೃತಿಕ, ಧಾರ್ಮಿಕ ಕ್ರಿಯಾಶೀಲತೆ

**ನಾಡಿಗೆ ಮಾರ್ಗದರ್ಶನ ನೀಡುವ ಧರ್ಮಗುರುಗಳ ಜೊತೆ ಶ್ರೀ ಅರವಿಂದ ಲಿಂಬಾವಳಿಯವರು ನಿರಂತರ ಸಂಪರ್ಕ ಇಟ್ಟುಕೊಂಡಿದ್ದಾರೆ. ಅವರೆಲ್ಲರ ಮಾರ್ಗದರ್ಶನದಿಂದ ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಹೆಚ್ಚಿಸಿಕೊಂಡಿದ್ದಾರೆ. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ವಯಂ ಸಂಘಟಿಸಿದ್ದಾರೆ.**

ಮಂತ್ರಾಲಯ: ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ

ಶ್ರೀ ಶ್ರೀ ರವಿಶಂಕರ್ ಜಿ

ಶ್ರೀ ನಿರ್ಮಲಾನಂದ ಸ್ವಾಮೀಜಿ

ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ

ಆರ್ಚ್ ಬಿಷಪ್ ಶ್ರೀ ಪೀಟರ್ ಮಚಾದೋ

# ಜನತಾ ದರ್ಶನದ ನಿರಂತರ ಕಾಯಕ

**ಶ್ರೀ ಅರವಿಂದ ಲಿಂಬಾವಳಿಯವರು ತಮ್ಮ ಕಚೇರಿಯಲ್ಲಿ ನಿರಂತರವಾಗಿ ಜನತಾ ದರ್ಶನದ ಮೂಲಕ ಕ್ಷೇತ್ರದ ಯಾವುದೇ ನಾಗರಿಕರ ಸಮಸ್ಯೆಗಳಿಗೂ ಕಿವಿಯಾಗಿದ್ದಾರೆ. ಎಲ್ಲರ ಸಮಸ್ಯೆ, ದೂರು, ದುಮ್ಮಾನಗಳನ್ನು ಸಮಾಧಾನದಿಂದ ಆಲಿಸಿ ಪರಿಹಾರ ಒದಗಿಸುವುದು ಅವರ ನಿಯಮಿತ ಕಾಯಕ.**

# ಸಾಂತ್ವನ, ನೆರವು, ಫಲಾನುಭವ ವಿತರಣೆ

**ಮನೆ ಹಕ್ಕುಪತ್ರ ವಿತರಣೆ, ಏಯ್ಡ್ಸ್ ಸಂತ್ರಸ್ತ ಮಕ್ಕಳಿಗೆ ನೆರವು, ಕೋವಿಡ್‌ನಿಂದ ಮೃತ ಕುಟುಂಬಗಳಿಗೆ ಸಾಂತ್ವನ -ನೆರವು. ಶ್ರೀಸಾಮಾನ್ಯರ ಜೊತೆ ಆತ್ಮೀಯ ಸಂವಾದ - ಇವು ಶ್ರೀ ಅರವಿಂದ ಲಿಂಬಾವಳಿಯವರ ನಿತ್ಯದ ನಡೆ.**

# ಎಲ್ಲರೊಂದಿಗೂ ಬೆರೆಯುವ ಮುಕ್ತ ಮನ

**ನಾಡಿನ ಹಿರಿಯ ಕಾದಂಬರಿಕಾರ ಡಾ. ಎಸ್ ಎಲ್ ಭೈರಪ್ಪ ಇರಲಿ, ಪರಿಸರ ಹೋರಾಟಗಾರ್ತಿ ಸಾಲುಮರದ ತಿಮ್ಮಕ್ಕ ಇರಲಿ, ಜನತಾ ದರ್ಶನಕ್ಕೆ ಬಂದ ಪುಟ್ಟ ಬಾಲಕನೇ ಇರಲಿ, ಬೀದಿಯಲ್ಲಿ ಅಂಗಡಿ ಇಟ್ಟುಕೊಂಡ ಶ್ರೀ ಸಾಮಾನ್ಯನೇ ಇರಲಿ - ಶ್ರೀ ಅರವಿಂದ ಲಿಂಬಾವಳಿಯವರು ಮುಕ್ತ ಮನಸ್ಸಿನಿಂದ ಮಾತಾಡಿ ಅವರೆಲ್ಲರ ಅಭಿಮತಗಳನ್ನು ಕೇಳುತ್ತಾರೆ; ಜನಸೇವೆಯಲ್ಲಿ ಅಳವಡಿಸಿಕೊಳ್ಳುತ್ತಾರೆ.**

ನಾಡಿನ ಹಿರಿಯ ಸಾಹಿತಿ ಡಾ. ಎಸ್ ಎಲ್ ಭೈರಪ್ಪನವರೊಂದಿಗೆ ಒಂದು ಕ್ಷಣ

ಸಾಲುಮರದ ತಿಮ್ಮಕ್ಕನವರ ಮನೆಯಲ್ಲಿ ಸಂವಾದ

ಬಾಲಕನಿಗೂ ಸಮಾನ ಗೌರವ

ಶ್ರೀಸಾಮಾನ್ಯನ ಜೊತೆಗೂ ಮಾತುಕತೆ

# ವಿಜನ್ 2028

## ಮಹದೇವಪುರ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ

# ನನ್ನ ಕಾರ್ಯಸೂಚಿ

ವೈವಿಧ್ಯಮಯ ಸಂಸ್ಕೃತಿ - ಜೀವನಶೈಲಿ ಹೊಂದಿರುವ ಮಹದೇವಪುರ ಕ್ಷೇತ್ರದ ನಿವಾಸಿಗಳಿಗೆ ಇದು ಹತ್ತು ಹಲವು ಅವಕಾಶಗಳ ಬೀಡು. ಇಲ್ಲಿನ ಜನತೆಗೆ ಬಗೆಬಗೆಯ ನಿರೀಕ್ಷೆಗಳಿವೆ; ಸವಾಲುಗಳಿವೆ; ಇವರೆಲ್ಲರೂ ವಿಭಿನ್ನ ಆರ್ಥಿಕ ಹಿನ್ನೆಲೆಯನ್ನು ಹೊಂದಿದ್ದಾರೆ.

ಹೀಗೆ ಹಲವು ಬಗೆಯ ಭಾಗೀದಾರಿಗಳಿರುವ ಮಹದೇವಪುರವು ಒಂದು ಮೆಗಾ ವಿಧಾನಸಭಾ ಕ್ಷೇತ್ರ. ಇಲ್ಲಿ ವಿಶಿಷ್ಟವಾದ ಸವಾಲುಗಳಿವೆ. ಈ ಸವಾಲುಗಳ ಬಗ್ಗೆ ನನಗೆ ಖಚಿತವಾದ ಅರಿವಿದೆ. ಆದ್ದರಿಂದಲೇ ಎಲ್ಲಾ ಭಾಗೀದಾರಿಗಳ ಜೊತೆಗೆ ನಿಕಟವಾಗಿ ಸಂಪರ್ಕ ಇಟ್ಟುಕೊಂಡು ಅವೆಲ್ಲವನ್ನೂ ನಿವಾರಿಸುವ ಭರವಸೆಯನ್ನು ನಿಮಗೆಲ್ಲರಿಗೂ ಕೊಡುತ್ತಿದ್ದೇನೆ.

ಸಂಧಾನ ಕೌಶಲ್ಯ,ತೀವ್ರವಾದ ಭಾಗೀದಾರಿ ನಿರ್ವಹಣೆ, ತ್ವರಿತ ನಿರ್ಣಯಗಳು, ಸಮಸ್ಯೆಗೆ ಪರಿಹಾರ – ಇವನ್ನು ನಾನು ನಿರಂತರವಾಗಿ ಅಳವಡಿಸಿಕೊಂಡಿದ್ದೇನೆ. ಎಲ್ಲಾ ಅಡೆತಡೆಗಳನ್ನು, ಸಮಸ್ಯೆಗಳನ್ನು ಮೀರಿ ಮಹದೇವಪುರ ಕ್ಷೇತ್ರದ ಅಭ್ಯುದಯದ ಹಾದಿ ಸುಗಮಗೊಳಿಸುವೆ ಎಂಬ ಭರವಸೆ ನನಗಿದೆ.

ಬೆಂಗಳೂರಿನ ಬಹುತೇಕ ಮಾಹಿತಿ ತಂತ್ರಜ್ಞಾನ, ಫಿನ್‌ಟೆಕ್, ಸಂಶೋಧನೆ ಮತ್ತು ಅಭಿವೃದ್ಧಿ (ಆರ್ & ಡಿ), ಸ್ಟಾರ್ಟ್ ಅಪ್‌ಗಳು ಮಹದೇವಪುರ ಕ್ಷೇತ್ರದಲ್ಲೇ ಇವೆ. ಜಗತ್ತಿನ ಮುಂಚೂಣಿ ತಂತ್ರಜ್ಞಾನ ಸಂಸ್ಥೆಗಳು, ಜಾಗತಿಕ ಇನ್‌ಹೌಸ್ ಐಟಿ ಕೆಂದ್ರಗಳು (ಜಿಐಸಿಗಳು), ಆರ್ ಎಂಡ್ ಡಿ ಕೇಂದ್ರಗಳು, ಸ್ಟಾರ್ಟ್ ಅಪ್‌ಗಳು ಫಿನ್‌ಟೆಕ್ ಸಂಸ್ಥೆಗಳು – ಎಲ್ಲವಕ್ಕೂ ಬೇಕಾದ ಅತ್ಯುತ್ತಮ ವಾತಾವರಣವನ್ನು ನಾವು ಯಶಸ್ವಿಯಾಗಿ ರೂಪಿಸಿದ್ದೇವೆ. ಮಹದೇವಪುರವು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ , ಭಾರತಕ್ಕೇ ಉದ್ಯೋಗಾವಕಾಶ ನಿರ್ಮಾಣದ ಕೇಂದ್ರ ಬಿಂದು. ಅಪಾರ ಪ್ರತಿಭೆಯ ಕುಶಲ ಕೆಲಸಗಾರರು ಮಹದೇವಪುರಕ್ಕೆ ಬಂದು ವಾಸಿಸಲು ಉತ್ಸುಕರಾಗಿದ್ದಾರೆ.

ಈ ಹಿನ್ನೆಲೆಯಲ್ಲೇ ಈ ಕ್ಷೇತ್ರದ ನಾಗರಿಕರು ಆಡಳಿತದಲ್ಲಿ ಸಹಭಾಗಿಗಳಾಗಬೇಕು ಎಂದು ಯೋಚಿಸಿ ನಾನು ಮಹದೇವಪುರ ಟಾಸ್ಕ್ ಫೋರ್ಸ್ (ಕಾರ್ಯಪಡೆ)ನ್ನು 2018ರಲ್ಲೇ ರಚಿಸಿದೆ. ಇದು ಒಂದು ಅತಿವಿಶಿಷ್ಟವಾದ ವೇದಿಕೆ. ಇಲ್ಲಿ ಒಂಬತ್ತು ವಿಷಯಗಳ ಆಧಾರದಲ್ಲಿ ಒಂಬತ್ತು ಕಾರ್ಯಪಡೆಗಳನ್ನು ರಚಿಸಲಾಗಿದೆ. ಇದರಲ್ಲಿ 1500ಕ್ಕೂ ಹೆಚ್ಚು ನಾಗರಿಕರು ಈ ಐದೂ ವರ್ಷಗಳ ಕಾಲ ಸಕ್ರಿಯವಾಗಿ ಭಾಗಿಯಾಗಿದ್ದಾರೆ; ನೆರೆಹೊರೆಯ ಎಲ್ಲಾ ಸಮಸ್ಯೆಗಳೂ ಕಾಲಬದ್ಧವಾಗಿ, ಗುಣಮಟ್ಟದಿಂದ ಪರಿಹಾರವಾಗುವಂತೆ ನಿಗಾ ವಹಿಸಿದ್ದಾರೆ. ಅಲ್ಲದೆ ಪಕ್ಷದ ಶಕ್ತಿಕೇಂದ್ರಗಳ ಕಾರ್ಯಕರ್ತರೂ ಈ ಕಾರ್ಯಪಡೆಯ ಜೊತೆಗೂಡಿ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಈ ಮೂಲಕ ಕ್ಷೇತ್ರವು ಉತ್ತಮ ವಾತಾರವಣವನ್ನು ಹೊಂದುವಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿದ್ದಾರೆ.

**ಮಹದೇವಪುರ ವಿಧಾನಸಭಾ ಕ್ಷೇತ್ರದ ಪ್ರತಿಯೊಬ್ಬ ನಿವಾಸಿಗೂ ಸುಸ್ಥಿರ, ಸರ್ವರನ್ನೂ ಒಳಗೊಂಡ, ವಾಸಯೋಗ್ಯ ನೆರೆಹೊರೆಯನ್ನು ರೂಪಿಸುವುದೇ ನನ್ನ ಆದ್ಯತೆಯಾಗಿದೆ.**

**ಈ ಹಿನ್ನೆಲೆಯಲ್ಲಿ ನನ್ನ 2023-28 ರ ಕಾರ್ಯಸೂಚಿ ಹೀಗಿದೆ.**

# ಮೊಬಿಲಿಟಿ

**ಶೇಕಡಾ 70 ರಷ್ಟು ಜನರು ಸಾರ್ವಜನಿಕ ಸಾರಿಗೆಗಳಲ್ಲಿ ಓಡಾಡಿದರೆ ಮಾತ್ರವೇ ಮಹದೇವಪುರದ ಮೊಬಿಲಿಟಿ (ಸಂಚಾರ ಸುಗಮತೆ) ಕುರಿತ ಸಮಸ್ಯೆಗಳನ್ನು ಪರಿಹರಿಸಬಹುದು. ಸಾರ್ವಜನಿಕ ಸಾರಿಗೆ, ಕಾಲ್ನಡಿಗೆ ಮತ್ತು ಸೈಕ್ಲಿಂಗ್ - ಇವುಗಳ ಉತ್ತೇಜನವನ್ನು ಬಲವಾಗಿ ಪ್ರತಿಪಾದಿಸುತ್ತೇನೆ.**

**#betterCommute**

## ಸಂಚಾರ ದಟ್ಟಣೆಯನ್ನು ತಗ್ಗಿಸಲು ಸಾರ್ವಜನಿಕ ಸಾರಿಗೆಯನ್ನೇ ಬಹುಮುಖ್ಯ ಗೇಮ್ ಚೇಂಜರ್ ಪರಿಹಾರವಾಗಿ ರೂಪಿಸುವುದು

1. 2023ರಲ್ಲಿ 3 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲವಾಗುವಂತೆ ವೈಟ್‌ಫೀಲ್ಡ್ ಮೆಟ್ರೋದ ಸಾರ್ವಜನಿಕ ಸೇವೆ ಆರಂಭ
2. 2026ರಲ್ಲಿ 5 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಓಆರ್‌ಆರ್ ಮೆಟ್ರೋದ ಸಾರ್ವಜನಿಕ ಸೇವೆ ಆರಂಭ
3. 2026 ರಲ್ಲಿ ಉಪಗ್ರಹ ನಗರಗಳಿಗೆ ಅಸೀಮವಾದ ಸಂಪರ್ಕ ಜಾಲವಾಗಿ ಬೆಂಗಳೂರು ಸಬ್‌ಅರ್ಬನ್ ರೈಲು ಯೋಜನೆಯ (ಬಿಎಸ್ ಆರ್ ಪಿ) ಕನಕ ಲೈನ್‌ನ 4ನೇ ಕಾರಿಡಾರಿನ ಸಾರ್ವಜನಿಕ ಸೇವೆ ಆರಂಭ.
4. ಸರ್ಜಾಪುರ ರಸ್ತೆಯಲ್ಲಿ ಮೆಟ್ರೋ ಕಾಮಗಾರಿ ಆದಷ್ಟು ಬೇಗ ಪೂರ್ಣವಾಗುವಂತೆ ಎಲ್ಲಾ ಬಗೆಯ ಬೆಂಬಲ, ಯತ್ನ.
5. ಮಹದೇವಪುರಕ್ಕೆ ಇನ್ನೂ ಹೆಚ್ಚು ಬಿಎಂಟಿಸಿ ಮಿನಿಬಸ್‌ಗಳ ಪೂರೈಕೆ
6. ಎಲ್ಲಾ ಬಸ್ ತಂಗುದಾಣಗಳ ಸಮರ್ಪಕ ನಿರ್ವಹಣೆ; ಬಳಕೆಯೋಗ್ಯವಾಗಿ ಇರುವಂತೆ ನಿಗಾ.
7. ವಿವಿಧ ಬಗೆಯ ಸಂಚಾರ ವ್ಯವಸ್ಥೆಗಳನ್ನು ಸುಗಮವಾಗಿ ಬಳಸುವಂತೆ ಇಂಟರ್ - ಮೋಡಲ್ ಸಂಪರ್ಕ ಯೋಜನೆಗಳಿಗೆ ಉತ್ತೇಜನ
8. ಸಾಧ್ಯವಿರುವ ಕಡೆಗಳಲ್ಲಿ ಸೈಕಲ್ ಹಾದಿಗಳನ್ನು ನಿಗದಿಪಡಿಸುವುದು.

## ಕೊನೆಮೈಲು ಸಂಪರ್ಕ

9. ಸಂಚಾರ ಜಾಲದಿಂದ ತುದಿವರೆಗೆ ಪಯಣಿಸಲು ಕೊನೆಮೈಲು ಸಾರಿಗೆಯಾಗಿ ಹಂಚಿಕೊಳ್ಳುವ ಆಟೋ (ಶೇರ್‌ಡ್ ಆಟೋ) ಜಾಲಕ್ಕೆ ಉತ್ತೇಜನ
10. ಮೆಟ್ರೋ ಮತ್ತು ಸಬ್‌ಅರ್ಬನ್ ರೈಲು ನಿಲ್ದಾಣಗಳ ಸುತ್ತಮುತ್ತ ಒಟ್ಟು 100 ಕಿಲೋಮೀಟರ್ ಪಾದಚಾರಿ ಮಾರ್ಗಗಳು
11. ಪ್ರಿಪೇಯ್ಡ್ ಆಟೋ ಕಿಯೋಸ್ಕ್‌ಗಳ ಜಾರಿ
12. ಹಂಚಿಕೊಳ್ಳುವ ಮೊಬಿಲಿಟಿ ಸೇವಾ ಸೌಕರ್ಯಗಳಿಗೆ ಮತ್ತು ಅಳವಡಿಕೆಗೆ ಉತ್ತೇಜನ
13. ನೆರೆಹೊರೆಗಳಲ್ಲಿ ನಾಗರಿಕ ಪ್ರೇರಿತ ಉಪಕ್ರಮಗಳಿಗೆ ಸಂಪೂರ್ಣ ಬೆಂಬಲ

# ವಿಜನ್ 2028 ಮಹದೇವಪುರ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ನನ್ನ ಕಾರ್ಯಸೂಚಿ

## ರಸ್ತೆ ಸೌಕರ್ಯವನ್ನು ಬಲಪಡಿಸುವುದು

14. ಬೆಂಗಳೂರು ಮೆಟ್ರೋಪಾಲಿಟನ್ ಲ್ಯಾಂಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿ (ಬಿಎಂಎಲ್‌ಟಿಎ) ಮತ್ತು ಬೆಂಗಳೂರು ಸಂಚಾರ ಪೊಲೀಸ್ - ಎರಡೂ ಸಂಸ್ಥೆಗಳ ಜೊತೆ ಸಂವಹನ ಸಾಧಿಸಿ ಸಂಚಾರ ನಿರ್ವಹಣೆಯ ಮೂಲಸೌಕರ್ಯಗಳನ್ನು ವಿಸ್ತರಿಸಲು ಯತ್ನ.
15. ಈಗ ನಡೆಯುತ್ತಿರುವ 14 ಹೊಸ ರಸ್ತೆಗಳು ಮತ್ತು 19 ರಸ್ತೆ ಅಗಲೀಕರಣದ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
16. ದೊಮ್ಮಸಂದ್ರದಿಂದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಈಸ್ಟ್ ಏರ್ ಪೋರ್ಟ್ ಕಾರಿಡಾರ್ ಪೂರ್ಣಗೊಳಿಸುವುದು.
17. ಕಾರ್ಮೆಲಾರಾಂ ಮತ್ತು ಪಣತ್ತೂರಿನಲ್ಲಿ ನಡೆಯುತ್ತಿರುವ ರೈಲ್ವೇ ಮೇಲ್ಸೇತುವೆ (ಆರ್‌ಓಬಿ)ನಿರ್ಮಾಣವನ್ನು ಪೂರ್ಣಗೊಳಿಸುವುದು
18. ಪಣತ್ತೂರು ಮತ್ತು ದೊಡ್ಡನೆಕ್ಕುಂದಿಗಳಲ್ಲಿ ನಡೆಯುತ್ತಿರುವ ರೈಲ್ವೆ ಕೆಳಸೇತುವೆ (ಆರ್ ಯು ಬಿ) ನಿರ್ಮಾಣವನ್ನು ಪೂರ್ಣಗೊಳಿಸುವುದು
19. ಟೆಂಡರ್ ಶ್ಯೂರ್ ಮಾನದಂಡಗಳ ಮಾದರಿಯಲ್ಲಿ 25 ಕಿಲೋಮೀಟರ್ ಉದ್ದದ ಅತಿದಟ್ಟಣೆಯ ಕಾರಿಡಾರುಗಳನ್ನು ನಿರ್ಮಿಸುವುದು.
20. 10 ಕಿಲೋಮೀಟರ್ ಉದ್ದದ ಆರ್ಟೀರಿಯಲ್ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳಾಗಿ ಮಾರ್ಪಡಿಸುವುದು.
21. ಆಯ್ದ ಪಂಚಾಯತ್ ರಸ್ತೆಗಳನ್ನು ಲೋಕೋಪಯೋಗಿ ಇಲಾಖಾ ರಸ್ತೆಗಳಾಗಿ ಮಾರ್ಪಡಿಸಿ ಅವುಗಳ ಮೂಲಸೌಕರ್ಯವನ್ನು ಹೆಚ್ಚಿಸುವುದು.
22. ಪಂಚಾಯತ್ ರಾಜ್ ಇಲಾಖೆಯ ರಸ್ತೆಗಳು ಹಾಗೂ ಪಿಎಂಜಿಎಸ್‌ವೈ ರಸ್ತೆಗಳ ಯೋಗ್ಯ ನಿರ್ವಹಣೆ.

## ಕ್ಲೀನ್‌ಸ್ಟ್ರೀಟ್ ಚಾಲೆಂಜ್@ಮಹದೇವಪುರ

23. ಆಡಳಿತ, ಕಾರ್ಪೋರೇಟ್‌ಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ನಿವಾಸಿಗಳನ್ನು ಉತ್ತಮ ನೆರೆಹೊರೆ ರೂಪಿಸುವಂತೆ ಭಾಗೀದಾರಿಗಳನ್ನಾಗಿಸುವ ಅಭಿಯಾನಕ್ಕೆ ಪ್ರೋತ್ಸಾಹ.
24. ಕಣ್ಣಿಗೆ ಕಾಣುವ ನೈರ್ಮಲ್ಯಕ್ಕಾಗಿ ಜಾಗಗಳ ರೂಪಾಂತರ ಮತ್ತು ಕಸ ಎಸೆಯುವುದನ್ನು ತಡೆಯುವುದು.

## ಎಲ್ಲಾ ರಸ್ತೆ ಬಳಕೆದಾರರಿಗೆ ಸುರಕ್ಷತೆ

25. 50 ರಸ್ತೆ ಜಂಕ್ಷನ್‌ಗಳನ್ನು ಸುಧಾರಿಸಿ ಅಲ್ಲಿ ಸಂಚಾರದ ಸುಗಮ ಹರಿವು, ಸುರಕ್ಷತೆ ಮತ್ತು ಜಾಗ ನಿರ್ವಹಣೆ ಸುಗಮತೆಯನ್ನು ಖಾತ್ರಿಪಡಿಸುವುದು
26. ಎಲ್ಲಾ (ಶೇಕಡಾ100)ಬೀದಿ ದೀಪಗಳಿಗೆ ಎಲ್‌ಇಡಿ ಬಲ್ಬ್‌ಗಳನ್ನೇ ಅಳವಡಿಸುವುದು.

# ಜಲಶಕ್ತಿ (ನೀರಿನ ನಿರ್ವಹಣೆ)

**#betterneighbourhood**

**ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆ, ಜಲಜೀವನ್ ಮಿಶನ್, ಕ್ಯಾಚ್ ದ ರೈನ್ ಮತ್ತು ಕರೆಗಳ ಪುನರುಜ್ಜೀವನ ಮುಂತಾದ ಉಪಕ್ರಮಗಳ ಮೂಲಕ ಎಲ್ಲರಿಗೂ ಶುದ್ಧ ಮತ್ತು ಸುರಕ್ಷಿತ ನೀರು ಲಭ್ಯವಾಗುವಂತೆ ನೋಡಿಕೊಳ್ಳುವುದು.**

## ಎಲ್ಲರಿಗೂ ನಲ್ಲಿಯಲ್ಲಿ ಕುಡಿಯುವ ನೀರು ಸೇವೆ

27. 2024ರಿಂದ ಮಹದೇವಪುರ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 10 ಕೋಟಿ ಲೀಟರ್ ಕಾವೇರಿ ನೀರು ಲಭ್ಯತೆ
28. ಕಾವೇರಿ ಕುಡಿಯುವ ನೀರಿನ ಯೋಜನೆಯಿಂದ ಎರಡೂವರೆ ಲಕ್ಷ ಮನೆಗಳಿಗೆ ನಲ್ಲಿ ಮೂಲಕ ಕುಡಿಯುವ ನೀರಿನ ಸಂಪರ್ಕ ಸೇವೆ.
29. ಗ್ರಾಮೀಣ ಪ್ರದೇಶಗಳಲ್ಲಿ ಜಲಜೀವನ್ ಮಿಶನ್ ಮೂಲಕ ಫಂಕ್ಷನಲ್ ಹೌಸ್‌ಹೋಲ್ಡ್ ಟ್ಯಾಪ್ ಕನೆಕ್ಷನ್ (ಎಫ್‌ಟಿಎಚ್‌ಸಿ) ವ್ಯವಸ್ಥೆಯಲ್ಲಿ ಶೇಕಡಾ ನೂರಕ್ಕೆ ನೂರು ನಲ್ಲಿ ನೀರಿನ ಸಂಪರ್ಕ ಸೇವೆ.
30. ನಾಗರಿಕರ ಸಹಭಾಗಿತ್ವದಲ್ಲಿ ನೀರನ್ನು ಸಂರಕ್ಷಿಸುವ ಬಗ್ಗೆ ಉತ್ತೇಜಕ ಉಪಕ್ರಮಗಳು

## ತ್ಯಾಜ್ಯ ನೀರಿನ ಸಂಸ್ಕರಣೆ

31. 2024ರೊಳಗೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲಾ 31 ಗ್ರಾಮಗಳಿಗೆ ಬಾಕಿ ಇರುವ ಒಳಚರಂಡಿ ಜಾಲದ ನಿರ್ಮಾಣ
32. 26.50 ಕೋಟಿ ಲೀಟರ್ ಕೊಳಚೆ ನೀರನ್ನು ಸಂಸ್ಕರಿಸುವ ಸಾಮರ್ಥ್ಯದ ಐದು ಸಂಪೂರ್ಣ ವ್ಯವಸ್ಥೆಯ ಕೊಳಚೆ ನೀರು ಸಂಸ್ಕರಣಾ ಸ್ಥಾವರಗಳ ಸ್ಥಾಪನೆ.
33. ವಸತಿ ಸಂಕೀರ್ಣಗಳಲ್ಲಿ ಮತ್ತು ಐಟಿ ಪಾರ್ಕ್‌ಗಳಲ್ಲಿ ವಿಕೇಂದ್ರೀಕೃತ ಕೊಳೆನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಉತ್ತೇಜನ; ತನ್ಮೂಲಕ ಸಾರ್ವಜನಿಕ ಸ್ಥಳಗಳಿಗೆ, ರಾಜಕಾಲುವೆಗಳಿಗೆ ಮತ್ತು ಕೆರೆಗಳಿಗೆ ಕೊಳೆನೀರು ನುಗ್ಗುವುದನ್ನು ತಗ್ಗಿಸುವುದು.
34. ವಸತಿ ಸಂಕೀರ್ಣಗಳಲ್ಲಿ ಸಂಸ್ಕರಣೆಗೊಂಡು ಉಳಿದ ನೀರನ್ನು ಮರುಬಳಕೆ ಮಾಡಲು ಸಾಧ್ಯಾಸಾಧ್ಯತೆ ಪರಿಶೀಲಿಸಿ ಕ್ರಮ.
35. ಗ್ರಾಮ ಪಂಚಾಯತ್ ಪ್ರದೇಶದಲ್ಲಿಯೂ ಹಂತಹಂತವಾಗಿ ಕೊಳಚೆ ನೀರು ನಿರ್ವಹಣೆಗೆ ಒಳಚರಂಡಿ ವ್ಯವಸ್ಥೆಗೆ ಕ್ರಮ.

## ಅಂತರ್ಜಲ ಮಟ್ಟ ಸುಧಾರಿಸಲು ಕೆರೆ ಮತ್ತು ಕಲ್ಯಾಣಿಗಳ ಪುನರುಜ್ಜೀವನ

36. ನೀರು ಹಿಡಿದಿಟ್ಟುಕೊಳ್ಳುವ ಮತ್ತು ಜೀವವೈವಿಧ್ಯವು ಸುಧಾರಿಸುವ ಮುಖ್ಯ ಉದ್ದೇಶಕ್ಕಾಗಿ ಅರವತ್ತಕ್ಕೂ ಹೆಚ್ಚು ಕೆರೆಗಳ ಅಭಿವೃದ್ಧಿ
37. ಕೆರೆಗಳಿಗೆ ನುಗ್ಗುವ ಕೊಳೆನೀರನ್ನು ಸಂಪೂರ್ಣವಾಗಿ ಅಥವಾ ಗರಿಷ್ಠ ಪ್ರಮಾಣದಲ್ಲಿ ತಡೆಯುವುದು

38. ಕೆರೆಗಳಿಗೆ ಒತ್ತುವರಿ ಮುಕ್ತ ಮತ್ತು ಕಟ್ಟಡ ನಿರ್ಮಾಣ ತ್ಯಾಜ್ಯಗಳ ಎಸೆಯುವಿಕೆಯಿಂದ ಸಂರಕ್ಷಣೆ
39. ಬೆಳ್ಳಂದೂರು, ವರ್ತೂರು, ರಾಂಪುರ ಮತ್ತು ಯೆಲ್ಲೆ ಮಲ್ಲಪ್ಪ ಶೆಟ್ಟಿ ಕೆರೆಗಳನ್ನು ಜೀವವೈವಿಧ್ಯ ಮತ್ತು ಸಮುದಾಯ ಚಟುವಟಿಕೆಯ ತಾಣವನ್ನಾಗಿ ಅಭಿವೃದ್ಧಿಪಡಿಸುವುದು.
40. ಸಾಂಪ್ರದಾಯಿಕ ಜಲಮೂಲಗಳಾದ ಕಲ್ಯಾಣಿ ಮತ್ತು ಕುಂಟೆಗಳ ಪುನರುಜ್ಜೀವನ ಮತ್ತು ಕೇವಲ ಅಂತರ್ಜಲ ಮಟ್ಟಕ್ಕಾಗಿ ಮಾತ್ರವೇ ಅವುಗಳ ಅಭಿವೃದ್ಧಿ ಮತ್ತು ನಿರ್ವಹಣೆ

### ನೆರೆ ತಗ್ಗಿಸಲು ರಾಜಕಾಲುವೆಗಳು ಮತ್ತು ಕೆರೆಗಳ ನಿರ್ವಹಣೆ

41. 135 ಕಿಲೋಮೀಟರ್ ಗಳಷ್ಟು ರಾಜಕಾಲುವೆಗಳ ಅಭಿವೃದ್ಧಿ ಮಾಡಿ ಮಳೆನೀರು ಕೆರೆಗಳ ನಡುವೆ ಸುಗಮವಾಗಿ ಹರಿಯುವಂತೆ ಕ್ರಮ.
42. 16 ಪ್ರಮುಖ ಕೆರೆಗಳಲ್ಲಿ ಸ್ಲೂಯಿಸ್ ಗೇಟ್‌ಗಳನ್ನು ಸ್ಥಾಪಿಸಿ ನೀರಿನ ಮಟ್ಟದ ನಿರ್ವಹಣೆ ಮತ್ತು ನೆರೆ ನಿಯಂತ್ರಣ.
43. ನೀರನ್ನು ನೆಲದಲ್ಲೇ ಇಂಗಿಸುವ ಪ್ರಮಾಣವನ್ನು ಹೆಚ್ಚಿಸಲು **"ಕ್ಯಾಚ್ ದ ರೈನ್ ಉಪಕ್ರಮ"**ಕ್ಕೆ ಉತ್ತೇಜನ.
44. ಗ್ರಾಮೀಣ ಭಾಗದಲ್ಲೂ ಬರುವ ರಾಜಕಾಲುವೆಗಳ ಅಭಿವೃದ್ಧಿ.

## ಸುಸ್ಥಿರತೆ ಮತ್ತು ಪರಿಸರ

**#betterneighbourhood**

**ಮಹದೇವಪುರ ಕ್ಷೇತ್ರವು ಅತಿ ಹೆಚ್ಚಿನ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದೆ; ಇದರಿಂದಾಗಿ ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಭಾರೀ ಪ್ರಮಾಣದ ಒತ್ತಡ ಉಂಟಾಗಿದೆ. ಹೀಗಿದ್ದೂ ಈ ವಿಷಯದಲ್ಲಿ ಸುಸ್ಥಿರ ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯನ್ನು ಸಾಧಿಸುವುದು ಅತಿಮುಖ್ಯವಾಗಿದೆ.**

### ಮಹದೇವಪುರದ ಹಸಿರು ಹೊದಿಕೆಯನ್ನು ಹೆಚ್ಚಿಸುವುದು

45. ಕನ್ನಮಂಗಲದಲ್ಲಿರುವ ಅಟಲ್ ಬೊಟಾನಿಕಲ್ ಉದ್ಯಾನವನ್ನು ದೇಸಿ ಸಸ್ಯಗಳನ್ನು ನೆಡುವ ಮೂಲಕ ಜೀವವೈವಿಧ್ಯ ಉದ್ಯಾನವನ್ನಾಗಿ ಮಾಡುವುದು. ಅಲ್ಲದೆ ಪ್ರತಿಯೊಂದೂ ಬಿಬಿಎಂಪಿ ವಾರ್ಡಿನಲ್ಲಿ ಮತ್ತು ಗ್ರಾಮಪಂಚಾಯತ್‌ನಲ್ಲಿ ಸಾರ್ವಜನಿಕ ಬಳಕೆಗಾಗಿ, ದೇಹಸ್ವಾಸ್ಥ್ಯಕ್ಕಾಗಿ ಉದ್ಯಾನವನಗಳನ್ನು ಸ್ಥಾಪಿಸುವುದು ಅಥವಾ ಕೆರೆಗಳ ಸುತ್ತ ಸಾರ್ವಜನಿಕ ಬಳಕೆಗಾಗಿ ಜಾಗಗಳನ್ನು ಮೀಸಲಿಡಲಾಗುವುದು; ಹೀಗೆ ಕ್ಷೇತ್ರದಲ್ಲಿ ಹಸಿರು ಹೊದಿಕೆಯನ್ನು ವಿಸ್ತರಿಸಲಾಗುವುದು.
46. ಗುಂಜೂರು ಹಾಗೂ ಮಂಡೂರು ಅರಣ್ಯ ಪ್ರದೇಶವನ್ನು ಟ್ರೀ ಪಾರ್ಕ್ ಆಗಿ ಅಭಿವೃದ್ಧಿಪಡಿಸಲಾಗುವುದು.
47. ಸಸ್ಯಗಳನ್ನು ನೆಡುವುದರಲ್ಲಿ , ವಸತಿ ಸಂಕೀರ್ಣಗಳನ್ನು ಮತ್ತು ಖಾಸಗಿ ಮನೆಗಳನ್ನು ಹಸಿರು ಮಾಡುವಲ್ಲಿ ನಾಗರಿಕ ಭಾಗಿತ್ವವನ್ನು ಉತ್ತೇಜಿಸಲು ಕ್ರಮಗಳು.

# ಸುಸ್ಥಿರ ಕಸ ನಿರ್ವಹಣೆ

## ತಿರಸ್ಕರಿಸು, ತಗ್ಗಿಸು ಮತ್ತು ಮರುಬಳಸು (ರಿಫ್ಯೂಸ್, ರಿಡ್ಯೂಸ್ ಮತ್ತು ರಿಯೂಸ್) : ಇದೇ ನಮ್ಮ ಕಸ ನಿರ್ವಹಣೆಯ ಮಂತ್ರ

48. ಐದು ಅಥವಾ ಅದಕ್ಕಿಂತ ಹೆಚ್ಚಿನ ಪ್ರದೇಶಗಳಲ್ಲಿ ವಾರ್ಡ್ ಮಟ್ಟದ ಒಣಕಸ ಸಂಗ್ರಹಣಾ ಕೇಂದ್ರಗಳು (ಡಿಡಬ್ಲ್ಯುಸಿಸಿ)
49. ಪ್ರತಿಯೊಂದೂ ಗ್ರಾಮ ಪಂಚಾಯತ್ ನಲ್ಲಿ ಒಂದು **"ಕಸ ಕೇಂದ್ರ,"ದ** ಸ್ಥಾಪನೆ. ಇಲ್ಲಿ ಹಸಿಕಸ, ಒಣಕಸ, ಉದ್ಯಾನ ಕಸ, ತ್ಯಾಜ್ಯಗಳು, ಶಿಶುಚಡ್ಡಿಗಳು (ಡಯಾಪರ್ಸ್), ಪ್ಯಾಡ್‌ಗಳು ಮತ್ತು ಇ-ತ್ಯಾಜ್ಯ ಎಲ್ಲವನ್ನೂ ನಿರ್ವಹಿಸುವ ಮತ್ತು ಸಂಸ್ಕರಿಸುವ ವ್ಯವಸ್ಥೆ.
50. ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಅತ್ಯಾಧುನಿಕ ಕಸ ವರ್ಗಾವಣೆ ಕೇಂದ್ರಗಳು
51. ವಸತಿ ಸಂಕೀರ್ಣಗಳಲ್ಲಿ ಮತ್ತು ಐಟಿ ಪಾರ್ಕ್‌ಗಳಲ್ಲಿ ವಿಕೇಂದ್ರೀಕೃತ ಹಸಿಕಸ ನಿರ್ವಹಣೆಯನ್ನು ಉತ್ತೇಜಿಸುವುದು.
52. ಎಲ್ಲಾ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಸುರಕ್ಷಿತ ಮತ್ತು ಮರುಬಳಸುವ ಬಟ್ಟೆಯ ಪ್ಯಾಡ್‌ಗಳು / ಕಪ್‌ಗಳ ವಿತರಣೆ. ನಮ್ಮ ಆರೋಗ್ಯ ಕಾರ್ಯಕರ್ತರಿಗೆ ಆರೋಗ್ಯಕರ ವಿಧಾನಗಳನ್ನು ಉತ್ತೇಜಿಸುವ ಆಧುನಿಕ ಕಾರ್ಯವಿಧಾನಗಳ ಅನುಕೂಲಗಳ ಬಗ್ಗೆ ತರಬೇತಿ ನೀಡಲಾಗುವುದು. ಈ ಕುರಿತು ಈಗಾಗಲೇ "ನಮ್ಮ ಸ್ವಚ್ಛ ಕನ್ನಮಂಗಲ" ಎಂಬ ಪ್ರಾಯೋಗಿಕ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಇದನ್ನು ಇತರೆ ಪ್ರದೇಶಗಳಿಗೆ ವಿಸ್ತರಿಸಲಾಗುವುದು. ಇದು ಮಹಿಳೆಯರಿಗೆ ಇನ್ನೊಂದು ವರಮಾನ ಒದಗಿಸುವ ಯೋಜನೆಯೂ ಆಗಲಿದೆ.
53. ನಮ್ಮ ನೆಚ್ಚಿನ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿಯವರ ಕರೆಯಂತೆ ಮಹದೇವಪುರದಲ್ಲಿ ಏಕಬಳಕೆಯ ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು.
54. ಪ್ರಲವ್ಡ್ ಅಂಗಡಿಗಳು, ರಿಪೇರಿ ಜಂಕ್ಷನ್‌ಗಳು ಮತ್ತು ಕಟ್ಲೆರಿ ಬ್ಯಾಂಕ್‌ಗಳಿಗೆ ಉತ್ತೇಜನ. ಇದೂ ಸಹ ಸಮಾಜದ ದುರ್ಬಲ ವರ್ಗದ ಜನರಿಗೆ ಒಂದು ವರಮಾನ ಒದಗಿಸಲಿದೆ.
55. ಎಲ್ಲಾ ಧಾರ್ಮಿಕ ಪ್ರದೇಶಗಳನ್ನು ಶೂನ್ಯ ಕಸ ಪ್ರದೇಶ ಎಂದು ಘೋಷಿಸಿ ಅವುಗಳ ಸುತ್ತಮುತ್ತಲಿನ ಪ್ರದೇಶವನ್ನು ಹಸಿರು ವಲಯ ಎಂದು ಘೋಷಿಸಲಾಗುವುದು.
56. ಬೆಂಗಳೂರಿನಿಂದ ಬರುವ ಕಸದ ಇನ್ನೂ ಹೆಚ್ಚಿನ ವೈಜ್ಞಾನಿಕ ನಿರ್ವಹಣೆಗೆ ಆದ್ಯತೆ.
57. ಮಂಡೂರಿನಲ್ಲಿ ಇರುವ ಹಳೆಯ ಕಸವನ್ನು ಸಂಪೂರ್ಣ ತೆಗೆದು ಆ ಜಾಗವನ್ನು ಸಾರ್ವಜನಿಕ, ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಬಳಸಲು ಕ್ರಮ.
58. ಕಣ್ಣೂರು ಪಂಚಾಯತಿಯ ಮಿಟ್ಟಗಾನಹಳ್ಳಿ ಸುತ್ತಮುತ್ತ ಹಾಕಲಾದ ಲ್ಯಾಂಡ್ ಫಿಲ್ಲಿಂಗ್ ಜಾಗವನ್ನು ಕ್ಯಾಪಿಂಗ್ ಮಾಡಿ ಅದನ್ನು ಉದ್ಯಾನವನ ಅಥವಾ ಕ್ರೀಡಾಂಗಣವನ್ನಾಗಿ ಬಳಸಲು ಆದ್ಯತೆ.

### ಪ್ರಾಣಿತ್ಯಾಜ್ಯದ ಬೇಕಾಬಿಟ್ಟಿ ವಿಲೇವಾರಿಗೆ ಸಂಪೂರ್ಣ ತಡೆ

59. ಸೂಚಿತ ಸಂಸ್ಥೆಯಿಂದ ಸೂಕ್ತ ವಿಧಾನದ ಮೂಲಕ ಪ್ರಾಣಿತ್ಯಾಜ್ಯ ಸಂಗ್ರಹ ಮತ್ತು ಈಗ ಕಣ್ಣೂರಿನಲ್ಲಿ ಸ್ಥಾಪನೆಯಾಗುತ್ತಿರುವ ಪ್ರಾಣಿತ್ಯಾಜ್ಯ ಘಟಕದಲ್ಲಿ ವೈಜ್ಞಾನಿಕವಾಗಿ ವಿಲೇವಾರಿ. ಇದು ಕರ್ನಾಟಕದಲ್ಲೇ ಮೊಟ್ಟಮೊದಲ ಪ್ರಾಣಿತ್ಯಾಜ್ಯ ವಿಲೇವಾರಿ ಯೋಜನೆಯಾಗಿದೆ.

### ನಾಗರಿಕ ಭಾಗಿತ್ವದ ಉಪಕ್ರಮಗಳು

60. ಪರಿವರ್ತನೆಯ ಉಪಕ್ರಮಗಳಲ್ಲಿ , ಪ್ಲಾಗಿಂಗ್ (ಜಾಗ್ ಮಾಡುವಾಗ ಕಸ ಸಂಗ್ರಹಣೆ), ಸ್ವಚ್ಛ ಭಾರತ್ ಉಪಕ್ರಮಗಳಲ್ಲಿ ನಾಗರಿಕರು ಭಾಗಿಯಾಗುವಂತೆ ಪ್ರತಿಯೊಂದೂ ನೆರೆಹೊರೆ ಪ್ರದೇಶಗಳಲ್ಲಿ ಉತ್ತೇಜಕ ಕಾರ್ಯಕ್ರಮಗಳು.
61. ಮೂಲದಲ್ಲೇ ಕಸ ವಿಂಗಡಣೆ ಮಾಡುವುದಕ್ಕೆ ಉತ್ತೇಜನ.
62. ಎಲ್ಲಾ ಶಾಲಾ ಮಕ್ಕಳಲ್ಲಿ ಸ್ವಚ್ಛ ಭಾರತ್ ಮತ್ತು ಕಸ ವಿಂಗಡಣೆ ಜಾಗೃತಿ ಉಪಕ್ರಮಗಳನ್ನು ಉತ್ತೇಜಿಸುವುದು.

### ಸುಸ್ಥಿರತೆಗಾಗಿ ಕೊಳವೆ ನೈಸರ್ಗಿಕ ಅನಿಲ ಸಂಪರ್ಕವನ್ನು (ಪೈಪಡ್ ಗ್ಯಾಸ್ ಕನೆಕ್ಷನ್) ಉತ್ತೇಜಿಸುವುದು

63. 2 ಲಕ್ಷ ಮನೆಗಳಿಗೆ ಕೊಳವೆ ನೈಸರ್ಗಿಕ ಅನಿಲ ಸಂಪರ್ಕವನ್ನು ಒದಗಿಸಲಾಗುವುದು.

### ವಿದ್ಯುತ್ ಚಾರ್ಜಿಂಗ್ ಕೇಂದ್ರಗಳ ಹೆಚ್ಚಳ

64. ಮಹದೇವಪುರದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆಯನ್ನು ಉತ್ತೇಜಿಸಿ ವಾಯು ಮಾಲಿನ್ಯವನ್ನು ತಗ್ಗಿಸುವುದಕ್ಕಾಗಿ ಎಲ್ಲೆಡೆ ವಿದ್ಯುತ್ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

## ಸಾರ್ವಜನಿಕ - ಖಾಸಗಿ ಸಹಭಾಗಿತ್ವ

**ಕಾರ್ಪೊರೇಟ್‌ಗಳು, “ದ ಅಗ್ಲಿ ಇಂಡಿಯನ್ಸ್” ನಂತಹ ಸರ್ಕಾರೇತರ ಸಂಸ್ಥೆಗಳು, ಶಿಕ್ಷಣ, ಆರೋಗ್ಯ, ಪರಿಸರ, ಸಾರ್ವಜನಿಕ ಸೌಲಭ್ಯ, ಕೆರೆಗಳು, ಉದ್ಯಾನವನಗಳು ಮುಂತಾದ ರಂಗಗಳಲ್ಲಿ ಇರುವ ನಾಗರಿಕ ಗುಂಪುಗಳ ಜೊತೆ ಭಾಗಿತ್ವ ವಹಿಸಿ ಪರಿವರ್ತನೆಯ ಉಪಕ್ರಮಗಳಿಗೆ ಬೆಂಬಲ ನೀಡುವುದು.**

### ನಾಗರಿಕ ಭಾಗಿತ್ವಕ್ಕೆ ಉತ್ತೇಜನ

65. ಮಹದೇವಪುರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಚಟುವಟಿಕೆಗಳಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ಮತ್ತು ನಿವಾಸಿಗಳು ತಮ್ಮ ನೆರೆಹೊರೆಯ ನಾಗರಿಕ ಸಮಸ್ಯೆಗಳನ್ನು ವರದಿ ಮಾಡಿ ಪರಿಹಾರ ಒದಗಿಸಲು **ಜನಹಿತ ಆ್ಯಪ್**‌ನ್ನು ಇನ್ನಷ್ಟು ಸುಧಾರಿಸಲಾಗುವುದು.

66. ವಾರ್ಡ್ ಸಮಿತಿ ಸಭೆಗಳಲ್ಲಿ ನಾಗರಿಕರು ಹೆಚ್ಚಿನ ಪ್ರಮಾಣದಲ್ಲಿ ಅಧಿಕಾರಿಗಳ ಜೊತೆಗೆ ಸಹಭಾಗಿಯಾಗುವಂತೆ ಉತ್ತೇಜನ.

### ಕಾರ್ಪೋರೇಟ್ ಭಾಗಿತ್ವಕ್ಕೆ ಉತ್ತೇಜನ

67. ದಾನಿಗಳು ಮತ್ತು ಗುಣಮಟ್ಟದ ಎನ್‌ಜಿಓಗಳಿಗಾಗಿ **"ಸಿಎಸ್‌ಆರ್ ಹಬ್ಬ"** ಎಂಬ ವಾರ್ಷಿಕ ವೇದಿಕೆಯನ್ನು ಸ್ಥಾಪಿಸಿ ಅವರನ್ನು ಭಾಗೀದಾರಿ ಚಟುವಟಿಕೆಗಳಲ್ಲಿ ಜೋಡಿಸುವುದು. ಸಿಎಸ್‌ಆರ್ ನಿಧಿಗಳ ನ್ಯಾಯಯುತ ಮತ್ತು ಸಮಾನ ವಿನಿಯೋಗ.
68. ಅಂತರ್ಜಲ ನೀರು ನಿರ್ವಹಣೆ, ಕಲಿಕಾ ಸಾಧನಗಳು,. ಕೌಶಲ್ಯ ತರಬೇತಿ, ಆರೋಗ್ಯ ನಿರ್ವಹಣೆ ಮುಂತಾದ ಸಾರ್ವಜನಿಕ ಅನುಕೂಲದ ಸಂಗತಿಗಳಲ್ಲಿ ವಿಶೇಷ ಪರಿಣತಿ ಹೊಂದಿರುವ ಸಂಸ್ಥೆಗಳನ್ನು ಜೋಡಿಸಲಾಗುವುದು.
69. ಸಾರ್ವಜನಿಕ ಸೌಕರ್ಯಗಳಿಗೆ ಪರಿಹಾರ ಒದಗಿಸುವ ರಂಗಗಳಲ್ಲಿ ಹೂಡಿಕೆ ಮಾಡಲು ಮತ್ತು ವ್ಯವಹಾರಗಳನ್ನು ರೂಪಿಸಿಕೊಳ್ಳಲು ಉದ್ಯಮಶೀಲರಿಗೆ ಬೆಂಬಲ ನೀಡುವುದು. ಉದಾಹರಣೆಗೆ ಕಸ ನಿರ್ವಹಣೆ/ ಈಗಾಗಲೇ ಸರ್ಕಾರವು ಕೊಟ್ಟ ಭೂಮಿ, ವಿದ್ಯುತ್ ಮತ್ತು ನೀರು ಒದಗಿಸಿ ಪ್ರದೇಶಗಳಲ್ಲಿ ಕಸ ನಿರ್ವಹಣೆಯಲ್ಲಿ ಹೂಡಿಕೆ ಮಾಡುವ ಉದ್ಯಮಶೀಲರನ್ನು ತೊಡಗಿಸಲಾಗಿದೆ.

## ವಾರ್ಡ್ ಸೌಕರ್ಯಗಳು

**#betterneighbourhood**

### ಶುದ್ಧ , ಸುರಕ್ಷಿತ ಮತ್ತು ಜೀವನ ನಡೆಸಲು ಯೋಗ್ಯವಾದ ನೆರೆಹೊರೆಯನ್ನು ಈ ಕೆಳಗಿನ ಕಾರ್ಯಕ್ರಮಗಳಿಂದ ರೂಪಿಸುತ್ತೇನೆ:

70. ವಾರ್ಡ್ ರಸ್ತೆಗಳಿಗಾಗಿ ಹೆಚ್ಚಿನ ಸಂಪನ್ಮೂಲ ಒದಗಿಸಿ ಸೂಕ್ತ ರಸ್ತೆ ಬದಿ ಚರಂಡಿ, ಪಾದಚಾರಿ ಮಾರ್ಗ ಮತ್ತು ರಸ್ತೆ ಕಾಮಗಾರಿಗಳನ್ನು ಕೈಗೊಳ್ಳುವುದು.
71. ಸುಧಾರಿತ ಸುರಕ್ಷತೆಗಾಗಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲು ಹೆಚ್ಚಿನ ಸಂಪನ್ಮೂಲ.
72. ನೆರೆಹೊರೆ ಸುರಕ್ಷತೆಯನ್ನು ಸುಧಾರಿಸಲು ಸಿಸಿಟಿವಿಗಳ ಸ್ಥಾಪನೆ ಪ್ರಮಾಣ ಹೆಚ್ಚಳ.
73. ಸ್ಮಶಾನ ಕೊರತೆಯನ್ನು ನೀಗಿಸಲು ವಿದ್ಯುತ್ ಚಿತಾಗಾರಗಳ ಸ್ಥಾಪನೆ.

## ಸಾಮಾಜಿಕ ಸಬಲೀಕರಣ

**#ourMLAcares**

### ಎಲ್ಲರನ್ನೂ ಒಳಗೊಂಡ ನೆರೆಹೊರೆಯನ್ನು ರೂಪಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುತ್ತೇನೆ:

74. ಉಚಿತ ತಪಾಸಣೆ, ಪರೀಕ್ಷೆ ಮತ್ತು ಔಷಧಗಳನ್ನು ನೀಡುವ ನಮ್ಮ ಕ್ಲಿನಿಕ್‌ಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು

# ವಿಜನ್ 2028 ಮಹದೇವಪುರ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ನನ್ನ ಕಾರ್ಯಸೂಚಿ

75. ಬಿಬಿಎಂಪಿ, ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರವು ಒದಗಿಸುವ ಅನುಕೂಲಗಳನ್ನು ಗರಿಷ್ಠ ಪ್ರಮಾಣದ ಜನರಿಗೆ ಸಿಗುವಂತೆ ನೋಡಿಕೊಳ್ಳುವುದು.
76. ಮಹದೇವಪುರವನ್ನು ಸ್ವಚ್ಛವಾಗಿಡುತ್ತಿರುವ ಪೌರಕಾರ್ಮಿಕರು, ಚಾಲಕರು ಮತ್ತು ಹೆಲ್ಪರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆ
77. ಎಲ್ಲಾ ಸರ್ಕಾರಿ ಶಾಲೆ - ಕಾಲೇಜುಗಳ ಮೇಲ್ದರ್ಜೆಗೇರಿಸುವಿಕೆ; ಸರ್ಕಾರದ ಮತ್ತು ಸಿಎಸ್‌ಆರ್ ನಿಧಿಗಳ ಮೂಲಕ ಉತ್ತಮ ಸೌಲಭ್ಯಗಳ ನೀಡಿಕೆ.
78. ದುರ್ಬಲ ನಿವಾಸಿಗಳಿಗೆ ಹಕ್ಕುಪತ್ರ ನೀಡಿಕೆ
79. ಅಂಗನವಾಡಿಗಳು ಮತ್ತು ಸರ್ಕಾರಿ ಶಾಲೆಗಳ ಮೂಲಸೌಕರ್ಯ ಬಲಪಡಿಸುವುದು.
80. ಎಲ್ಲ ಆಸ್ತಿದಾರರೂ ಸಮಯಕ್ಕೆ ಸರಿಯಾಗಿ ಖಾತೆಗಳನ್ನು ಪಡೆಯುವಂತೆ ಇ-ಖಾತಾ ಮೇಳಗಳನ್ನು ಉತ್ತೇಜಿಸುವುದು.

## ವಿಶೇಷ ಯೋಜನೆಗಳು

**#ourMLAcares**

**ಮಹದೇವಪುರವು ಸದಾ ಬೆಳೆಯುತ್ತಿರುವ ಪ್ರದೇಶವಾಗಿದ್ದು ನಿವಾಸಿಗಳ ಅಪೇಕ್ಷೆಗೆ ತಕ್ಕಂತೆ ಇನ್ನೂ ಹೆಚ್ಚು ಮೂಲಸೌಕರ್ಯಗಳನ್ನು ಒದಗಿಸಲಾಗುವುದು.**

81. 250 ಹಾಸಿಗೆಗಳ ಮಲ್ಟಿ ಸ್ಪೆಶಿಯಾಲಿಟಿ ಸರ್ಕಾರಿ ಆಸ್ಪತ್ರೆಯನ್ನು ಉದ್ಘಾಟಿಸಲಾಗುವುದು.
82. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು.
83. ಬಿಬಿಎಂಪಿ ವ್ಯಾಪ್ತಿಯಲ್ಲಿ 13 **"ನಮ್ಮ ಕ್ಲಿನಿಕ್"** ಗಳನ್ನು ಹಾಗೂ ಪಿ ಎಚ್ ಸಿ ಇರದ ಗ್ರಾಮ ಪಂಚಾಯತ್‌ಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸಲಾಗುವುದು.
84. ಕಾಡುಗೋಡಿ ಮತ್ತು ವರ್ತೂರಿನ ಪ್ರಥಮ ದರ್ಜೆ ಕಾಲೇಜುಗಳ ಮೂಲಸೌಕರ್ಯ ಸುಧಾರಣೆ
85. ಚನ್ನಸಂದ್ರ ಮತ್ತು ಇಮ್ಮಡಿಹಳ್ಳಿ ಪಾಲಿಟೆಕ್ನಿಕ್‌ಗಳ ಮೂಲಸೌಕರ್ಯ ಸುಧಾರಣೆ
86. ಮಕ್ಕಳು ಮತ್ತು ಯುವಕರಿಗಾಗಿ ಏಳು ಆಟದ ಮೈದಾನಗಳ ನಿರ್ಮಾಣ ಪೂರ್ಣಗೊಳಿಸುವುದು.
87. ವಿದ್ಯುತ್ ಸಾಗಾಣಿಕೆಯಲ್ಲಿ ದಕ್ಷತೆ ಮತ್ತು ಸುರಕ್ಷತೆ ಸಾಧಿಸಲು ಎಲ್ಲಾ ಹೈ ಟೆನ್‌ಶನ್ ಕೇಬಲ್‌ಗಳನ್ನು ಭೂಗತ ಕೇಬಲ್‌ಗಳಿಗೆ ವರ್ಗಾಯಿಸುವುದು.
88. ಗುಣಮಟ್ಟದ ಮತ್ತು ವಿಶ್ವಾಸಾರ್ಹ ವಿದ್ಯುತ್ ಸರಬರಾಜಿಗಾಗಿ ಹೆಚ್ಚುವರಿ ಕೆಟಿಪಿಸಿಎಲ್ ಪವರ್ ಸ್ಟೇಶನ್ ಸ್ಥಾಪನೆ

ಅರವಿಂದ ಲಿಂಬಾವಳಿ

# ವಿಜನ್ 2028 ಮಹದೇವಪುರ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ನನ್ನ ಕಾರ್ಯಸೂಚಿ

## ಕಾನೂನು ಮತ್ತು ಸುವ್ಯವಸ್ಥೆ

**ಬೆಂಗಳೂರಿನಲ್ಲೇ ಮಹದೇವಪುರವು ನಿವಾಸಿಗಳಿಗೆ ಅತ್ಯಂತ ಹೆಚ್ಚಿನ ಸುರಕ್ಷಿತ ಪ್ರದೇಶವಾಗಿದೆ. ಇದನ್ನು ಇನ್ನಷ್ಟು ಸುರಕ್ಷಿತಗೊಳಿಸಲು ನಾನು ಈ ಕ್ರಮಗಳನ್ನು ಕೈಗೊಳ್ಳುತ್ತೇನೆ:**

89. ಕ್ಷೇತ್ರದಲ್ಲಿ ಸಾಮಾಜಿಕ ಸಾಮರಸ್ಯವನ್ನು ಬೆಳೆಸುವ ಕಾರ್ಯಕ್ರಮಗಳನ್ನು ಮುಂದುವರಿಸುವುದು.
90. ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಸ್ಥಾಪನೆ
91. ಪ್ರಮುಖ ಜಂಕ್ಷನ್‌ಗಳಲ್ಲಿ , ಆರ್ಟೀರಿಯಲ್ ರಸ್ತೆಗಳು ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿ ಪೊಲೀಸ್ ಗಸ್ತು
92. ಮಕ್ಕಳು ಮತ್ತು ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಗಮನ
93. ಪೊಲೀಸ್ ಠಾಣೆಗಳನ್ನು ಜನಸ್ನೇಹಿ ಕೇಂದ್ರಗಳಾಗಿ ಮಾಡಿ ಎಲ್ಲಾ ಬಗೆಯ ಆರ್ಥಿಕ - ಸಾಮಾಜಿಕ ಸಮುದಾಯಗಳಿಗೆ ಸುರಕ್ಷತೆ ಮತ್ತು ಗೌರವದಿಂದ ಕಂಡ ಭಾವನೆ ಬರುವ ಹಾಗೆ ಪರಿವರ್ತಿಸಲು ಉತ್ತೇಜನ.

## ಸಂಸ್ಕೃತಿ, ಶಿಕ್ಷಣ, ಉದ್ಯೋಗ, ಕ್ರೀಡೆ

94. ಮಂಡೂರಿನ ಬಯೋಮೈನಿಂಗ್ ಪ್ರದೇಶದಲ್ಲಿ 20 ಎಕರೆಗಳಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣಕ್ಕೆ ಪ್ರಕ್ರಿಯೆಗೆ ಆದ್ಯತೆ.
95. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ, ಕನ್ನಡ ಭಾಷೆಯ ಹಿರಿಮೆ ತೋರಿಸುವ ಕಾರ್ಯಕ್ರಮಗಳು
96. ಹೂಡಿ, ದೊಡ್ಡಕನ್ನೆಲ್ಲಿ , ನಿಂಬೆಕಾಯಿಪುರದಲ್ಲಿ ಒಳಾಂಗಣ ಸಭಾಂಗಣಗಳ ಹಾಗೂ ರಂಗಮಂದಿರಗಳ ಅಭಿವೃದ್ಧಿ.
97. ಮಹಿಳೆಯರು ಮತ್ತು ವೃದ್ಧರಿಗೆ ಇರುವ ಎಲ್ಲಾ ಸರ್ಕಾರಿ ಫಲಾನುಭವಗಳ ವಿತರಣೆ.
98. ಕ್ಷೇತ್ರದಲ್ಲಿ ಆರಂಭವಾಗುವ ಸ್ಟಾರ್ಟ್ ಅಪ್‌ಗಳಿಗೆ ಸಂಪೂರ್ಣ ಬೆಂಬಲ.
99. ಕನ್ನಡೇತರರಿಗೆ ಈಗಾಗಲೇ ಆರಂಭವಾಗಿರುವ ಕನ್ನಡ ಕಲಿಕೆ ಅಭಿಯಾನವನ್ನು ಇನ್ನಷ್ಟು ವಿಸ್ತರಿಸುವುದು.
100. ಕಲಾವಿದರು ಮತ್ತು ಕ್ರೀಡಾಳುಗಳಿಗೆ ತರಬೇತಿಗಾಗಿ ಸರ್ವವಿಧದ ಅನುಕೂಲಗಳಿಗೆ ಕ್ರಮ
101. ಅರ್ಹ ನಿರುದ್ಯೋಗಿಗಳಿಗೆ ಕೆಲಸದ ಅವಕಾಶಗಳನ್ನು ಒದಗಿಸಲು ಖಾಸಗಿ ಉದ್ಯೋಗ ಮೇಳ

**ಇವಲ್ಲದೆ ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವುದು ಮತ್ತು ಮಂಜೂರಾದ ಕಾಮಗಾರಿಗಳನ್ನೂ ಆರಂಭಿಸಿ ಪೂರ್ಣಗೊಳಿಸುವುದು ನನ್ನ ಆದ್ಯತೆಯಾಗಿದೆ.**

ದೇಶದಲ್ಲೇ ವಿನೂತನವಾದ ಟಾಸ್ಕ್ ಫೋರ್ಸ್ ರಚಿಸಿ, ಕ್ಷೇತ್ರದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡೇ 2018-23ರಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ ಅನುಭವದ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲೂ ಇದೇ ರೀತಿಯ ಜನಸಹಭಾಗಿತ್ವದ ಕಾರ್ಯಶೈಲಿಯನ್ನು ಬಲಪಡಿಸಿ ಇಡೀ ಕ್ಷೇತ್ರದ ಸರ್ವಾಂಗೀಣ ಅಭ್ಯುದಯ ಸಾಧಿಸಲು ನನ್ನೆಲ್ಲ ಶ್ರಮವನ್ನೂ ಹಾಕುತ್ತೇನೆ.



ಅರವಿಂದ ಲಿಂಬಾವಳಿ

# 2008-2018 ದಶಕದ ಸೇವೆಯ ಮುಖ್ಯಾಂಶಗಳು

ಶ್ರೀ ಅರವಿಂದ ಲಿಂಬಾವಳಿಯವರು ಮಹದೇವಪುರ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರಾಗಿ

## 2008-18 ರ ಅವಧಿಯಲ್ಲಿ ಕೈಗೊಂಡ ಕಾರ್ಯಗಳ ಪಕ್ಷಿನೋಟ

ಗಮನಿಸಿ: 2018-23 ರ ಸಾಧನೆಗಳನ್ನು ವಿವರವಾಗಿ ಮೊದಲಿನ ಪುಟಗಳಲ್ಲಿ ನೀಡಲಾಗಿದೆ.

# 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

## ● ಸಂಚಾರ ಸೌಕರ್ಯ: ಭಾರೀ ಅಭಿವೃದ್ಧಿ

**ಮಹದೇವಪುರದಲ್ಲೀಗ ರಸ್ತೆಗಳೇ ಅಭಿವೃದ್ಧಿಯ ಹೆಗ್ಗುರುತುಗಳು. ಪ್ರಮುಖ ರಸ್ತೆಗಳು ಮತ್ತೆ ಹೊಸ ರೂಪ ಪಡೆದಿವೆ. ಈ ಮುಖ್ಯರಸ್ತೆಗಳನ್ನು ಕೂಡುವ ಏಕವಾಹನ ರಸ್ತೆಗಳು, ಬಡಾವಣೆಗಳಲ್ಲಿನ ಕೊಂಡಿ ರಸ್ತೆಗಳು ಹೊಸ ಚಹರೆ ಹೊತ್ತಿವೆ. ಬಿಬಿಎಂಪಿಯ ಹಲವು ಯೋಜನೆಗಳು, ಲೋಕೋಪಯೋಗಿ ಇಲಾಖೆ, ಕೆ.ಆರ್.ಡಿ.ಸಿ.ಎಲ್, ಆರ್‌ಡಿಪಿಆರ್, ಪಿಎಂಜಿಎಸ್‌ವೈ, ಸಿಎಂಜಿಎಸ್‌ವೈ, ಅಸ್ಸೈಡ್, ಪಿಪಿಪಿ ಹಾಗೂ ಇನ್ನಿತರೆ ಮೂಲಗಳಿಂದ ವಿವಿಧ ಸ್ತರದ ರಸ್ತೆಗಳನ್ನು ನಿರ್ಮಿಸಲಾಯಿತು.**

- ಹೆಚ್.ಎ.ಎಲ್ ಮುಖ್ಯ ರಸ್ತೆಯಿಂದ ದೊಡ್ಡ ನೆಕ್ಕುಂದಿ, ಹೊರ ವರ್ತುಲ ರಸ್ತೆ, ಚಿನ್ನಪ್ಪನಹಳ್ಳಿ ಬಡಾವಣೆ, ಗ್ರಾಫೈಟ್ ಇಂಡಿಯಾ ಮೂಲಕ ಐ.ಟಿ.ಪಿ.ಎಲ್ ರಸ್ತೆ ನಿರ್ಮಾಣವು ಮಾರತ್‌ಹಳ್ಳಿ ಹಾಗೂ ಕುಂದಲಹಳ್ಳಿ ಜಂಕ್ಷನ್ ಗಳಲ್ಲಿ ವಾಹನ ದಟ್ಟಣೆಯನ್ನು ಸರಾಗಗೊಳಿಸಿತು ಹಾಗೂ ಅಂತರವನ್ನೂ ಕಡಿಮೆ ಮಾಡಿತು. ಸರ್ಜಾಪುರ ರಸ್ತೆಯಿಂದ ಗೇರ್ ಕಾಲೇಜು, ದೇವರಬಿಸನಹಳ್ಳಿ ಮಾರ್ಗ ಹೊರ ವರ್ತುಲ ರಸ್ತೆ ನಿರ್ಮಾಣದಿಂದ ಸುಮಾರು 4 ಕಿ.ಮೀ ಅಂತರ ಕಡಿಮೆಯಾಯಿತು. ರಾಷ್ಟ್ರೀಯ ಹೆದ್ದಾರಿ 4ರಿಂದ ಮೇಡಹಳ್ಳಿ, ಕುರುಡುಸೊಣ್ಣೇನಹಳ್ಳಿ, ಬೆಳತೂರು ಮಾರ್ಗ ಕಾಡುಗೋಡಿ ಸೇರುವ ರಸ್ತೆ ನಿರ್ಮಾಣದಿಂದ ಐ.ಟಿ.ಪಿ.ಎಲ್ ಪ್ರಯಾಣ ಮಾಡುವವರಿಗೆ ಸಮಯದ ಉಳಿತಾಯ, ಇಂಧನ ಉಳಿತಾಯ ಹಾಗೂ ಸುರಕ್ಷಿತ ಪ್ರಯಾಣ. ಬೈರತಿ ಬಿಳಿಶಿವಾಲೆ ರಸ್ತೆಯಿಂದ ರಾಂಪುರ, ಹಿರಂಡಹಳ್ಳಿ ಮಾರ್ಗವಾಗಿ ಆವಲಹಳ್ಳಿ ರಸ್ತೆ ಮೂಲಕ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ. ದೊಮ್ಮಸಂದ್ರದಿಂದ ಸೂಲಿಕುಂಟೆ, ಸೂಲಿಕುಂಟೆ ಕಾಲೋನಿ, ಚಿಕ್ಕನಾಯಕನಹಳ್ಳಿ ದಿನ್ನೆ ಮಾರ್ಗವಾಗಿ ಮಾತಾ ಅಮೃತಾನಂದಮಯಿ ಕಾಲೇಜಿನ ಬಳಿ ಪರಪ್ಪನ ಅಗ್ರಹಾರ ಸೇರುವ ರಸ್ತೆ.
- ಕೆಂಪೇಗೌಡ ಬಸ್ ನಿಲ್ದಾಣದಿಂದ ಮಹದೇವಪುರ ಕ್ಷೇತ್ರದ ಐ.ಟಿ.ಪಿ.ಎಲ್ ಗೆ ಪ್ರತಿ ನಿಮಿಷಕ್ಕೆ ಒಂದರಂತೆ ವೋಲ್ವೋ ಬಸ್ (ಸಂಖ್ಯೆ 335E) ಸೌಕರ್ಯವನ್ನು ಒದಗಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರು ಕಡಿಮೆ ಖರ್ಚಿನಲ್ಲಿ, ಕಡಿಮೆ ಸಮಯದಲ್ಲಿ ಬೆಂಗಳೂರು ನಗರಕ್ಕೆ ಬಂದು ಹೋಗಬಹುದು. ಇಪಿಐಪಿ ಪ್ರದೇಶದಲ್ಲಿ 36 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಟಿಟಿಎಂಸಿ ಬಸ್ ನಿಲ್ದಾಣವನ್ನು ಸ್ಥಾಪಿಸಲಾಯಿತು. ಕೊಡತಿ ಮತ್ತು ಗುಂಜೂರಿನಲ್ಲಿ ಹೊಸದಾಗಿ ಬಸ್ ಡಿಪೋಗಳನ್ನು ನಿರ್ಮಿಸಲಾಯಿತು. ಗ್ರಾಮೀಣ ಭಾಗಕ್ಕೂ ಸುಗಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಒಟ್ಟು 50ಕ್ಕೂ ಹೆಚ್ಚು ಬಿಎಂಟಿಸಿ ಹೊಸ ಬಸ್ ಮಾರ್ಗಗಳು ಆರಂಭವಾದವು.
- **ಮೇಲು ಸೇತುವೆಗಳು:** ಹೊರ ವರ್ತುಲ ರಸ್ತೆ ಅಭಿವೃದ್ಧಿ ಪಡಿಸಿದ್ದು, ಬೆಳ್ಳಂದೂರು, ದೇವರಬಿಸನಹಳ್ಳಿ, ಕಾಡುಬಿಸನಹಳ್ಳಿ ಮೇಲು ಸೇತುವೆಗಳು ನಿರ್ಮಾಣವಾಗಿದ್ದು, ದೊಡ್ಡನೆಕ್ಕುಂದಿ ಬಳಿ ಮೇಲು ಸೇತುವೆ ಕಾಮಗಾರಿ ಪೂರ್ಣಗೊಂಡಿದೆ.



## 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

- ಬಸ್ ತಂಗುದಾಣಗಳು: ಗ್ರಾಮಾಂತರ ಭಾಗದ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಪ್ರಯಾಣಿಕರ ಹಿತದೃಷ್ಟಿಯಿಂದ ಬಸ್ ತಂಗುದಾಣಗಳ ನಿರ್ಮಾಣವಾಗಿದ್ದು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯ ಪ್ರಮುಖ ಸ್ಥಳಗಳಲ್ಲಿ ಬಸ್ ತಂಗುದಾಣಗಳ ನಿರ್ಮಾಣವಾಗಿರುತ್ತದೆ.
- ಪಾದಚಾರಿ ಮೇಲು ಸೇತುವೆಗಳು: ಪಾದಚಾರಿಗಳ ಹಿತದೃಷ್ಟಿಯಿಂದ ಮಾರತ್ತಹಳ್ಳಿ ಬ್ರಿಡ್ಜ್ ಬಳಿ, ಸ್ಪೈಸ್ ಗಾರ್ಡನ್, ಹೊರ ವರ್ತುಲ ರಸ್ತೆ ಇಕೋ ಸ್ಪೇಸ್ ಬಳಿ ಪಾದಚಾರಿ ಮೇಲು ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ.
- **ರೈಲ್ವೆ ಓವರ್ ಬ್ರಿಡ್ಜ್:** ಕಾಡುಗೋಡಿ ಮತ್ತು ಹೂಡಿಯಲ್ಲಿ ಆರ್.ಓ.ಬಿ (ರೈಲ್ವೆ ಓವರ್ ಬ್ರಿಡ್ಜ್) ಮತ್ತು ಸರ್ಜಾಪುರ ರಸ್ತೆಯಲ್ಲಿ ರೈಲ್ವೇ ಮೇಲು ಸೇತುವೆ ನಿರ್ಮಾಣ ಮಾಡಿ ಸಂಚಾರವನ್ನು ಸುಗಮಗೊಳಿಸಲಾಗಿದೆ, ಕಾಡುಗೋಡಿಯಲ್ಲಿ ರೈಲ್ವೇ ಪಾದಚಾರಿ ಮೇಲು ಸೇತುವೆ ನಿರ್ಮಾಣ ಮಾಡಲಾಗಿದೆ.
- ಕಾಡುಗೋಡಿ ಚಿಕ್ಕಗೇಟ್ ರೈಲ್ವೆ ಅಂಡರ್‌ಪಾಸ್ ಕಾಮಗಾರಿ ಪರ್ಣಗೊಂಡು ಬಳಕೆಯಲ್ಲಿದೆ. ಹಾಗೆಯೇ ಕಾರ್ಮೆಲರಾಮ್ ಚಿನ್ನಪ್ಪನಹಳ್ಳಿ ಮತ್ತು ಕಾಡುಗೋಡಿಗಳಲ್ಲಿ - ಒಟ್ಟು 3 ಕಡೆಗಳಲ್ಲಿ ರೈಲ್ವೆ ಓವರ್‌ಬ್ರಿಜ್ ಮಂಜೂರಾದವು.
- ಪಣತ್ತೂರಿನಲ್ಲಿ ಸಿಡಿಪಿ ರಸ್ತೆಯಲ್ಲಿ ರೈಲ್ವೆ ಓವರ್‌ಬ್ರಿಜ್ ಮಂಜೂರಾಗಿದೆ.
- **ಹೂಡಿಯಲ್ಲಿ ರೈಲ್ವೆ ನಿಲ್ದಾಣ ಕಾರ್ಯಾರಂಭ:** ದೇಶದಲ್ಲೇ ಮೊದಲ ಬಾರಿಗೆ ಮಾನ್ಯ ಸಂಸದ ಶ್ರೀ ಪಿ.ಸಿ. ಮೋಹನ್‌ರವರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಿಂದ ಹೂಡಿಯಲ್ಲಿ ರೈಲ್ವೆ ನಿಲ್ದಾಣ ನಿರ್ಮಾಣವಾಗಿ ಕಾರ್ಯಾರಂಭಗೊಂಡಿದ್ದು ಸಾವಿರಾರು ಮಂದಿ ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಹಾಗೂ ಕಾರ್ಮೆಲರಾಮ್ ನಲ್ಲಿ ರೈಲ್ವೆ ನಿಲ್ದಾಣವನ್ನು ಸುಸಜ್ಜಿತವಾಗಿ ಉನ್ನತೀಕರಿಸಲಾಗಿದೆ.
- **ಪ್ರಗತಿಪಥದಲ್ಲಿ ಮೆಟ್ರೋ... :** ಬೈಯ್ಯಪ್ಪನಹಳ್ಳಿಯಿಂದ ಐ.ಟಿ.ಪಿ.ಎಲ್ ಮಾರ್ಗ ಕಾಡುಗೋಡಿ ವರೆಗಿನ 2ನೇ ಹಂತದ ಮೆಟ್ರೋ ಕಾಮಗಾರಿಯು ಪ್ರಗತಿಯಲ್ಲಿದೆ ಹಾಗೂ ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೋ ಸೇವೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮೆಟ್ರೋ ಸೇವೆಯನ್ನು ರಾ.ಹೆ.4ರಿಂದ ಕಾಟಂನಲ್ಲೂರುವರೆಗೆ ವಿಸ್ತರಿಸಲು ಉದ್ದೇಶಿಸಿದೆ.
- **ಬಿ.ಎಂ.ಟಿ.ಸಿ ಘಟಕಗಳು:** ಮಹದೇವಪುರ ಕ್ಷೇತ್ರದ ಇ.ಪಿ.ಐ.ಪಿ ವಲಯದಲ್ಲಿ ಟಿ.ಟಿ.ಎಂ.ಸಿ, ಗುಂಜೂರು, ಮಂಡೂರು ಗ್ರಾಮಗಳಲ್ಲಿ ನೂತನ ಬಿ.ಎಂ.ಟಿ.ಸಿ ಘಟಕಗಳು ಪ್ರಾರಂಭವಾಗಿದ್ದು ಬಹುತೇಕ ಎಲ್ಲಾ ಗ್ರಾಮಗಳಿಗೆ ಬಿ.ಎಂ.ಟಿ.ಸಿ ಬಸ್ ಸೇವೆಯನ್ನು ಕಲ್ಪಿಸಲಾಗಿದೆ.

### ● ವಸತಿಹೀನರಿಗೆ ಮನೆ, ಹಕ್ಕುಪತ್ರಗಳ ನೀಡಿಕೆ

- ಬಿಬಿಎಂಪಿ ವ್ಯಾಪ್ತಿಯ ಆಲ ಸರ್ಕಾರಿ ಪ್ರದೇಶಗಳ ಪೈಕಿ 39 ವಸತಿಪ್ರದೇಶಗಳ ನಿವಾಸಿಗಳ ಮನೆಗಳನ್ನು ಗುರುತಿಸಿ ಹಕ್ಕುಪತ್ರಗಳನ್ನು ನೀಡಲು ಕಾಯ್ದಿರಿಸಲಾಯಿತು. ಈ ಪೈಕಿ 800ಕ್ಕೂ ಹೆಚ್ಚು ನಿವಾಸಿಗಳಿಗೆ ಹಕ್ಕುಪತ್ರ ವಿತರಣೆಯಾಗಿದ್ದು ಇನ್ನೂ ಸುಮಾರು 6 ಸಾವಿರ ಹಕ್ಕುಪತ್ರಗಳನ್ನು ನೀಡುವ ಪ್ರಕ್ರಿಯೆ ಮುಂದುವರೆದಿದೆ. ಇನ್ನುಳಿದ 9 ವಸತಿಪ್ರದೇಶಗಳ ನಿವಾಸಿಗಳಿಗೆ ಹಕ್ಕುಪತ್ರವನ್ನು ನೀಡಲು ಜಮೀನು ಕಾಯ್ದಿರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ನಿವೇಶನ ಇಲ್ಲದ ನಗರ ಬಡ ನಿವಾಸಿಗಳಿಗೆ ಸಾದರಮಂಗಲ ಮತ್ತು ವರ್ತೂರಿನಲ್ಲಿ 488 ಮನೆಗಳನ್ನು ಕಟ್ಟಿಸಿಕೊಡಲಾಗಿದೆ.
- ಗ್ರಾಮಾಂತರ ಭಾಗದಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡ 700ಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದೆ; ಇನ್ನೂ 32 ಗ್ರಾಮಗಳಲ್ಲಿನ ಸುಮಾರು 1800 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲು ಜಮೀನು ಕಾಯ್ದಿರಿಸಲಾಗುತ್ತಿದೆ. 'ಬಸವ ವಸತಿ

ಯೋಜನೆ' ಮೂಲಕ ಸರ್ಕಾರದ ತಲಾ 75 ಸಾವಿರ ರೂ. ಸಹಾಯಧನದಲ್ಲಿ 1240 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ; ನಿವೇಶನ ಹೊಂದಿದವರಿಗೆ ಇದೇ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಡಲಾಗುವುದು.

- 94(ಸಿ) ಮತ್ತು 94 (ಸಿಸಿ) ಅಡಿಯಲ್ಲಿ ಸರ್ಕಾರಿ ಜಾಗಗಳಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನ ನೋಂದಣಿ ಮಾಡಿಸುವ ಕಾರ್ಯ ಪ್ರಗತಿಯಲ್ಲಿದೆ.
- ಮಾರತ್ತಹಳ್ಳಿ ಮತ್ತು ಸೂಲಿಕುಂಟೆಗಳಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ.

- ಹಲವು ದಶಕಗಳಿಂದ ನನೆಗುದಿಗೆ ಬಿದ್ದಿದ್ದ ದೇವರಬಿಸನಹಳ್ಳಿ, ಕೆಂಪಾಪುರ ಕಾಲೋನಿ, ಗೊರವಿಗೆರೆ, ಕನ್ನಮಂಗಲ ದಿನ್ನೆ, ಹುಸ್ಕೂರು ಕೋಡಿ, ಬಸವಣ್ಣ ನಗರ, ಕಾವೇರಿ ನಗರ, ವಿಜಯನಗರ, ಗಾಂಧೀಪುರ ಮತ್ತಿತರೆ ಗ್ರಾಮಗಳಲ್ಲಿ ಸರ್ಕಾರಿ ಜಾಗದಲ್ಲಿ 30 ವರ್ಷಗಳಿಂದಲೂ ಮನೆ ಕಟ್ಟಿಕೊಂಡಿದ್ದವರಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ.

## ● ಒತ್ತುವರಿ ತೆರವು ಮಾಡಿ 270 ಎಕರೆ ರಕ್ಷಣೆ

- ಮಹದೇವಪುರದಲ್ಲೂ ಒತ್ತುವರಿಯಾದ ಸರ್ಕಾರಿ ಭೂಮಿಯನ್ನು ಭಾರೀ ಪ್ರಮಾಣದಲ್ಲಿ ಪೂರ್ವನಿಗದಿತ ಸಾರ್ವಜನಿಕ ಚಟುವಟಿಕೆಗಳಿಗೆ, ಕಾರ್ಯಕ್ರಮಗಳಿಗೆ ಮೀಸಲಿಡಲಾಗಿದೆ. ಅವುಗಳಿಗೆ ಬೇಲಿ ರಕ್ಷಣೆ ಒದಗಿಸಿದೆ. ಒಟ್ಟಾರೆ 270ಕ್ಕೂ ಹೆಚ್ಚು ಎಕರೆ ಪ್ರದೇಶವನ್ನು ಹೀಗೆ ಒತ್ತುವರಿಯಿಂದ ತೆರವುಗೊಳಿಸಿದೆ. ಹೀಗೆ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕ ಬಳಕೆಗಾಗಿ ಮೀಸಲಿರಿಸಿದ ಒಟ್ಟಾರೆ ಪ್ರದೇಶದ ಮೌಲ್ಯ ಎಕರೆಗೆ 5 ಕೋಟಿ ರೂ.ಗಳ ಕನಿಷ್ಠ ಅಂದಾಜಿನಲ್ಲೇ 1350 ಕೋಟಿ ರೂ. ದಾಟುತ್ತದೆ. ಈ ಪೈಕಿ ಹಲವೆಡೆ ಉದ್ಯಾನವನಗಳಿವೆ; ಶಾಲೆಗಳಿವೆ; ಕೆರೆಗಳಿವೆ; ಸ್ಮಶಾನಗಳೂ ಇವೆ! ಇವೆಲ್ಲವೂ ಈಗ ಸರ್ಕಾರದ ವಶಕ್ಕೆ ಬಂದಿವೆ.

## ● ಕುಡಿಯುವ ನೀರು, ಗ್ರಾಮಗಳಿಗೆ ಕಾವೇರಿ ನೀರು ಮತ್ತು ಒಳಚರಂಡಿ ಸೌಲಭ್ಯ

- ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಯಾದ 110 ಗ್ರಾಮಗಳ ಪೈಕಿ ಮಹದೇವಪುರದ 31 ಗ್ರಾಮಗಳಿದ್ದು ಅವುಗಳಿಗೆ ಕಾವೇರಿ ನೀರಿನ ಸೌಲಭ್ಯ ಕಲ್ಪಿಸಲು ಕೇಂದ್ರ ನಗರಾಭಿವೃದ್ಧಿ ಸಚಿವರನ್ನು, ಸಂಸದರನ್ನು ಭೇಟಿ ಮಾಡಿ ಪ್ರಸ್ತಾವನೆಯನ್ನು ಪ್ರಥಮ ಅಧ್ಯತೆಯ ಮೇಲೆ ಅನುಮೋದನೆ ಮಾಡಿಸಿ, ಸದರಿ ಗ್ರಾಮಗಳಿಗೆ ಕಾವೇರಿ ನೀರಿನ ಪೈಪ್ ಲೈನ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಹಾಲಿ ಸದರಿ ಗ್ರಾಮಗಳಿಗೆ ಕೊಳವೆ ಬಾವಿಗಳ ಮೂಲಕ ಸಮರ್ಪಕ ನೀರು ಸರಬರಾಜು ಮಾಡಲಾಗುತ್ತಿದೆ.
- **ಎಲ್ಲಾ ಗ್ರಾಮಗಳಿಗೆ ಕೊಳವೆ ಬಾವಿಗಳು:** ಗ್ರಾಮಾಂತರ ಭಾಗಗಳಲ್ಲಿ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗದ ವತಿಯಿಂದ 162 ಕೊಳವೆ ಬಾವಿ ಸ್ಥಾಪನೆ ಆಗಿದೆ. ಮಹದೇವಪುರ ಕ್ಷೇತ್ರದ ಗ್ರಾಮಾಂತರ ಭಾಗದಲ್ಲಿರುವ 11 ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಾಮಗಳಿಗೆ ಅಗತ್ಯ ಕೊಳವೆ ಬಾವಿಗಳನ್ನು ಕೊರೆಸಿ ಸಮರ್ಪಕ ನೀರು ಸರಬರಾಜು ಮಾಡಲಾಗುತ್ತಿದೆ.
- **ಶುದ್ಧ ಕುಡಿಯುವ ನೀರು:** ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಅದ್ಯತೆಯ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ.
- ಹಳೆ ಸಿಎಂಸಿ ಪ್ರದೇಶದ ಗ್ರಾಮಗಳಿಗೆ ಕಾವೇರಿ ನೀರು ಪೂರೈಸಲು ಸುಮಾರು 40 ಕೋಟಿ ರೂ.ಗಳ ವೆಚ್ಚದಲ್ಲಿ ಕೊಳವೆ ಮಾರ್ಗ
- ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳ ಪೈಕಿ 34 ಗ್ರಾಮಗಳಿಗೆ ಒಳಚರಂಡಿ ಕಾರ್ಯಕ್ರಮವನ್ನು ಅಳವಡಿಸಲು, ಕುಡಿಯುವ ನೀರು ಒದಗಿಸಲು ಕ್ರಮ

**ಕಾವೇರಿ ನೀರು: ಹಳೇ ಸಿ.ಎಂ.ಸಿ ವ್ಯಾಪ್ತಿಯಲ್ಲಿನ ಎಲ್ಲಾ ಪ್ರದೇಶಗಳಲ್ಲಿ ಯು.ಜಿ.ಡಿ ಮತ್ತು ಕಾವೇರಿ ನೀರಿನ ಸೌಲಭ್ಯ ಒದಗಿಸಲಾಗಿದೆ.**

- ಹೂವಾಯ್ ಸಾಫ್ಟ್‌ವೇರ್ ಸಂಸ್ಥೆಯ ಸಹಯೋಗದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಶಾಸಕರ ನಿಧಿ ಹಾಗೂ ಸಂಸ್ಥೆಯ ತಲಾ ನಾಲ್ಕು ಲಕ್ಷ ರೂಗಳ ವೆಚ್ಚದಲ್ಲಿ ಪಣತ್ತೂರು, ಮುಳ್ಳೂರು, ನಲ್ಲೂರಹಳ್ಳಿ ಮತ್ತು ಸೀತಾರಾಮಪಾಳ್ಯಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು

## 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

ಪೂರ್ಣಗೊಳಿಸಲಾಗಿದೆ. ಈ ಮಾದರಿಯಲ್ಲೇ ಈ ವರ್ಷದಲ್ಲಿ ಅಆದೂರು, ಗುಂಜೂರುಪಾಳ್ಯ, ವಿಜಯನಗರ, ಇಮ್ಮಡಿಹಳ್ಳಿ, ದೊಡ್ಡನೆಕ್ಕುಂದಿ ಕಾಲೋನಿ ಮತ್ತು ಕಾಡುಗೋಡಿಯ ಪಟಾಲಮ್ಮ ಬಡಾವಣೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಆರಂಭಗೊಳ್ಳಲಿವೆ.

### ● ಆರೋಗ್ಯಕೇಂದ್ರಗಳ ಸ್ಥಾಪನೆ, ಉಚಿತ ತಪಾಸಣೆ, ಚಿಕಿತ್ಸೆ

- ಎರಡು ಮೆಗಾ ಹೆಲ್ತ್ ಕ್ಯಾಂಪ್‌ಗಳೂ ಸೇರಿದಂತೆ ಆರು ವೈದ್ಯಕೀಯ ಶಿಬಿರಗಳು ನಡೆದಿವೆ. ವರ್ತೂರಿನಲ್ಲಿ ನಡೆದ ಮೆಗಾ ಹೆಲ್ತ್ ಕ್ಯಾಂಪಿನಲ್ಲಿ 13700 ರೋಗಿಗಳನ್ನು ಉಚಿತ ಬಸ್ ವ್ಯವಸ್ಥೆಯ ಮೂಲಕ ಕರೆತಂದು ಎರಡು ದಿನ ಊಟದ ವ್ಯವಸ್ಥೆಯನ್ನೂ ಮಾಡಿ, ಹತ್ತು ದಿನಗಳಿಗಾಗುವಷ್ಟು ಔಷಧಗಳನ್ನೂ ಉಚಿತವಾಗಿ ನೀಡಲಾಗಿದೆ.
- ಮಂಡೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಂದಿದೆ. ಕಾಡುಗೋಡಿ, ದೊಡ್ಡ ನೆಕ್ಕುಂದಿ, ವರ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿ ಕಾಮಗಾರಿ ಸಂಪೂರ್ಣವಾಗಿದೆ. ವರ್ತೂರು, ಆವಲಹಳ್ಳಿ, ದೊಡ್ಡ ನೆಕ್ಕುಂದಿ, ಕಾಡುಗೋಡಿ ಕೇಂದ್ರಗಳೀಗ 24/7 ಗಂಟೆಗಳಲ್ಲೂ ಸಾರ್ವಜನಿಕ ಸೇವೆಗಾಗಿ ತೆರೆದಿರುತ್ತವೆ. ಇದಲ್ಲದೆ ದೊಡ್ಡ ನೆಕ್ಕುಂದಿ ಆಸ್ಪತ್ರೆಯಲ್ಲೂ ಹಗಲು - ರಾತ್ರಿಯೆನ್ನದೆ ಸಾರ್ವಜನಿಕರಿಗಾಗಿ ಸೇವೆ ನೀಡಲಾಗುತ್ತಿದೆ.
- ಪ್ರಾಥಮಿಕ ಆರೋಗ್ಯ ಕೇಂದ್ರಗಳು: ಕೊಡತಿ, ಹಾಲನಾಯಕನಹಳ್ಳಿ, ಹೂಡಿ, ಕಣ್ಣೂರು, ಬಿದರಹಳ್ಳಿ ಮತ್ತು ಮಾರತ್‌ಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಿದೆ. ಇವುಗಳ ಕಟ್ಟಡ ಕಾಮಗಾರಿಗೆ ಶ್ರೀ ಅರವಿಂದ ಲಿಂಬಾವಳಿಯವರು ಆರೋಗ್ಯ ಸಚಿವರಾಗಿದ್ದಾಗಲೇ ಹಣ ಬಿಡುಗಡೆ ಮಾಡಲಾಗಿತ್ತು. ಬಿದರಹಳ್ಳಿ ಹೊರತುಪಡಿಸಿ ಉಳಿದೆಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ, ಆವಲಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಕ್ಷೇತ್ರದಲ್ಲಿನ ಬಹುತೇಕ ಎಲ್ಲಾ ಆಸ್ಪತ್ರೆಗಳಲ್ಲಿ 24/7ಸೇವೆಯನ್ನು ಒದಗಿಸಲಾಗಿದೆ.
- ಆವಲಹಳ್ಳಿಯಲ್ಲಿ ಸಮುದಾಯ ಆರೋಗ್ಯ ಕೇಂದ್ರವಿದೆ. ಬಿದರಹಳ್ಳಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ.

# 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

## ● ಅಪಾರ್ಟ್‌ಮೆಂಟ್ ನಿವಾಸಿಗಳ ಸಮಸ್ಯೆಗಳಿಗೆ ಪರಿಹಾರ

- ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ನೂರಾರು ಅಪಾರ್ಟ್‌ಮೆಂಟ್‌ಗಳಿವೆ. ಇಲ್ಲಿನ ನಿವಾಸಿಗಳು ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಶನ್ ಸ್ಥಾಪಿಸಿಕೊಂಡಿದ್ದಾರೆ. ಅರವಿಂದ ಲಿಂಬಾವಳಿ ಯವರ ಬಳಿ ಅವರು ಹಲವು ಸಮಸ್ಯೆಗಳ ಬಗ್ಗೆ ನಿವೇದಿಸಿಕೊಂಡಿದ್ದರು. ಅವುಗಳಲ್ಲಿ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡಿರುತ್ತಾರೆ.

## ● ಉದ್ಯೋಗ ಮೇಳಗಳು, ಕೌಶಲ್ಯ ಕೇಂದ್ರ

**ಯುವಕರಿಗೆ ಕೆಲಸ ದೊರಕಿಸಲು ಉದ್ಯೋಗ ಮೇಳ, ಸಾರ್ವಜನಿಕ ಬಳಕೆಗಾಗಿ ಹಲವೆಡೆ ಸಮುದಾಯ ಭವನಗಳು, ಸುರಕ್ಷತೆಗಾಗಿ ಪೊಲೀಸ್ ಠಾಣೆ, ಅಗ್ನಿಶಾಮಕ ಠಾಣೆ, ಸುಸಜ್ಜಿತ ವಿದ್ಯುತ್ ಚಿತಾಗಾರ, ದುರ್ಬಲರು, ಅಶಿಕ್ಷಿತರಿಗೆ ವಿವಿಧ ಬಗೆಯ ತರಬೇತಿಗಳು, ಅಂಬೇಡ್ಕರ್ ಭವನಗಳು, ಶಿಕ್ಷಣ ನೀಡಲು ವಿವಿಧ ಶಾಲಾ-ಕಾಲೇಜುಗಳು, ನೀರು ಸಂಗ್ರಹಕ್ಕೆ ಟ್ಯಾಂಕ್‌ಗಳು, ವಿಧವಾ-ವೃದ್ಧಾಪ್ಯ ವೇತನಗಳು, ಶಾಸಕರ ಅನುದಾನದಿಂದ ವಿವಿಧ ಕಾಮಗಾರಿಗಳು - ಹೀಗೆ ಅರವಿಂದ ಲಿಂಬಾವಳಿಯವರು ಕ್ಷೇತ್ರದ ಸಾಮಾಜಿಕ ಅಭಿವೃದ್ಧಿಗಾಗಿ ಹಲವು ಆಯಾಮಗಳಲ್ಲಿ ಕೆಲಸ ಮಾಡಿದ್ದಾರೆ.**

## ● ಸಾಮರಸ್ಯದ ನಾಡಾಗಿ ಮಹದೇವಪುರ ಕ್ಷೇತ್ರದ ಅಭಿವೃದ್ಧಿ

- ಸ್ವಾಮಿ ವಿವೇಕಾನಂದ, ವೇಮನ, ಕೆಂಪೇಗೌಡ, ಬಸವೇಶ್ವರ, ಕನಕದಾಸರು, ಡಾ|| ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನರಾಂ, ದ್ರೌಪದಮ್ಮ ಕರಗ ಮಹೋತ್ಸವ ಸಿದ್ಧರಾಮೇಶ್ವರರು, ಸ್ವಾಮಿ ಯೋಗಿನಾರಾಯಣ, ಸೋದರಿ ನಿವೇದಿತಾ, ಪಂ| ದೀನದಯಾಳ ಉಪಾಧ್ಯಾಯ - ಹೀಗೆ ನಾಡಿನ ಮಹಾಪುರುಷರ ಜಯಂತಿಗಳ ಆಚರಣೆಯ ಹೊಸ ಪರಂಪರೆಯಿಂದಾಗಿ ಮಹದೇವಪುರ ಕ್ಷೇತ್ರದಲ್ಲಿ ಸಮನ್ವಯದ ಗಾಳಿ ಬೀಸಿತು. ಸಾಮರಸ್ಯದ ಸಂದೇಶ ಬೀರುವ ಈ ಕಾರ್ಯಕ್ರಮಗಳಲ್ಲಿ ಜನರು ಪಕ್ಷಬೇಧ ಮರೆತು ಸಾವಿರಾರು ಸಂಖ್ಯೆಯಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸಿದ್ದರು. ಬಹುಶಃ ಕ್ಷೇತ್ರವು ಶಾಂತ, ಸೌಹಾರ್ದ ವಾತಾವರಣದಿಂದಲೇ ಕೂಡಿರುವುದಕ್ಕೆ ಇಂಥ ಸಾಮಾಜಿಕ ಸಾಮರಸ್ಯದ ಆಚರಣೆಗಳೇ ಕಾರಣ. ಸಮಾಜಕ್ಕೆ ಸಂದೇಶ ನೀಡುವ ಇಂಥ ಮಹಾಪುರುಷರ ಜಯಂತಿಗಳನ್ನು ಆಚರಿಸುವ ಪರಂಪರೆಗೆ ಅರವಿಂದ ಲಿಂಬಾವಳಿ ನಾಂದಿ ಹಾಡಿದರು.
- ಕ್ಷೇತ್ರದಲ್ಲಿ ಎರಡು ಉದ್ಯೋಗ ಮೇಳಗಳು ನಡೆದಿವೆ. ಇಮ್ಮಡಿಹಳ್ಳಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಮೊದಲ ಮೇಳದಲ್ಲಿ 700 ಜನರಿಗೆ ಉದ್ಯೋಗ ದೊರಕಿದರೆ, ನ್ಯೂ ಹಾರಿಜಾನ್ ಕಾಲೇಜು ಕ್ಯಾಂಪಸ್‌ನಲ್ಲಿ ನಡೆದ ಎರಡನೇ ಮೇಳದಲ್ಲಿ 810 ಜನರಿಗೆ ಕೆಲಸ ಸಿಕ್ಕಿತು.ಬಿದರಹಳ್ಳಿ ಈಸ್ಟ್ ಪಾಯಿಂಟ್ ಕಾಲೇಜಿನಲ್ಲಿ ನಡೆದ ಮೇಳದಲ್ಲಿ 522 ಜನರಿಗೆ ಕೆಲಸ ದೊರೆಯಿತು.
- ಭಾರತವನ್ನು ಜಗತ್ತಿನ ಕೌಶಲ್ಯ ಕೇಂದ್ರವನ್ನಾಗಿ ರೂಪಾಂತರಿಸಲೆಂದೇ ವೃತ್ತಿ ಶಿಕ್ಷಣವನ್ನು ಇನ್ನಷ್ಟು ಆಕರ್ಷಕಗೊಳಿಸಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಇದರ ಭಾಗವಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯವು ದೇಶದ ಪ್ರತಿಯೊಂದೂ ಜಿಲ್ಲೆಯಲ್ಲಿ ಮಾದರಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಅತ್ಯಾಧುನಿಕವಾದ ಸೌಲಭ್ಯಗಳನ್ನು ಹೊಂದಿರುವ ಈ ಕೇಂದ್ರಗಳನ್ನು ಪ್ರಧಾನಮಂತ್ರಿ ಕೌಶಲ್ಯ ಕೇಂದ್ರ (ಪಿಎಂಕೆಕೆ) ಎಂದು ಕರೆಯಲಾಗಿದೆ. ಅರ್ಹತೆ ಆಧಾರಿತ ಕೌಶಲ್ಯ ತರಬೇತಿ ನೀಡಿಕೆ, ಕೌಶಲ್ಯ ತರಬೇತಿಯಲ್ಲಿ ಗುಣಮಟ್ಟ , ಸುಸ್ಥಿರತೆ ಸಾಧಿಸುವುದು, ಸುಸ್ಥಿರ ಸಾಂಸ್ಥಿಕ ಮಾದರಿಯನ್ನು ರೂಪಿಸುವುದು - ಇವೇ ಪಿಎಂಕೆಕೆಯ

ಉದ್ದೇಶಗಳು. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಪಿಎಂಕೆಕೆ ಕೇಂದ್ರವು ಮಹದೇವಪುರ ವಿಧಾನಸಭಾ ಕ್ಷೇತ್ರದ ಕುಂದಲಹಳ್ಳಿಯಲ್ಲಿ 2018ರ ಜನವರಿ 6ರಂದು ಉದ್ಘಾಟನೆಗೊಂಡಿದೆ. ಈಗ 900 ವಿದ್ಯಾರ್ಥಿಗಳು ಈ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

- ಸಂಸದರ ಅದರ್ಶ ಗ್ರಾಮವಾಗಿ ಯರ್ರಪ್ಪನಹಳ್ಳಿ ಅಭಿವೃದ್ಧಿ: ಮಾನ್ಯ ಸಂಸದ ಶ್ರೀ ಪಿ.ಸಿ. ಮೋಹನ್ ಅವರ ಸಂಸದ್ ಅದರ್ಶ ಗ್ರಾಮವಾಗಿ ಯರ್ರಪ್ಪನಹಳ್ಳಿಯನ್ನು ಆಯ್ಕೆ ಮಾಡಿ ಅಗತ್ಯ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲಾಗಿದೆ. ನಂತರ ಕಾಟಂನಲ್ಲೂರು ಗ್ರಾಮವನ್ನು ಸಂಸದರ ಆದರ್ಶ ಗ್ರಾಮದಡಿ ಆಯ್ಕೆ ಮಾಡಿಕೊಂಡಿದ್ದು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿವೆ.
- **ಸ್ವಚ್ಛಭಾರತ ಅಭಿಯಾನ:** ಸ್ವಚ್ಛಭಾರತ ಅಭಿಯಾನದಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ವಿವಿಧ ಸಂಸ್ಥೆಗಳು ಹಾಗೂ ಕಂಪನಿಗಳ ವತಿಯಿಂದ ಎಲ್ಲಾ ಶಾಲೆಗಳಿಗೆ ಶೌಚಾಲಯ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.

## ● ಶಿಕ್ಷಣ ಸುಧಾರಣೆಯತ್ತ ದಾಪುಗಾಲು

**ಈವರೆಗೂ ಕ್ಷೇತ್ರದ ವಿದ್ಯಾರ್ಥಿನಿಯರು ಎಸೆಸೆಲ್ಸಿ, ಪಿಯುಸಿಗೇ ಓದು ನಿಲ್ಲಿಸುತ್ತಿದ್ದರು. ಈಗ ಚಿತ್ರಣ ಸಂಪೂರ್ಣ ಬದಲಾಗಿದೆ. ಶಾಲೆ-ಕಾಲೇಜುಗಳಿಗೆ ಹೋಗುವವರೇ ಹೆಚ್ಚು. 2008-18 ರ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳು ಭಾರೀ ಸಂಖ್ಯೆಯಲ್ಲಿ ಹೆಚ್ಚಾಗಿವೆ.**

- ಗುಂಜೂರು ಪಾಳ್ಯದಲ್ಲಿ ಟ್ರೀ ಪಾರ್ಕ್ ಗೆ 27 ಎಕರೆ ಜಮೀನು ಮೀಸಲಾಗಿದೆ. ಹೂಡಿಯಲ್ಲಿ ಮಿನಿ ಕ್ರೀಡಾಂಗಣ ಅಭಿವೃದ್ಧಿಯಾಗಿದೆ. ಮಾರತ್‌ಹಳ್ಳಿ ಸರ್ಕಾರಿ ಶಾಲೆಗೆ ಮತ್ತು ಉರ್ದು ಶಾಲೆಗೆ, ಕಾಡುಗೋಡಿ ಉರ್ದು ಶಾಲೆಗೆ ಸರ್ಕಾರಿ ಜಮೀನು ಕಾಯ್ದಿರಿಸಿದೆ.
- ದೊಡ್ಡನೆಕ್ಕುಂದಿ, ಜ್ಯೋತಿಪುರ ಮತ್ತು ಕನ್ನಮಂಗಲ ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗ ಆರಂಭವಾಗಿದೆ. ದೊಡ್ಡಬನಹಳ್ಳಿಯಲ್ಲಿ ಪ್ರೌಢಶಾಲೆ ಸ್ಥಾಪನೆಯಾಗಿದೆ.
- ಕ್ಷೇತ್ರದ ಹಲವು ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳು ಬಂದಿವೆ. ಹಾಗೆಯೇ ತೂಬರಹಳ್ಳಿಯಲ್ಲಿ ವಿಶಿಷ್ಟ ಇ-ಗ್ರಂಥಾಲಯ ನಿರ್ಮಾಣವಾಗಿದೆ. ಹಾಲನಾಯಕನಹಳ್ಳಿ ಗ್ರಂಥಾಲಯವು ಆರಂಭವಾಗಿದೆ. ಬಿಳಿಶಿವಾಲೆಗೆ ಗ್ರಂಥಾಲಯ ಮಂಜೂರಾಯಿತು.
- ಕನ್ನಮಂಗಲ ಸರ್ಕಾರಿ ಪ್ರಾಥಮಿಕ ಶಾಲೆಗೆ ಶಿಕ್ಷಣ ಕಾರ್ಯಪಡೆಯ ಮೂಲಕ ಕ್ರೀಡಾ ಪರಿಕರಗಳನ್ನು ಒದಗಿಸಲಾಯಿತು.
- ಬಿಬಿಎಂಪಿ, ಸರ್ವಶಿಕ್ಷಾ ಅಭಿಯಾನ, ಬಿಡಿಎ, ಶಿಕ್ಷಣ ಕಾರ್ಯಪಡೆ - ಇವುಗಳಡಿಯಲ್ಲಿ ಒಟ್ಟು 120ಕ್ಕೂ ಹೆಚ್ಚು ಶಾಲಾಕೊಠಡಿಗಳನ್ನು ಕಟ್ಟಲಾಯಿತು.
- ಕ್ಷೇತ್ರದಲ್ಲಿನ ಬಹುತೇಕ ಎಲ್ಲಾ ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ.
- **130ಕ್ಕೂ ಹೆಚ್ಚು ಶಾಲಾ ಕೊಠಡಿಗಳ ನಿರ್ಮಾಣ:** ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇರುವುದನ್ನು ಅರಿತು ಸುಮಾರು 130ಕ್ಕೂ ಹೆಚ್ಚು ಶಾಲಾ ಕೊಠಡಿಗಳನ್ನು ಸರ್ಕಾರ ಮತ್ತು ಪಿ.ಪಿ.ಪಿ ಮಾದರಿಯಲ್ಲಿ ನಿರ್ಮಿಸಿ ಕೊಠಡಿಗಳ ಸಮಸ್ಯೆಯನ್ನು ಪರಿಹರಿಸಲಾಗಿದೆ. ಹಾಗೆಯೇ ನೀರು ವ್ಯವಸ್ಥೆ ಇರುವ ಶೌಚಾಲಯಗಳನ್ನೂ ನಿರ್ಮಿಸಲಾಗಿದೆ.
- **ಹೂಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರತ್ಯೇಕ ಕಟ್ಟಡ:** ಹೂಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣ ಮಾಡಿ ಪಾಳಿ ಪದ್ಧತಿಯಲ್ಲಿ ನಡೆಯುತ್ತಿದ್ದ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜನ್ನು ಬೇರ್ಪಡಿಸಿ ಪದವಿ ಪೂರ್ವ ಕಾಲೇಜನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.
- **ಇಮ್ಮಡಿಹಳ್ಳಿ ಮತ್ತು ಚನ್ನಸಂದ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು:** ಇಮ್ಮಡಿಹಳ್ಳಿ ಮತ್ತು ಚನ್ನಸಂದ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು ಪ್ರಾರಂಭವಾಗಿವೆ, ಇಮ್ಮಡಿಹಳ್ಳಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಚನ್ನಸಂದ್ರದಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಅಧಿಕೃತ ಉದ್ಘಾಟನೆ ಆಗದಿದ್ದರೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತರಗತಿಗಳು ನಡೆದಿವೆ.
- **ವರ್ತೂರು ಮತ್ತು ಕಾಡುಗೋಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು:** ವರ್ತೂರು ಮತ್ತು ಕಾಡುಗೋಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಪ್ರಾರಂಭವಾಗಿವೆ. ವರ್ತೂರು ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ; ಕಾಡುಗೋಡಿಯಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭವಾಗಬೇಕಿದೆ.
- ತೂಬರಹಳ್ಳಿಯಲ್ಲಿ ಡಿಜಿಟಲ್ ಗ್ರಂಥಾಲಯಕ್ಕೆ ಕಟ್ಟಡ ನಿರ್ಮಾಣವಾಗಿದೆ.

# 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

- ಹತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳನ್ನು ಹೂವ್ವೆ ಸಂಸ್ಥೆಯ ಸಹಕಾರಿಂದ ನಿರ್ಮಿಸಲಾಗಿದೆ ಹಾಗೂ 250 ಕಂಪ್ಯೂಟರ್‌ಗಳನ್ನು ಶಾಲೆಗಳಿಗೆ ವಿತರಿಸಲಾಗಿದೆ.
- **ಕಾಡುಗೋಡಿಯಲ್ಲಿ ಬಯಲು ಜಿಮ್ ಸ್ಥಾಪನೆ.:** ನ್ಯೂ ಹಾರಿಜನ್ ಕಾಲೇಜಿನ ಸಂಸ್ಥೆಯ ಸಹಕಾರದಲ್ಲಿ ಕಾಡುಗೋಡಿಯಲ್ಲಿ ಬಯಲು ಜಿಮ್ ನಿರ್ಮಿಸಲಾಗಿದ್ದು, ದಿನವೂ ಸಾವಿರಾರು ನಾಗರಿಕರು ಅದನ್ನು ಉಪಯೋಗಿಸುತ್ತಿದ್ದಾರೆ.

## ● ವಿದ್ಯುತ್ ಸೌಕರ್ಯ; ಭಯದ ವಾತಾವರಣ ನಿವಾರಿಸಿದ ಬೀದಿದೀಪಗಳು

**2008ರಲ್ಲಿ ಮಹದೇವಪುರ ಕ್ಷೇತ್ರದ ಬಹಳಷ್ಟು ಪ್ರದೇಶಗಳು ಬೀದಿ ದೀಪಗಳಿಂದ ವಂಚಿತವಾಗಿದ್ದವು. ವಿದ್ಯುತ್ ಸಂಪರ್ಕ, ಬೀದಿ ದೀಪ, ಗುಣಮಟ್ಟದ ವಿದ್ಯುತ್, ಗ್ರಾಮೀಣ ಪ್ರದೇಶಕ್ಕೂ ನಗರಮಟ್ಟದ ವಿದ್ಯುತ್ - ಹೀಗೆ ಎಲ್ಲ ಅಗತ್ಯಗಳನ್ನೂ ಪೂರೈಸಲಾಗಿದೆ.**

- **ಗ್ರಾಮಾಂತರ ಪ್ರದೇಶಗಳಲ್ಲಿ 153 ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್)ಗಳನ್ನು ಅಳವಡಿಸಲಾಗಿದೆ.**
- ಸ್ವಾತಂತ್ರ್ಯ ಬಂದಾಗಿನಿಂದಲೂ ಇಲ್ಲಿನ ಕೆಲವು ಪ್ರದೇಶಗಳಿಗೆ ವಿದ್ಯುತ್ ಸೌಕರ್ಯವೇ ಇರಲಿಲ್ಲ! ಅಲ್ಲೆಲ್ಲ ಈಗ ಬೆಳಕು ಮೂಡಿದೆ. ವಿಮಾನಗಳ ಬೆಳಕಿನಲ್ಲೇ ಬದುಕು ಸವೆಸುತ್ತಿದ್ದ ಬೇಲೂರು ಅಂಬೇಡ್ಕರ್ ನಗರವಾಸಿಗಳ ಮನೆಗಳಿಗೆ ಈಗ ಬೆಳಕು ಹರಿಯಿತು.
- ವರ್ತೂರು ಕೋಡಿ, ಬೆಳ್ಳಂದೂರು ಕೋಡಿಗಳು ದಶಕಗಳಿಂದ ಕತ್ತಲಿನಲ್ಲೇ ಇದ್ದು ಅಪಾಯಕಾರಿ ಮಾರ್ಗಗಳಾಗಿದ್ದವು; ಈ ಹಾದಿಗಳಲ್ಲಿ ಈಗ ಬೀದಿದೀಪ ಅಳವಡಿಸಿದ್ದರಿಂದ ಜನತೆ ಶಾಂತಿಯಿಂದ ಸಂಚರಿಸುವಂತಾಗಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿ 30ಕ್ಕೂ ಹೆಚ್ಚು ಹೈಮಾಸ್ಟ್ ದೀಪಸ್ತಂಭಗಳನ್ನು ಸ್ಥಾಪಿಸಲಾಯಿತು.
- ಗ್ರಾಮಾಂತರ ಭಾಗದ 12 ಗ್ರಾಮಗಳಿಗೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆ ಆಗುತ್ತಿದೆ. ಇದು ಬಹುವರ್ಷಗಳ ಕನಸಾಗಿತ್ತು. ಇದಲ್ಲದೆ ಇಪಿಐಪಿ ಪ್ರದೇಶಕ್ಕೆ ಲೋಡ್ ಶೆಡಿಂಗ್ ತಪ್ಪಿಸಿ ಉತ್ತಮ ವೋಲ್ಟೇಜಿನ ವಿದ್ಯುತ್ ವಿತರಣೆಯಾಗುತ್ತಿದೆ.
- ಕೈಕೊಂಡರಹಳ್ಳಿಯಲ್ಲಿ ಪಿಪಿಪಿ ಮಾದರಿಯಲ್ಲಿ ಅತ್ಯಾಧುನಿಕ ಅಗ್ನಿಶಾಮಕ ಠಾಣೆಯು ಕಾರ್ಯನಿರತವಾಗಿದೆ. ಚನ್ನಸಂದ್ರದಲ್ಲೂ ಇಂಥ ಅಗ್ನಿಶಾಮಕ ಠಾಣೆಗೆ ಜಮೀನು ಕಾಯ್ದಿರಿಸಲಾಯಿತು. ಬೆಳ್ಳಂದೂರು ವಾರ್ಡಿನ ಕೈಕೊಂಡರಹಳ್ಳಿಯಲ್ಲಿ ಪಿ.ಪಿ.ಪಿ ಅಡಿಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲಾಗಿದೆ.

ಸ್ವಚ್ಛ ಭಾರತ ಅಭಿಯಾನ

# 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

- **ಗ್ರಾಮಗಳಿಗೆ ನಿರಂತರ ವಿದ್ಯುತ್ ಸರಬರಾಜು:** ವಿದ್ಯುತ್ ಸಮಸ್ಯೆಯನ್ನು ನಿವಾರಿಸಲು ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಿದ್ದು, ಗ್ರಾಮಾಂತರ ಗ್ರಿಡ್‌ನ ವ್ಯಾಪ್ತಿಯಲ್ಲಿದ್ದ 13 ಗ್ರಾಮಗಳನ್ನು ನಗರ ವಿದ್ಯುತ್ ಗ್ರಿಡ್ ವ್ಯಾಪ್ತಿಗೆ ಸೇರಿಸಿ ನಿರಂತರ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲಾಗಿದೆ.
- **ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಆರಂಭ:** ಕೇಂದ್ರ ಸರ್ಕಾರದ ಯೋಜನೆಯಡಿ ಎಲ್ಲಾ ಮನೆಗಳಿಗೆ ಗ್ಯಾಸ್ ಸಂಪರ್ಕ ನೀಡಲು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಚಾಲನೆ.
- ವಿದ್ಯುತ್ ಸರಬರಾಜು ಘಟಕಗಳು: ಆವಲಹಳ್ಳಿಯಲ್ಲಿ ಹೊಸದಾಗಿ ಬೆಸ್ಕಾಂನ ಓ & ಎಂ ಉಪವಿಭಾಗ ಸ್ಥಾಪನೆಯಾಗಿದೆ; ಸಫಲ್ ಮಾರುಕಟ್ಟೆ (ಕೋನದಾಸಪುರ) ಇಲ್ಲಿ 220 ಎಂ.ವಿ.ಎ ಸ್ಟೇಷನ್ ಸ್ಥಾಪಿಸಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಾಗಿದೆ.

## ● ಸಾರ್ವಜನಿಕ ಸುರಕ್ಷತೆ, ಬಗೆಬಗೆ ಸೌಕರ್ಯ...

- **ಸುರಕ್ಷತೆಗೆ ಸಿ.ಸಿ ಕ್ಯಾಮರಾ:** ಶ್ರೀ ಅರವಿಂದ ಲಿಂಬಾವಳಿಯವರ ಶಾಸಕ ನಿಧಿ (60 ಲಕ್ಷ ರೂ.), ಸಂಸದರ ನಿಧಿ (30 ಲಕ್ಷ ರೂ.), ವಿಧಾನ ಪರಿಷತ್ ಸದಸ್ಯರಾದ ಶ್ರೀ ಲೇಹರ್ ಸಿಂಗ್ (20 ಲಕ್ಷ ರೂ.), ಶ್ರೀ ರಘುನಾಥ ಮಲ್ಕಾಪುರೆ (20 ಲಕ್ಷ ರೂ.) ರವರ ನಿಧಿಯಿಂದ ಕಾಡುಗೋಡಿ, ವರ್ತೂರು, ಮಾರತ್ತಹಳ್ಳಿ, ಹೆಚ್.ಎ.ಎಲ್, ಮಹದೇವಪುರ ಮತ್ತು ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುರಕ್ಷತಾ ದೃಷ್ಟಿಯಿಂದ ಸಿ.ಸಿ ಕ್ಯಾಮರಾ ಅಳವಡಿಸಲು ಹಣ ಬಿಡುಗಡೆ ಮಾಡಲಾಗಿದೆ.
- **ನೂತನ ಆರಕ್ಷಕ ಠಾಣೆಗಳು :** ಸುರಕ್ಷತೆಯ ದೃಷ್ಟಿಯಿಂದ ಆವಲಹಳ್ಳಿ, ಮಾರತ್ತಹಳ್ಳಿ ಮತ್ತು ಬೆಳ್ಳಂದೂರುಗಳಲ್ಲಿ ನೂತನ ಅರಕ್ಷಕ ಠಾಣೆಗಳನ್ನು ಪ್ರಾರಂಭಿಸಲಾಗಿದೆ. ವೈಟ್‌ಫೀಲ್ಡ್‌ನಲ್ಲಿ ಡಿ.ಸಿ.ಪಿ ಕಛೇರಿಗೆ ನೂತನ ಕಟ್ಟಡ ಪಿ.ಪಿ.ಪಿ ಮಾದರಿಯಲ್ಲಿ ಪ್ರಾರಂಭಿಸಲಾಗಿದೆ.

## ● ಅಪರಾಧ ಪ್ರಮಾಣ ಇಳಿಕೆ

- ಬೆಂಗಳೂರು ನಗರದ ಸರಾಸರಿ ಅಪರಾಧ ಪ್ರಮಾಣ ಹೆಚ್ಚಾಗುತ್ತಿದ್ದರೆ, ಮಹದೇವಪುರ ಕ್ಷೇತ್ರದಲ್ಲಿ ಅಪರಾಧಪ್ರಮಾಣವು ಏನಿಲ್ಲವೆಂದರೂ ಶೇ. 25ರಷ್ಟು ಕಡಿಮೆಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ಕ್ಷೇತ್ರದಲ್ಲಿ ದಲಿತರು, ಸವರ್ಣೀಯರು, ಹಿಂದುಳಿದ ಸಮಾಜದ ಜನತೆ - ಎಲ್ಲರೂ ಅನ್ಯೋನ್ಯವಾಗಿ ಬಾಳ್ವೆ ನಡೆಸಿದ್ದಾರೆ. ಇದು ರಾಜ್ಯದಲ್ಲೇ ಒಂದು ವಿಶಿಷ್ಟ ಬೆಳವಣಿಗೆ. ಶಾಂತಿ ಸೌಹಾರ್ದದ ವಾತಾವರಣದ ಸ್ಥಿತಿಯೇ ಮಹದೇವಪುರದ ವೈಶಿಷ್ಟ್ಯ.

## 2008-2018 : ದಶಕದ ಜನಸೇವೆಯ ಮುಖ್ಯಾಂಶಗಳು

### ● ಸಮುದಾಯ ಭವನಗಳು, ಉದ್ಯಾನವನಗಳು

**ಸಾರ್ವಜನಿಕ ಭವನಗಳು: ಶಾಸಕರ ಹಾಗೂ ಸಂಸದರ ನಿಧಿಯಿಂದ ಗ್ರಾಮಾಂತರ ಭಾಗದ ಬಹುತೇಕ ಹಳ್ಳಿಗಳಲ್ಲಿ ಸ್ತ್ರೀ ಶಕ್ತಿ ಭವನ, ಅಂಬೇಡ್ಕರ್ ಭವನ, ಸಮುದಾಯ ಭವನ ನಿರ್ಮಿಸಲಾಗಿದೆ.**

- **ಉದ್ಯಾನವನಗಳು:** ದೊಡ್ಡನೆಕ್ಕುಂದಿ ವಾರ್ಡಿನ ಎ.ಇ.ಸಿ.ಎಸ್ ಬಡಾವಣೆಯಲ್ಲಿ ಎರಡು ಉದ್ಯಾನವನ, ಬಿ.ಇ.ಎಂ.ಎಲ್ ಬಡಾವಣೆಯಲ್ಲಿ ಒಂದು ಉದ್ಯಾನವನ, ಅಂಬಲಿಪುರ ಹಾಗೂ ಕಾಡುಗೋಡಿಯಲ್ಲಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಲಾಗಿದೆ.
- ದೊಡ್ಡನೆಕ್ಕುಂದಿಯ ಎಇಸಿಎಸ್ ಮತ್ತು ಬಿಇಎಂಎಲ್ ಬಡಾವಣೆಗಳಲ್ಲಿ, ಹರಳೂರಿನಲ್ಲಿ, ಕಾಡುಗೋಡಿಯಲ್ಲಿ ಹೊಸ ಉದ್ಯಾನವನಗಳು ಬಂದವು.

### ● ಕೆರೆಗಳ ಸಂರಕ್ಷಣೆ, ಅಭಿವೃದ್ಧಿ

**ಕೆರೆಗಳ ರಕ್ಷಣೆ: ಬೆಂಗಳೂರಿನಲ್ಲೇ ಅತಿಹೆಚ್ಚು (68) ಕೆರೆಗಳನ್ನು ಹೊಂದಿದ ಕ್ಷೇತ್ರವಾದ ಮಹದೇವಪುರದಲ್ಲಿ ಕೆರೆಗಳೀಗ ಸುಭದ್ರವಾದ ತಂತಿ ಬೇಲಿ ಕಂಡಿವೆ. ಇದು ಕೆರೆಗಳ ರಕ್ಷಣೆಯ ಮೊದಲ ಹಂತ. ಪರಿಣಾಮವಾಗಿ ಕೆರೆಗಳ ಒತ್ತುವರಿ ಪೂರ್ತಿಯಾಗಿ ನಿಂತುಹೋಗಿದೆ.**

- ಅಂಬಲೀಪುರ ಕೆರೆ, ಕೈಕೊಂಡರಹಳ್ಳಿ ಕೆರೆ, ಬೆಳ್ಳಂದೂರು ಕೆರೆ, ವರ್ತೂರು ಕೆರೆ, ಸಾದರಮಂಗಲ ಕೆರೆ, ಹೂಡಿ ಗ್ರಾಮದ 2 ಕೆರೆಗಳು, ಚಿಕ್ಕನಾಯಕನಹಳ್ಳಿಕೆರೆ, ಕೊಡತಿ ಕೆರೆ, ಚಿನ್ನಪ್ಪನಹಳ್ಳಿಕೆರೆ, ಕಾಡುಗೋಡಿ ವಾರ್ಡಿನ ಎಲ್ಲಾ ಕೆರೆಗಳು, ರಾಮಪುರ ಕೆರೆ, ಸೀತಾರಾಮಪಾಳ್ಯ ಕೆರೆ, ಗರುಡಾಚಾರ್ ಪಾಳ್ಯದ 2 ಕೆರೆಗಳು, - ಹೀಗೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಹುತೇಕ ಕೆರೆಗಳಿಗೆ ಚೈನ್ ಲಿಂಕ್ ಫೆನ್ಸಿಂಗ್ ಮೂಲಕ

ರಕ್ಷಣೆ ಒದಗಿಸಲಾಯಿತು. ಹಲವೆಡೆ ಹಿಂದೆಂದೂ ಕಾಣದಿದ್ದ ವಾಯುವಿಹಾರ ಕಾಲುದಾರಿಗಳು ನಿರ್ಮಾಣಗೊಂಡಿವೆ. ಯಮಲೂರು, ರಾಂಪುರ ಕೆರೆಗಳಿಗೆ ಸೇತುವೆಗಳನ್ನು ಕಟ್ಟಲಾಯಿತು.

- ಇದೇ ಮೊದಲ ಬಾರಿಗೆ ಕೋದಂಡರಾಮನಗರ, ಹಾಲನಾಯಕನಹಳ್ಳಿ, ಚಿಕ್ಕನಾಯಕನಹಳ್ಳಿ, ಹಾಡೋಸಿದ್ದಾಪುರ, ಹಿರಂಡಹಳ್ಳಿ, ಬಿದರಹಳ್ಳಿ, ಕಟ್ಟುಗೊಲ್ಲಹಳ್ಳಿ, ಗೊರವಿಗೆರೆ, ಆವಲಹಳ್ಳಿ ಹಾಗೂ ಇನ್ನತರ ಗ್ರಾಮಗಳಲ್ಲಿ ಮೇಲುತೊಟ್ಟಿಗಳ ನಿರ್ಮಾಣವಾಯಿತು.
- ಕೈಕೊಂಡರಹಳ್ಳಿ ಕೆರೆ, ಅಂಬಲೀಪುರ ಕೆರೆ, ಹರಳೂರು ಕೆರೆ, ಕಸವನಹಳ್ಳಿ ಕೆರೆ, ದೊಡ್ಡಕನ್ನೆಲ್ಲಿ ಕೆರೆ, ಮುನ್ನೆಕೊಳಾಲು ಕೆರೆ, ಚಿನ್ನಪ್ಪನಹಳ್ಳಿ ಕೆರೆ, ದೊಡ್ಡನೆಕ್ಕುಂದಿ ಕೆರೆ, ಕುಂದಲಹಳ್ಳಿ ಕೆರೆ ಹಾಗೂ ಶೀಲವಂತನ ಕೆರೆಗಳ ಅಭಿವೃದ್ಧಿಯಾಗಿದೆ, ಸಿದ್ದಾಪುರ ಕೆರೆ, ಪಣತ್ತೂರು ಕೆರೆ, ಹೂಡಿ ಕೆರೆ, ದೇವರಬಿಸನಹಳ್ಳಿ ಕೆರೆ, ಗರುಡಾಚಾರ್‌ಪಾಳ್ಯ ಕೆರೆಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಎಲ್ಲಾ ಕೆರೆಗಳ ಒತ್ತುವರಿ ತೆರವುಗೊಳಿಸಿ ತಂತಿಬೇಲಿ ಕಾಂಪೌಂಡ್ ನಿರ್ಮಿಸಲಾಗಿದೆ. ಹೂಡಿ ಕೆರೆ, ಸಾದರಮಂಗಲ ಕೆರೆ ಹಾಗೂ ಭೋಗನಹಳ್ಳಿ ಕೆರೆಗಳ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಲಿದೆ. ಉಳಿದ ಕೆರೆಗಳನ್ನು ಸಹ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

## ● ಕನ್ನಡಕ್ಕೆ ಮೊದಲ ಗೌರವ; ಕನ್ನಡ ಸಂಸ್ಕೃತಿ ಅನಾವರಣ

- ಕನ್ನಡ ನುಡಿತೇರು ಮಹದೇವಪುರಕ್ಕೆ ಬಂದಾಗ ಅದಕ್ಕೆ 600 ಮಹಿಳೆಯರಿಂದ ಪೂರ್ಣಕುಂಭ ಸ್ವಾಗತ ದೊರೆಯಿತು. ಬೆಂಗಳೂರಿನಲ್ಲೇ ಈ ಸಂಭ್ರಮ ವಿಶೇಷವಾಗಿತ್ತು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಮುಖ್ಯಮಂತ್ರಿ ಚಂದ್ರುರವರೇ ಸಂತಸಪಟ್ಟರು! ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೈಕ್ ರ್‍ಯಾಲಿ ಆಟೋ ರ್‍ಯಾಲಿ, - ಹೀಗೆ ಕನ್ನಡ ನುಡಿತೇರಿಗೆ ಯಥೋಚಿತ ಸಮ್ಮಾನ ನೀಡಲಾಯಿತು. ನುಡಿತೇರನ್ನು ಹೂಡಿ ರೈಲ್ವೆ ಗೇಟ್‌ನಲ್ಲಿ ಬರಮಾಡಿಕೊಂಡು ಇಬ್ಲೂರು ಜಂಕ್ಷನ್‌ನಲ್ಲಿ ಬೀಳ್ಕೊಡುವವರೆಗೂ ಈ ಸಂಭ್ರಮ ಮುಂದುವರೆಯಿತು. ಅನ್ಯಭಾಷಿಗರೂ ಗಮನಾರ್ಹ ಸಂಖ್ಯೆಯಲ್ಲಿ ಇರುವ ಮಹದೇವಪುರ ಪ್ರದೇಶಗಳಲ್ಲಿ ಸಂಚರಿಸಿದ ಕನ್ನಡ ನುಡಿತೇರಿನ ಕಲರವ ಎಲ್ಲೆಡೆ ಹಬ್ಬಿತು.
- ಇದಲ್ಲದೆ, ಕನ್ನಡ ಸಂಸ್ಕೃತಿ, ನಾಡು-ನುಡಿ ಸಂರಕ್ಷಣೆಯ ಹೋರಾಟದಲ್ಲಿ ಪಾಲ್ಗೊಂಡಿರುವ ನಾಯಕರು, ಕ್ಷೇತ್ರದ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಮಹದೇವಪುರವು ಬೆಂಗಳೂರಿನಲ್ಲಿ ಕನ್ನಡದ ಕಂಪನ್ನು ಬೀರುತ್ತಿರುವ ಪ್ರಮುಖ ವಿಧಾನಸಭಾ ಕ್ಷೇತ್ರವಾಗಿದೆ.

**ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಹದಿನೈದು ವರ್ಷಗಳ ಕಾಲ ನಿರಂತರವಾಗಿ ಜನಪರ ಅಭ್ಯುದಯ ಕಾರ್ಯಕ್ರಮಗಳು ನಡೆದಿವೆ ಎಂಬುದಕ್ಕೆ ಈ ಪುಸ್ತಕದಲ್ಲಿ ನೀಡಿರುವ ಅಂಕಿ - ಅಂಶಗಳು, ಛಾಯಾಚಿತ್ರಗಳು ಮತ್ತು ಮಾಹಿತಿಗಳೇ ಸಾಕ್ಷಿ. ನಗರದ ಹೈಟೆಕ್ ಅಗತ್ಯಗಳೇ ಇರಲಿ, ಗ್ರಾಮಾಂತರ ಪ್ರದೇಶದ ಮೂಲಸೌಕರ್ಯಗಳೇ ಇರಲಿ, ಶ್ರೀ ಅರವಿಂದ ಲಿಂಬಾವಳಿಯವರು ಸಮಾನವಾದ ಮಾನದಂಡಗಳ ಮೂಲ ಸರ್ವತೋಮುಖ,ಸರ್ವಸ್ಪರ್ಶೀ ವಿಕಾಸದ ಕಾರ್ಯಚೌಕಟ್ಟಿನಲ್ಲಿ ಮುನ್ನಡೆದಿದ್ದಾರೆ.**


ಕೈಕೊಂಡರಹಳ್ಳಿ ಕೆರೆ

ಹರಳೂರು ಕೆರೆಯ ವಿಹಂಗಮ ದೃಶ್ಯ

# ಅರವಿಂದ ಲಿಂಬಾವಳಿ

## ಆಂದೋಲನದಿಂದ ಮೂಡಿದ ಜನನಾಯಕ

ಶ್ರೀ ಅರವಿಂದ ಲಿಂಬಾವಳಿ ಸಾರ್ವಜನಿಕ ಜೀವನದ ಪರಿಚಯ ಇಲ್ಲಿದೆ.

**ಮಹದೇವಪುರ ಕ್ಷೇತ್ರದ ಜನತೆಯ ಮನೆ-ಮನಗಳನ್ನು ಪ್ರವೇಶಿಸಿ ಮುಕ್ತವಾಗಿ ಮಾತನಾಡುವ, ಜನರೊಂದಿಗೇ ಬೆರೆತು ಕಷ್ಟ - ಸುಖಗಳನ್ನು ಅರಿಯುವ ಸ್ವಭಾವ ಅರವಿಂದ ಲಿಂಬಾವಳಿಯವರಿಗೆ ವಿದ್ಯಾರ್ಥಿ ದೆಸೆಯಿಂದಲೂ ಬಂದಿದೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ವಿದ್ಯಾರ್ಥಿ ಆಂದೋಳನಗಳ ಮೂಲಕವೇ ಅರವಿಂದ ಲಿಂಬಾವಳಿ ಬೆಳೆದಿದ್ದಾರೆ.**

■ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರೊಂದಿಗೆ ಶ್ರೀ ಅರವಿಂದ ಲಿಂಬಾವಳಿಯವರ ಸಂಪರ್ಕ ಎರಡು ದಶಕ ಮೀರಿದ್ದು.

■ ೧೯೯೭ರಲ್ಲಿ ಅಮೆರಿಕಾದ ಉತ್ತಮ ರಾಜ್ಯಾಡಳಿತ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಭಾರತದಿಂದ ಭೇಟಿ ನೀಡಿದ ಯುವ ರಾಜಕಾರಣಿಗಳ ತಂಡದಲ್ಲಿ ಅರವಿಂದ ಲಿಂಬಾವಳಿ

■ ಬಿಜೆಪಿಯ ಸಂಘಟನೆಯಲ್ಲಿ ಶ್ರೀ ಲಿಂಬಾವಳಿ ಹಿಂದಿನ ತಲೆಮಾರಿನ ಜೊತೆಗೇ ಬೆಳೆದ ಯುವ ನಾಯಕ

## ಬಾಲ್ಯದಿಂದಲೂ ಸ್ವಯಂಸೇವಕ, ವಿದ್ಯಾರ್ಥಿಯಾಗಿ ನಾಯಕ

**ಎಪ್ಪತ್ತರ ದಶಕದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಹಾಗೂ ಎಂಬತ್ತರ ದಶಕದ ಆರಂಭದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಅಭಾವಿಪ) ಕಾರ್ಯಕರ್ತರಾಗಿ ಸಾಮಾಜಿಕ ಜೀವನ ಆರಂಭಿಸಿದ ಅರವಿಂದ ಲಿಂಬಾವಳಿಯವರು 1986ರಿಂದ ಆರು ವರ್ಷಗಳ ಕಾಲ ಅಭಾವಿಪ ರಾಜ್ಯ ಸಹಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು.**

ಪಾಲಿಟೆಕ್ನಿಕ್ ಶಿಕ್ಷಣ ರಂಗದ ಸಮಸ್ಯೆಗಳ ವಿರುದ್ಧ ಹೋರಾಡಲು 1987ರಲ್ಲಿ ಮೂಡಿದ ಕರ್ನಾಟಕ ರಾಜ್ಯ ಪಾಲಿಟೆಕ್ನಿಕ್ ಕ್ರಿಯಾಸಮಿತಿ ಸಂಚಾಲಕರಾದ ಅರವಿಂದ ಲಿಂಬಾವಳಿ ಅವರಲ್ಲಿ ಕಂಡಿದ್ದು ಯುವೋತ್ಸಾಹದ ಕಿಚ್ಚು. ವಿದ್ಯಾರ್ಥಿ ಆಂದೋಲನದಲ್ಲಿ ಭಾಗಿಯಾಗಿ ಬದಲಾವಣೆ ತರಬೇಕೆಂಬ ತವಕ.

## ಶಿಕ್ಷಣ ದುರವಸ್ಥೆ ವಿರುದ್ಧ ಹೋರಾಟದ ಸರಮಾಲೆ

ಆಗಷ್ಟೇ ರಾಜ್ಯದೆಲ್ಲೆಡೆ ನೂರಾರು ಪಾಲಿಟೆಕ್ನಿಕ್‌ಗಳು ನಾಯಿಕೊಡೆಗಳಂತೆ ತಲೆಯೆತ್ತಿದ್ದವು. ಕಳಪೆ ಮೂಲಸೌಕರ್ಯ, ದುರವಸ್ಥೆಯಿಂದ ಕೂಡಿ ಲಕ್ಷಾಂತರ ವಿದ್ಯಾರ್ಥಿಗಳನ್ನು ಶೋಷಿಸುತ್ತಿದ್ದವು. ಶಿಕ್ಷಣರಂಗದ ಈ ದುಸ್ಥಿತಿಯನ್ನು ಪ್ರತಿಭಟಿಸಿ ಅರವಿಂದ ಲಿಂಬಾವಳಿ ಹೋರಾಟಕ್ಕೆ ಧುಮುಕಿದರು. ಅವರು ನಾಡಿನ ನೂರಾರು ಪಾಲಿಟೆಕ್ನಿಕ್‌ಗಳ ದುರವಸ್ಥೆಯ ಸಮೀಕ್ಷಾವರದಿಯನ್ನು ಸಿದ್ಧಪಡಿಸಿದಾಗ ಇಡೀ ರಾಜ್ಯವೇ ಬೆಚ್ಚಿಬಿದ್ದಿತ್ತು. `ಸುಧಾ' ವಾರಪತ್ರಿಕೆಯು `ಪಾಲಿಟೆಕ್ನಿಕ್‌ಗಳ ಕಥೆ ವ್ಯಥೆ' ಎಂಬ ಅಗ್ರಲೇಖನ ಪ್ರಕಟಿಸಿ ಜನಾಭಿಪ್ರಾಯ ರೂಪಿಸಿದ್ದು ಈಗ ಇತಿಹಾಸ. ಇಂಜಿನಿಯರಿಂಗ್ ಶಿಕ್ಷಣದ ಕುರಿತೂ ಅವರ ಹೋರಾಟ ಗಮನಾರ್ಹ.

ರಾಜ್ಯದ ಶಿಕ್ಷಣ ವ್ಯವಸ್ಥೆ ಸುಧಾರಿಸಲು 120 ಬೇಡಿಕೆಗಳನ್ನು ಮುಂದಿಟ್ಟು ನಡೆದ 1992ರ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಬೃಹತ್ `ಕ್ಯಾಂಪಸ್ ಉಳಿಸಿ' ರ್ಯಾಲಿಯ ಸಂಘಟನೆಯಲ್ಲಿ ರ್ಯಾಲಿಯ

ಸಂಚಾಲಕರಾಗಿದ್ದ ಅರವಿಂದ ಲಿಂಬಾವಳಿಯವರದೇ ಪ್ರಮುಖ ಪಾತ್ರ. ಈ ರ್ಯಾಲಿಯು ಈಗಲೂ ಒಂದು ರಾಷ್ಟ್ರೀಯ ದಾಖಲೆ.

ಅಷ್ಟು ಹೊತ್ತಿಗೆ ಅಭಾವಿಪ ರಾಷ್ಟ್ರೀಯ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿದ್ದ ಅರವಿಂದ ಲಿಂಬಾವಳಿಯವರು ಕಾಶ್ಮೀರ ಉಳಿಸಿ ಆಂದೋಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅಭಾವಿಪದ ರಾಜ್ಯ ಕಾರ್ಯದರ್ಶಿಯಾಗಿಯೂ ವಿದ್ಯಾರ್ಥಿ ಹೋರಾಟವನ್ನು ಮುಂದುವರಿಸಿದ ಅವರು 1995ರಲ್ಲಿ ಆರೆಸೆಸ್ ಅಪೇಕ್ಷೆಯಂತೆ ಪಕ್ಷ ರಾಜಕಾರಣವನ್ನು ಪ್ರವೇಶಿಸಿದರು.

## ಬಿಜೆಪಿ ಪ್ರವೇಶ : ಸಾರ್ವಜನಿಕ ಸೇವೆಯ ಹೊಸ ಅಧ್ಯಾಯ

ಆರಂಭದಲ್ಲಿ ಭಾರತೀಯ ಜನತಾ ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಅರವಿಂದ ಲಿಂಬಾವಳಿಯವರು, ಕೆಲ ತಿಂಗಳುಗಳಲ್ಲೇ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾದರು. 12 ವರ್ಷಗಳ ಕಾಲ ಈ ಹುದ್ದೆಯಲ್ಲೇ ಇದ್ದು ಪಕ್ಷದ ಸಂಘಟನೆಗಾಗಿ ಶ್ರಮಿಸಿದರು.

ರಾಜಕೀಯ ವ್ಯವಹಾರಗಳಿಂದ ಹಿಡಿದು ಮಾಧ್ಯಮ ನಿರ್ವಹಣೆ, ಚುನಾವಣಾ ನಿರ್ವಹಣೆ, ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ - ಹೀಗೆ ಹಲವು ಸಂಘಟನಾತ್ಮಕ ಹೊಣೆಗಾರಿಕೆಗಳನ್ನು ನಿಭಾಯಿಸಿದ ಅರವಿಂದ ಲಿಂಬಾವಳಿ ಸಮಾಜದ ಎಲ್ಲ ವರ್ಗ-ಸಮುದಾಯ-ಪಂಗಡಗಳ ಸಮಸ್ಯೆಗಳನ್ನು ಅರಿತರು. 2006ರಿಂದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಅವರು ಪಕ್ಷದ ಚಟುವಟಿಕೆಗಳನ್ನು ಕೈಗೊಂಡರು.

ತಮ್ಮ ಜನಪರ ವ್ಯಕ್ತಿತ್ವದಿಂದಲೇ ಅರವಿಂದ ಲಿಂಬಾವಳಿಯವರು 2004ರಲ್ಲಿ ವಿಧಾನ ಪರಿಷತ್ ಸದಸ್ಯರಾದರು. ಆನಂತರ 2008ರ ವಿಧಾನಸಭಾ ಚುನಾವಣೆಯಲ್ಲಿ ಮಹದೇವಪುರದ ಜನತೆಯ ಪ್ರತಿನಿಧಿಯಾಗಿದ್ದು, ಈಗ ಕ್ಷೇತ್ರದ ಪ್ರೀತಿ - ಅಭಿಮಾನ ಪಡೆದ ಶಾಸಕರಾಗಿದ್ದು ಹೊಸ ಇತಿಹಾಸ!

## ಜನಪ್ರತಿನಿಧಿ, ಸಂಪುಟ ಸಚಿವ

ಜನಪ್ರತಿನಿಧಿಯಾದ ಸಂದರ್ಭದಲ್ಲೂ ಅವರೊಳಗೆ ಇರುವ ಹೋರಾಟಗಾರ ವ್ಯಕ್ತಿತ್ವ ಮಾಸಿಲ್ಲ; ಜನಪರ ಕೆಲಸಕ್ಕಾಗಿ

# ಅರವಿಂದ ಲಿಂಬಾವಳಿ

## ಜನನಾಯಕನ ಜೀವನ ಚಿತ್ರಣ

ಶ್ರಮಿಸುವ ಕಿಚ್ಚು ಆರಿಲ್ಲ. ಈಗ ಮಹದೇವಪುರ ಕ್ಷೇತ್ರದ ಸಮಸ್ಯೆಗಳ ವಿರುದ್ಧವೂ ಹೋರಾಡಿ ಗೆದ್ದಿದ್ದಾರೆ!

ಒಂದು ದಶಕಕ್ಕೂ ಹೆಚ್ಚು ಕಾಲ ಯುವ ಹೋರಾಟದ ನಾಯಕತ್ವ, ಆಮೇಲೆ ಹಲವು ವರ್ಷಗಳ ಸಕ್ರಿಯ ರಾಜಕಾರಣ, ನಂತರ ಮೇಲ್ಮನೆ ಸದಸ್ಯತ್ವದ ಅನುಭವ - ಅರವಿಂದ ಲಿಂಬಾವಳಿ ಮಹದೇವಪುರ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಯಶ ಸಾಧಿಸಲು ಇವೆಲ್ಲವೂ ಅನುಕೂಲಕರವಾಗಿ ಒದಗಿದವು.

ಅರವಿಂದ ಲಿಂಬಾವಳಿಯವರ ಇನ್ನೊಂದು ಸ್ವಭಾವ ಸಾರ್ವಜನಿಕರಿಗೆ ತಕ್ಷಣ ಕಾಣುವುದಿಲ್ಲ; ಕ್ರಮೇಣ ಅರಿವಾಗುತ್ತದೆ. ಅವರು ಎಂದೂ ತಮ್ಮ ಗಮನಕ್ಕೆ ಬಂದ ಸಂಗತಿಯನ್ನು ಮರೆಯುವುದಿಲ್ಲ; ನೇಪಥ್ಯದಲ್ಲಿಯೇ ಆ ಕೆಲಸದ ಬಗ್ಗೆ ಫಾಲೋ ಅಪ್ ಮಾಡುತ್ತಿರುತ್ತಾರೆ. ಅದು ಮುಗಿದ ಮೇಲೆಯೇ ಜನರಿಗೆ ಗೊತ್ತಾಗಿರುತ್ತದೆ. ವೃಥಾ ಚರ್ಚೆ, ಒಣಹರಟೆ ಮತ್ತು ಕಾಲಹರಣಕ್ಕಿಂತ `ನೇರವಾಗಿ ವಿಷಯಕ್ಕೆ ಬರುವ' ನೀತಿ ಅನುಸರಿಸುವುದೇ ಅರವಿಂದ ಲಿಂಬಾವಳಿಯವರ ಸಹಜ ವ್ಯಕ್ತಿತ್ವ. ಆದ್ದರಿಂದಲೇ ಅವರು

■ ದೇವನಹಳ್ಳಿಯಲ್ಲಿ ಬಿಜೆಪಿಯ ಆಗಿನ ರಾಷ್ಟ್ರಾಧ್ಯಕ್ಷ, ಈಗ ಕೇಂದ್ರ ಗೃಹ - ಸಹಕಾರ ಸಚಿವರಾಗಿರುವ ಶ್ರೀ ಅಮಿತ್ ಶಾ ಅವರ ಭಾಷಣದ ಕನ್ನಡ ಭಾಷಾಂತರ ಮಾಡುತ್ತಿರುವ ಕ್ಷಣ

ತಮ್ಮ ಕ್ಷೇತ್ರದ ಎಲ್ಲ ಕಾಮಗಾರಿಗಳನ್ನೂ ವಾರ್ಡ್‌ವಾರು ಪಟ್ಟಿ ಮಾಡಿಕೊಂಡು ಕಡತಗಳನ್ನು ನಿರ್ವಹಿಸಿದ್ದಾರೆ. ಯಾವುದೇ ಪ್ರದೇಶದ ಯಾವುದೇ ಕಾಮಗಾರಿಯ ವಿವರಗಳನ್ನು ಸಾರ್ವಜನಿಕರು `ಮಾಹಿತಿ ಹಕ್ಕು' ಚಲಾಯಿಸದೆಯೇ ನೇರವಾಗಿ ಪಡೆಯಬಹುದು! ಈಗಂತೂ **"ಮಹದೇವಪುರ ಜನಹಿತ"** ಸ್ಮಾರ್ಟ್‌ಫೋನ್ ಆ್ಯಪ್ ಮೂಲಕ ನಾಗರಿಕರ ಅಂಗೈಗೇ ಎಲ್ಲ ಅಭಿವೃದ್ಧಿ ಮಾಹಿತಿಗಳನ್ನು ನೀಡಲಾಗುತ್ತಿದೆ. ಇದು ದೇಶದಲ್ಲೇ ಅತಿವಿಶಿಷ್ಟ ಸೇವೆಯಾಗಿದೆ.

## ಶ್ರೀ ಅರವಿಂದ ಲಿಂಬಾವಳಿಯವರು 2008-13 ರ ಅವಧಿಯಲ್ಲಿ ಕರ್ನಾಟಕ ಸರ್ಕಾರದಲ್ಲಿ ಸಂಪುಟ ದರ್ಜೆಯ ಶಿಕ್ಷಣ ಹಾಗೂ ಆರೋಗ್ಯ ಸಚಿವರಾಗಿ ಮತ್ತು 2021ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಈ ಕುರಿತ ವಿವರಗಳು ಪ್ರತ್ಯೇಕ ಅಧ್ಯಾಯದಲ್ಲಿವೆ.

ನಾಲ್ಕು ಬಾರಿ ರಾಜ್ಯಸರ್ಕಾರದಲ್ಲಿ ಸಚಿವರಾಗಿದ್ದ ಕಾಲಾವಧಿಯಲ್ಲೂ ಅರವಿಂದ ಲಿಂಬಾವಳಿಯವರು ಮಹದೇವಪುರ ಕ್ಷೇತ್ರದ ಉನ್ನತಿಯನ್ನು ಮರೆಯಲಿಲ್ಲ. ವಿವಿಧ ಜಿಲ್ಲೆಗಳ ಉಸ್ತುವಾರಿ ಸಚಿವರೂ ಆಗಿದ್ದ ಅರವಿಂದ ಲಿಂಬಾವಳಿ ಕ್ಷೇತ್ರದ ಅಭ್ಯುದಯಕ್ಕೇ ಆದ್ಯತೆ ನೀಡಿದ್ದಾರೆ. ಕಡ್ಡಾಯವಾಗಿ ಕ್ಷೇತ್ರದಲ್ಲಿ ಪ್ರವಾಸ, ಕಾಮಗಾರಿಗಳ ಪರಿಶೀಲನೆ, ಜನರ ದೂರುಗಳಿಗೆ ತಕ್ಷಣದ ಸ್ಪಂದನೆ - ಇದೇ ಅರವಿಂದ ಲಿಂಬಾವಳಿಯವರ ದಿನಚರಿಯಾಗಿದೆ.

ಭಯೋತ್ಪಾದನೆಯ ವಿರುದ್ಧ ರಾಜ್ಯವ್ಯಾಪಿ ಆಂದೋಲನವನ್ನು ರೂಪಿಸಿ, ಯುವಸಮುದಾಯವನ್ನು ಜಾಗೃತಗೊಳಿಸಲು ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಅರವಿಂದ ಲಿಂಬಾವಳಿ ಸಂಘಟಿಸಿದ **`ಭಯೋತ್ಪಾದನೆ ಅಳಿಸಿ, ದೇಶ ಉಳಿಸಿ'** ಘೋಷಣೆ ಐತಿಹಾಸಿಕ. ಬೆಂಗಳೂರಿನಲ್ಲಿ ನಡೆದ ಅಭಿಯಾನದ ಸಮಾರೋಪ ಕಾರ್ಯಕ್ರಮವೂ ಲಕ್ಷಗಟ್ಟಳೆ ವಿದ್ಯಾರ್ಥಿಗಳನ್ನು ಸೆಳೆಯಿತು. ನಾಡಿನ, ದೇಶದ ಗಣ್ಯರು ಬಂದು ಯುವಕರಿಗೆ ದೇಶಭಕ್ತಿಯ ಕರೆ ನೀಡಿದರು; ಭಾರತ ರಕ್ಷಣೆಯ ಸಂಕಲ್ಪಕ್ಕೆ ಯುವಸಮೂಹವನ್ನು ಸಜ್ಜುಗೊಳಿಸಿದರು. ಶಿಕ್ಷಣ ಇಲಾಖೆಯೆಂದರೆ ಕೇವಲ ಪ್ರವೇಶ, ಪರೀಕ್ಷೆಗಳಲ್ಲೇ ಮುಳುಗಿರಬೇಕಿಲ್ಲ ; ಯುವಸಮಾಜಕ್ಕೆ ದೇಶ-ಸಮಾಜ ಪ್ರೀತಿಯ ಪಾಠವನ್ನೂ ಕಲಿಸಬಲ್ಲ ಹೃದಯವಂತ ಇಲಾಖೆ ಎಂದು ಅರವಿಂದ ಲಿಂಬಾವಳಿ ತೋರಿಸಿಕೊಟ್ಟಿದ್ದಾರೆ.

ಸ್ಥಾನಮಾನಗಳ ಬಗ್ಗೆ ಚಿಂತಿಸದೆ ಸಮಾಜದ ಬಗ್ಗೆ ಭಾವತೀವ್ರತೆಯಿಂದ ಕೆಲಸ ಮಾಡಿದ ನಾಯಕನಲ್ಲಿ ಅತೀವ ಆತ್ಮವಿಶ್ವಾಸ ಇರುತ್ತದೆ ಎಂಬ ಮಾತಿದೆ. ಅರವಿಂದ ಲಿಂಬಾವಳಿ ಇಂಥ ಸಮುದಾಯಕ್ಕೆ ಸೇರಿದ ವ್ಯಕ್ತಿತ್ವ. ಅರವಿಂದ ಲಿಂಬಾವಳಿಯವರ ದೃಢ ಆತ್ಮವಿಶ್ವಾಸವೇ ಅವರಿಗೆ ದಾರಿ. ಜನರ ಆಶೀರ್ವಾದವೇ ಅವರ ದಾರಿದೀಪ.

## ಹದಿನೈದು ವರ್ಷಗಳ ಕಾಲ ಮಹದೇವಪುರದ ಶಾಸಕರಾಗಿ ಅಪಾರ ಜನಾನುರಾಗ ಪಡೆದ ಅರವಿಂದ ಲಿಂಬಾವಳಿಯವರು ತಮ್ಮ ದಿಟ್ಟ ಸಾಮಾಜಿಕ ನಡೆಯನ್ನು ಮುಂದುವರಿಸಿದ್ದಾರೆ.




■ ಮಂಗಳೂರಿನಲ್ಲಿ 'ಭಯೋತ್ಪಾದನೆ ಅಳಿಸಿ, ದೇಶ ಉಳಿಸಿ' ಅಭಿಯಾನದ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಶ್ರೀ ಶ್ರೀ ರವಿಶಂಕರ್ ಗುರೂಜಿ. ಕೆಳಚಿತ್ರ: ಸಮಾರೋಪ ಸಮಾರಂಭದಲ್ಲಿ ಶ್ರೀ ಎಲ್ ಕೆ ಆಡ್ವಾಣಿ.

## ಚತುರ ಸಂಘಟಕ, ಜನಪ್ರಿಯ ನಾಯಕ

ಮಹದೇವಪುರವನ್ನು ಕಳೆದ ಹದಿನೈದು ವರ್ಷಗಳಿಂದ ಪ್ರತಿನಿಧಿಸುತ್ತಿರುವ ಶ್ರೀ ಅರವಿಂದ ಲಿಂಬಾವಳಿಯವರು ಭಾರತೀಯ ಜನತಾ ಪಾರ್ಟಿಯ ಸಂಘಟನಾ ಕಾರ್ಯಗಳಲ್ಲಿ ಸಕ್ರಿಯರಾಗಿದ್ದಾರೆ. ಸಂಘಟನಾ ಚಾತುರ್ಯ ಮತ್ತು ರಾಜ್ಯವ್ಯಾಪಿ ಜನನಾಡಿಯ ಅರಿವು - ಇವುಗಳ ಹಿನ್ನೆಲೆಯಲ್ಲಿ ಎಂಟು ಬಾರಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇತ್ತೀಚೆಗೆ ಅವರು ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿದ್ದರು. ಬಿಜೆಪಿಯ ``ಭ್ರಷ್ಟರನ್ನು ತೊಲಗಿಸಿ, ಕರ್ನಾಟಕ ಉಳಿಸಿ ಯಾತ್ರೆ, ಬೆಳಗಾವಿ ವಿಶೇಷ ಅಧಿವೇಶನದ ಸಂದರ್ಭದಲ್ಲಿ ನಡೆದ ರೈತರ ಬೃಹತ್ ಪ್ರತಿಭಟನಾ ರ್ಯಾಲಿ, ರೈತರ ಆತ್ಮಹತ್ಯೆ ತಡೆಯಲು ಹಮ್ಮಿಕೊಂಡ ರೈತ ಚೈತನ್ಯ ಯಾತ್ರೆ, ೨೦೦೭-೦೮ರಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಶ್ರೀ ಬಿ ಎಸ್ ಯಡಿಯೂರಪ್ಪನವರ ನೇತೃತ್ವದಲ್ಲಿ ನಡೆದ `ಪರಿವರ್ತನಾ ಯಾತ್ರೆ, ೨೦೧೦ರಲ್ಲಿ ನಡೆದ `ಬೆಂಗಳೂರು ರಕ್ಷಿಸಿ' ಪಾದಯಾತ್ರೆ, ಬರ ಪರಿಶೀಲನೆ, - ಹೀಗೆ ಪಕ್ಷದ ಎಲ್ಲ ಹೋರಾಟಗಳಲ್ಲಿ ಅವರು ಅತ್ಯಂತ ಸಕ್ರಿಯವಾಗಿ ಭಾಗವಹಿಸಿದ್ದಾರೆ.

## ರಾಜಕಾರಣದ ದಕ್ಷ ನಡೆಗಳು

ಭಾರತೀಯ ಜನತಾ ಪಾರ್ಟಿಯಲ್ಲಿ ಮೂರು ದಶಕಗಳಿಂದ ಸಕ್ರಿಯರಾಗಿರುವ ಶ್ರೀ ಅರವಿಂದ ಲಿಂಬಾವಳಿಯವರು ಪಕ್ಷದ ಉನ್ನತಿಗಾಗಿ ಸದಾ ಕಾರ್ಯತತ್ಪರರಾಗಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿಯು ಬೃಹತ್ ಗೆಲುವು ಸಾಧಿಸುವಲ್ಲಿ ಅವರ ಪಾತ್ರವೂ ಮುಖ್ಯವಾಗಿತ್ತು. ಜೊತೆಗೇ ತಮ್ಮ ಉಸ್ತುವಾರಿಯಲ್ಲಿದ್ದ ತೆಲಂಗಾಣದ ನಾಲ್ಕು ಲೋಕಸಭಾ ಸ್ಥಾನಗಳು ಬಿಜೆಪಿ ತೆಕ್ಕೆಗೆ ಬರುವಲ್ಲಿ ಅವರು ಸಂಪೂರ್ಣ ಯಶ ಪಡೆದರು. ಈ ಹಿಂದೆ ಅವರು ಶ್ರೀಮತಿ ನಿರ್ಮಲಾ ಸೀತಾರಾಮನ್, ಶ್ರೀ

■ ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ, ಹಿಂದಿನ ರಾಜ್ಯಪಾಲ ಶ್ರೀ ರಾಮೇಶ್ವರ ಠಾಕೂರ್ ಜೊತೆಗೆ

ಪ್ರಧಾನಿ ಮೋದಿಯೊಂದಿಗೆ ಮೈಸೂರಿನಲ್ಲಿ ಪರಿವರ್ತನಾ ರ್‍ಯಾಲಿ

ರಕ್ಷಣಾ ಸಚಿವ ಶ್ರೀ ರಾಜನಾಥ್ ಸಿಂಗ್ ಜೊತೆಗೆ

ಹಿಂದಿನ ಮುಖ್ಯಮಂತ್ರಿ ಶ್ರೀ ಬಿ ಎಸ್ ಯಡಿಯೂರಪ್ಪ ಅವರೊಂದಿಗೆ

ಉಪ್ರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರೊಂದಿಗೆ

ಬಿಜೆಪಿ ರಾಷ್ಟ್ರಾಧ್ಯಕ್ಷ ಶ್ರೀ ಜೆ ಪಿ ನಡ್ಡಾ ಅವರೊಂದಿಗೆ...

ರಾಜೀವ್ ಚಂದ್ರಶೇಖರ್ ಅವರ ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದಿಂದ ಉಸ್ತುವಾರಿ ವಹಿಸಿಕೊಂಡಿದ್ದರು. ರಾಜ್ಯದಲ್ಲಿ ನಡೆದ ವಿಧಾನಪರಿಷತ್ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಾಗಿ ರಾಜ್ಯದ ಹಲವೆಡೆ ಪ್ರವಾಸ ನಡೆಸಿದ್ದಾರೆ. ಅವರು ಪಕ್ಷದ ಹಿಂದಿನ ರಾಷ್ಟ್ರಾಧ್ಯಕ್ಷ ಶ್ರೀ ಅಮಿತ್ ಶಾ ಅವರ ಹಿಂದಿ ಭಾಷಣವನ್ನು ಸುಲಲಿತವಾಗಿ ಕನ್ನಡಕ್ಕೆ ಅನುವಾದಿಸಿ ಮೆಚ್ಚುಗೆ ಪಡೆದಿದ್ದಾರೆ.

**ಅರವಿಂದ ಲಿಂಬಾವಳಿ ಕನ್ನಡ ನಾಡಿನ ಪ್ರಬುದ್ಧ ಮುತ್ಸದ್ದಿ ರಾಜಕಾರಣಿಯಾಗಿ, ಜನೋಪಯೋಗಿ ಶಾಸಕರಾಗಿ, ಸಚಿವರಾಗಿ ಸದಾ ಜನಸೇವೆಯಲ್ಲಿ ತೊಡಗಿರುವ ಅಪರೂಪದ ವ್ಯಕ್ತಿತ್ವ.**

# ನ್ಯೂ ಮೀಡಿಯಾ ಆಳ ಅರಿತ ಟೆಕ್ಕಿ ನಾಯಕ

ಶ್ರೀ ಅರವಿಂದ ಲಿಂಬಾವಳಿಯವರು ಇಂಟರ್‌ನೆಟ್ ಬಂದಾಗಿನಿಂದಲೂ ಅದನ್ನು ಸದುಪಯೋಗ ಮಾಡಿಕೊಂಡು ಬಂದ ನಾಯಕರಲ್ಲಿ ಮೊದಲಿಗರು. **ಫೇಸ್‌ಬುಕ್‌ನಲ್ಲಿ ಏಳೂವರೆ ಲಕ್ಷಕ್ಕಿಂತ ಹೆಚ್ಚು ಮಿತ್ರತ್ವ ಹೊಂದಿರುವ** ಅವರು ಸದಾ ಆನ್‌ಲೈನ್ ಜಗತ್ತಿನ ವಿದ್ಯಮಾನಗಳನ್ನು ಗಮನಿಸುತ್ತಾರೆ; ಸ್ಪಂದಿಸುತ್ತಾರೆ. ಟ್ವಿಟರ್, ಕೂ ಮತ್ತು ಇನ್‌ಸ್ಟಾಗ್ರಾಮ್ ಸಮಾಜತಾಣಗಳಲ್ಲೂ ಅವರು ಅತ್ಯಂತ ಜನಪ್ರಿಯ; ಸಾಂಪ್ರದಾಯಿಕ ವೆಬ್‌ಸೈಟನ್ನೂ (bjparvind.com) ನಿರ್ವಹಿಸಿಕೊಂಡು ಬಂದಿದ್ದಾರೆ. ಈಮೈಲ್ ಮೂಲಕ ಸಾರ್ವಜನಿಕ ಕುಂದು ಕೊರತೆಗಳನ್ನು ಗಮನಿಸುವ, ವಾಟ್ಸ್‌ಅಪ್ ಮುಂತಾದ ಹೊಸ ಸಂವಹನ ಮಾಧ್ಯಮಗಳನ್ನು ದಕ್ಷವಾಗಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವ ಚಾಕಚಕ್ಯತೆ ಅವರಿಗಿದೆ. ಡಿಜಿಟಲ್ ಅಭಿಯಾನವನ್ನು ನಡೆಸುವ ತಂತ್ರಗಾರಿಕೆ ಮತ್ತು ಆಧುನಿಕ ಸಂವಹನಾ ಸಾಧ್ಯತೆಗಳಿಗೆ ತೆರೆದುಕೊಳ್ಳುವ ಮುಕ್ತ ಮನಸ್ಸು ಅವರಿಗಿದೆ. ಸಾಂಪ್ರದಾಯಿಕ ಮಾಧ್ಯಮದ ಅನುಭವವನ್ನೂ ಹೊಂದಿರುವ ಅವರೀಗ ಹೊಸ ಸಾಧ್ಯತೆಗಳನ್ನು ಜನರ ಹಿತಕ್ಕಾಗಿ ಬಳಸಿಕೊಳ್ಳುವ ತಂತ್ರಜ್ಞಾನಗಳನ್ನು ಸ್ವಾಗತಿಸುವ ಉದಾರತೆ ಹೊಂದಿದ್ದಾರೆ.

**ತಂತ್ರಜ್ಞಾನದ ಹೊಸ ವಿಧಾನಗಳ ಮೂಲಕ ಜನಪರ ಚಟುವಟಿಕೆಗಳನ್ನು ವಿಸ್ತರಿಸಬೇಕು ಎಂದೇ ಅವರು ಈಗ ಮಹದೇವಪುರ ಜನಹಿತ ಆ್ಯಪ್ ಮೂಲಕ ಜನರನ್ನು ನೇರವಾಗಿ ತಲುಪಿದ್ದಾರೆ; ಜನರ ದೂರುಗಳನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕವೂ ನಿರ್ವಹಿಸುತ್ತಿದ್ದಾರೆ.**

# ಆಡಳಿತಗಾರ, ಮುತ್ಸದ್ದಿ

ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಸಚಿವರಾಗಿ ಪ್ರಮಾಣವಚನ

**ಕರ್ನಾಟಕ ಸರ್ಕಾರದಲ್ಲಿ ಶಿಕ್ಷಣ ಮತ್ತು ಆರೋಗ್ಯ (2008-13), ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಸಚಿವರಾಗಿ (2018-23) – ಹೀಗೆ ಎರಡು ಸರ್ಕಾರಗಳಲ್ಲಿ ನಾಲ್ಕು ಇಲಾಖೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀ ಅರವಿಂದ ಲಿಂಬಾವಳಿಯವರ ಸಾಧನೆಗಳ ಪಕ್ಷಿನೋಟ ಇಲ್ಲಿದೆ. ಕನ್ನಡನಾಡು ಕಂಡ ನಿಪುಣ ಆಡಳಿತಗಾರ ಎಂಬುದಕ್ಕೆ ಅವರ ಸಾಧನೆಗಳೇ ನಿದರ್ಶನ.**

## 1. ಕನ್ನಡ ಮತ್ತು ಸಂಸ್ಕೃತಿ ಇಲಾಖೆ : ನೂರೆಂಭತ್ತು ದಿನಗಳಲ್ಲಿ ಮಹತ್ವದ ಸಾಧನೆಗಳು (2021)

ಶ್ರೀ ಅರವಿಂದ ಲಿಂಬಾವಳಿಯವರು 2021ರಲ್ಲಿ ಆರು ತಿಂಗಳುಗಳ ಕಾಲ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿ, ಶ್ರೀ ಬಿ ಎಸ್ ಯಡಿಯೂರಪ್ಪನವರ ಸಂಪುಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಅರಣ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದರು. ಅಲ್ಪಾವಧಿಯಲ್ಲೇ ಅವರು ಕೈಗೊಂಡ ಕೆಲವು ಮಹತ್ವಪೂರ್ಣ ಚಟುವಟಿಕೆಗಳು ನಾಡಿನ ಗಮನವನ್ನು ಸೆಳೆದಿವೆ.

ಸಚಿವಸ್ಥಾನ ಮತ್ತು ಕೊರೋನಾ ನಿಭಾವಣೆ ಕೆಲಸಗಳಲ್ಲಿ ನಿರಂತರ ಭಾಗಿತ್ವ

- ಜವಾಬ್ದಾರಿ ವಹಿಸಿಕೊಂಡ ಕೆಲವೇ ದಿನಗಳಲ್ಲಿ, ಹಲವು ಜಿಲ್ಲೆಗಳನ್ನು ಸಂದರ್ಶಿಸಿ, ಹಲವಾರು ಕಲಾವಿದರು ಮತ್ತು ಕಲಾ ಲೋಕದ ಗಣ್ಯರನ್ನು ಭೇಟಿ ಮಾಡಿ ಪರೀಶೀಲನಾ ಸಭೆಗಳನ್ನು ನಡೆಸಿ, ಇಲಾಖೆಯ ಕಾರ್ಯಕ್ರಮಗಳು ಮತ್ತು ಅವುಗಳ ಯೋಜನೆ ರೂಪಿಸಲಾಯಿತು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ರಾಜ್ಯಮಟ್ಟದ ಪರಿಶೀಲನಾ ಸಭೆಯನ್ನು ನಡೆಸಿ 2020-21ನೇ ಸಾಲಿನ ಕ್ರಿಯಾಯೋಜನೆಯ ಬಗ್ಗೆ ಇಲಾಖೆಯ ವಿವಿಧ ವಿಭಾಗಗಳ ಮುಖ್ಯಸ್ಥರ ಜೊತೆ ಕಲಂಕೂಷ ಚರ್ಚೆ ನಡೆಸಿ ಇಲಾಖೆಯ ಇಡೀ ವರ್ಷದ ಚಟುವಟಿಕೆಗಳು, ಕಾರ್ಯಕ್ರಮಗಳು ಹಾಗೂ ಅನುಷ್ಠಾನಗೊಳಿಸಬೇಕಾದ ವಿವಿಧ ಯೋಜನೆಗಳ ಬಗ್ಗೆ ರೂಪರೇಷೆಗಳನ್ನು ತಯಾರಿಸಲಾಯಿತು.
- ಕರ್ನಾಟಕ ಜಾನಪದ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭ, ಚಾಮರಾಜನಗರ: 2020ನೇ ಸಾಲಿನ ವಾರ್ಷಿಕ ತಜ್ಞ ಪ್ರಶಸ್ತಿ ಹಾಗೂ ಬಹುಮಾನ ಪ್ರದಾನ ಕಾರ್ಯಕ್ರಮದಲ್ಲಿ 30 ಮಂದಿ ಪ್ರಶಸ್ತಿ ವಿಜೇತರನ್ನು ಹಾಗೂ ಇಬ್ಬರು ತಜ್ಞರನ್ನು ಸನ್ಮಾನಿಸಲಾಯಿತು. ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಾತಾ ಮಂಜಮ್ಮ ಜೋಗತಿಯವರನ್ನು ಸನ್ಮಾನಿಸಲಾಯಿತು.
- ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಕಾರ್ಯಕ್ರಮ: ಅಕಾಡೆಮಿಯ 2018, 2019 ಮತ್ತು 2020ನೇ ಸಾಲಿನ ಗೌರವ ಪ್ರಶಸ್ತಿ ಪ್ರಶಸ್ತಿ ಪ್ರದಾನ ಮಾಡಿ, ತುಳು ತ್ರೈಮಾಸಿಕ ಪುಸ್ತಕವಾದ "ಮದಿಪು" ಪುಸ್ತಕ ಬಿಡುಗಡೆ.
- ಶ್ರೀ ಸಂತ ಸೇವಾಲಾಲ್ ಜಯಂತೋತ್ಸವ: ಮೊಟ್ಟ ಮೊದಲನೇ ಬಾರಿಗೆ ಲಂಬಾಣಿ ಸಂಸ್ಕೃತಿ ಮತ್ತು ಭಾಷಾ ಅಭಿವೃದ್ಧಿ ಅಕಾಡೆಮಿಯನ್ನು ಸ್ಥಾಪನೆ ಮಾಡಿ ಆದೇಶ ಹೊರಡಿಸಲಾಯಿತು.
- ವಿಶೇಷ ಘಟಕ ಯೋಜನೆಯಡಿಯಲ್ಲಿ ಯುವ ಬರಹಗಾರರ ಚೊಚ್ಚಲ ಕೃತಿಗಳ ಬಿಡುಗಡೆ ಸಮಾರಂಭ
- ಕನ್ನಡ ಪುಸ್ತಕ ಪ್ರಾಧಿಕಾರ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಮತ್ತು ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಕೃತಿಗಳ ಲೋಕಾರ್ಪಣೆ.
- ಮೈಸೂರಿನ ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ ಭಕ್ತಿ ಭಂಡಾರಿ ಬಸವಣ್ಣನವರು, ಬಸವದರ್ಶನ, ಸ್ವತಂತ್ರ ಸಿದ್ಧಲಿಂಗೇಶ್ವರರು, ಹಾರ್ಟ್ ಟು ಹಾರ್ಟ್ ಮತ್ತು ಸುತ್ತೂರು ಶ್ರೀ ಮಠದ ಗ್ರಂಥಾಲಯ ಎಂಬ ಐದು ಕೃತಿಗಳ ಲೋಕಾರ್ಪಣೆ.
- ರಾಜ್ಯದಲ್ಲಿರುವ ನಾಲ್ಕು ರಂಗಾಯಣಗಳಿಗೆ ನಿರಂತರ ಪ್ರೋತ್ಸಾಹ ನೀಡಿದ್ದು, ಕಾರ್ಯೋನ್ಮುಖವಾಗಿವೆ.
- ರಂಗಾಯಣದ ರಂಗಶಿಕ್ಷಣ ಕೇಂದ್ರದ ಚಟುವಟಿಕೆಗಳನ್ನು ಪರಿಶೀಲನೆ.

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ರೂಪಿಸಿದ ತುಳು ಯುನಿಕೋಡ್ ಲಿಪಿಗೆ ಕರ್ನಾಟಕ ಸರ್ಕಾರದಿಂದ ಅಧಿಕೃತ ಮಾನ್ಯತೆ ನೀಡಲಾಯಿತು.**

- ಮಹಾರಂಗ ಪ್ರಯೋಗ: ಡಾ. ಎಸ್.ಎಲ್. ಭೈರಪ್ಪನವರ ಜನಪ್ರಿಯ ಮತ್ತು ಶ್ರೇಷ್ಠ ಕಾದಂಬರಿ 'ಪರ್ವ' ಆಧಾರಿತ 'ಪರ್ವ' ನಾಟಕ 'ಪರ್ವ' ಮಹಾರಂಗ ಪ್ರಯೋಗ ತ್ವರಿತವಾಗಿ ಸಕಾಲದಲ್ಲಿ ಸಿದ್ಧಗೊಂಡು ಮಾರ್ಚ್ 12, 13 ಮತ್ತು 14 ರಂದು ಮೂರು ದಿನಗಳ ಕಾಲ ಸಾವಿರಾರು ಪ್ರೇಕ್ಷಕರ ಸಮ್ಮುಖದಲ್ಲಿ ಯಶಸ್ವಿ ಪ್ರದರ್ಶನ ಕಂಡಿತು.
- ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ನಾಡಿನ ಸಂಸ್ಕೃತಿಯ ಹರಿಕಾರರಿಗೆ, ಸಾಧಕರಿಗೆ ಗೌರವಾರ್ಪಣೆ: ಪ್ರೊ. ಆರ್.ಎಲ್ ಕಶ್ಯಪ್, ವೇದ ವಿದ್ವಾಂಸರು, ಮಂಜಮ್ಮ ಜೋಗತಿ, ವೆಂಕಟೇಶ್ ಅವರುಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.
- ಖ್ಯಾತ ಸಾಹಿತಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದ ಹಿನ್ನೆಲೆಯಲ್ಲಿ ಅವರ ಮನೆಗೆ ಭೇಟಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.
- ಜಾನಪದ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿರುವ ಜಾನಪದ ಅಕಾಡೆಮಿ ಅಧ್ಯಕ್ಷರೂ ಆದ ಪದ್ಮಶ್ರೀ ಪ್ರಶಸ್ತಿ ಪಡೆದ ಮಾತಾ ಬಿ. ಮಂಜಮ್ಮ ಜೋಗತಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.
- ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ: ಶಿಕ್ಷಣ ಕ್ಷೇತ್ರದಲ್ಲಿನಸಾಧನೆಗಾಗಿ ಈ ವರ್ಷದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರಖ್ಯಾತ ಗಣಿತಜ್ಞ ಹಾಗೂ ವೇದ ವಿದ್ವಾಂಸ ಡಾ. ಆರ್.ಎಲ್. ಕಶ್ಯಪ್, ಅವರನ್ನು ಅವರ ನಿವಾಸದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.

ಪದ್ಮಶ್ರೀ ಪಡೆದ ಶ್ರೀ ಕೆ ವೈ ವೆಂಕಟೇಶರಿಗೆ ಸನ್ಮಾನ

ಅಗಲಿದ ಕವಿ ಡಾ. ಸಿದ್ದಲಿಂಗಯ್ಯನವರಿಗೆ ನಮನ

ಪಿಲಿಕುಳ ನಿಸರ್ಗಧಾಮದ ಬಳಿಯ ಗುತ್ತಿನ ಮನೆಗೆ ಭೇಟಿ

ಜನಪದರು ರಂಗಮಂದಿರ ಉದ್ಘಾಟನೆ

ಕೊರೋನಾ ಸಂಕಷ್ಟದಲ್ಲಿ ಕಲಾವಿದರು, ಸಾಹಿತಿಗಳಿಗೆ ನೆರವು

- ಕ್ರೀಡಾ ಕ್ಷೇತ್ರದಲ್ಲಿ ಪದ್ಮಶ್ರೀ ಪುರಸ್ಕೃತರಾದ ಪ್ಯಾರಾ ಒಲಂಪಿಯನ್ ಶ್ರೀ ಕೆ.ವೈ.ವೆಂಕಟೇಶ ಅವರಿಗೆ ವಿಧಾನಸೌಧದ ಕಛೇರಿಯಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.
- ಸಿದ್ದಗಂಗಾಮಠದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ರವರ ಹುಟ್ಟೂರಾದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 25.00 ಕೋಟಿ ರೂಗಳ ವೆಚ್ಚದಲ್ಲಿ ಅವರು ಹುಟ್ಟಿ ಬೆಳೆದ ಮನೆಯ ಜೀರ್ಣೋದ್ಧಾರ ಕಾಮಗಾರಿಯ ಭೂಮಿ ಪೂಜೆ: ಶಿಥಿಲಾವಸ್ಥೆಯಲ್ಲಿರುವ ಮನೆಯ ಪರಿವೀಕ್ಷಣೆ ನಡೆಸಿ ಆ ಮನೆಯನ್ನು ಪಾರಂಪರಿಕ ತಾಣವಾಗಿಸುವ ನೀಲನಕ್ಷೆಯ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ.
- ಆದಿ ಚುಂಚನಗಿರಿ ಶ್ರೀಗಳಾಗಿದ್ದ ಶ್ರೀ ಶ್ರೀ ಶ್ರಿ ಬಾಲಗಂಗಾಧರನಾಥ ಸ್ವಾಮೀಜಿಯವರ ಜನ್ಮಸ್ಥಳವಾದ ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಬಾನಂದೂರು ಗ್ರಾಮದಲ್ಲಿ ಶ್ರೀಗಳ ಹೆರಸಿನಲ್ಲಿ ಸಾಂಸ್ಕೃತಿಕ ಹಾಗೂ ವಿಶ್ವದರ್ಜೆಯ ಪಾರಂಪರಿಕ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ಯೋಜನೆಗೆ ಚಾಲನೆ. ಈಗಾಗಲೇ 25 ಕೋಟಿ ರೂಪಾಯಿ ಅನುದಾನ ನೀಡಿದ್ದು, ಇಡೀ ಯೋಜನೆಯನ್ನು ಕಾಲಮಿತಿಯಲ್ಲಿ ಕಾರ್ಯಗತ ಮಾಡುವ ನಿರ್ಧಾರ ಮಾಡಲಾಗಿದೆ.
- ನಾಡಿನ ಹೆಸರಾಂತ ಕವಿ ಹಾಗೂ ಆತ್ಮೀಯರಾದ ನಾಡೋಜ ಡಾ. ಸಿದ್ಧಲಿಂಗಯ್ಯ ನಿಧನರಾದ ಸಂದರ್ಭದಲ್ಲಿ ಅವರ ಮನೆಗೆ ಭೇಟಿ ನೀಡಿ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಲಾಯಿತು.
- ದಲಿತ ಕವಿ ಸಿದ್ಧಲಿಂಗಯ್ಯ ಸ್ಮರಣೆಯಲ್ಲಿ ಪ್ರತಿ ವರ್ಷ ದಲಿತ ಯುವ ಕವಿಗೆ 5 ಲಕ್ಷ ಪ್ರಶಸ್ತಿ ನೀಡುವ ಮಹತ್ವದ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.
- **ಸ್ವಾತಂತ್ರ್ಯದ 75ನೇ ವರ್ಷ:** ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ ಕಿತ್ತೂರಿನಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ.
- ಭಾರತ ಸ್ವಾತಂತ್ರ್ಯ ಸಂಗ್ರಾಮದ ಮಹತ್ವದ ಚಳುವಳಿ ನಡೆದ ಸ್ಥಳವಾದ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಅಮರಸುಳ್ಯಕ್ಕೆ ಭೇಟಿ; ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಈ ಯೋಧರ ಬಲಿದಾನ ನೆನಪಿಸುವ ಪಾರಂಪರಿಕ ಗ್ರಾಮ ನಿರ್ಮಾಣ ಹಾಗೂ ಹುತಾತ್ಮ ಸ್ಮಾರಕ ನಿರ್ಮಾಣ ಮಾಡುವುದು ಹಾಗೂ ಟ್ರೀ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ ಚಿಂತನೆ,ಪರಿಶೀಲನೆ.
- **ಕೋವಿಡ್ – 19 ಎರಡನೇ ಅಲೆಯ ಕಲಾವಿದರಿಗೆ ಆರ್ಥಿಕ ನೆರವು:** ಕೋವಿಡ್-19 ಎರಡನೇ ಅಲೆಯ ಲಾಕ್ ಡೌನ್ ನಿಂದ ಸಂಕಷ್ಟಕ್ಕೆ ಸಿಲುಕಿರುವ 20000 ಆಯ್ದ ಕಲಾವಿದರಿಗೆ ಇಲಾಖೆಯ ವತಿಯಿಂದ 6.75 ಕೋಟಿ ಕಲಾವಿರಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ಚಾಲನೆ ನೀಡಲಾಯಿತು.

# 2. ಅರಣ್ಯ ಇಲಾಖೆ (2021): ಕಾಡಿನ ಉಳಿವಿಗೆ ಹಲವು ಕ್ರಮ

**2021ರಲ್ಲಿ ಆರು ತಿಂಗಳುಗಳ ಕಾಲ ಕರ್ನಾಟಕ ಸರ್ಕಾರದ ಅರಣ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದರು. ಈ ಅಲ್ಪ ಕಾಲಾವಧಿಯಲ್ಲೇ ಅವರು ಕಾಡಿನ ಉಳಿವಿಗೆ ಮತ್ತು ಅಭಿವೃದ್ಧಿಗೆ ಕೈಗೊಂಡ ಕೆಲವು ಮಹತ್ವಪೂರ್ಣ ಚಟುವಟಿಕೆಗಳು ಗಮನಾರ್ಹವಾಗಿವೆ.**

- **ವೃಕ್ಷೋದ್ಯಾನ ಯೋಜನೆ:** ರಾಜ್ಯದ ವಿವಿಧ ಭಾಗಗಳಲ್ಲಿ ಹೊಸದಾಗಿ ಟ್ರೀ ಪಾರ್ಕ್‌ಗಳನ್ನು ನಿರ್ಮಾಣ ಮಾಡುವ ಮೂಲಕ ಅರಣ್ಯ ಇಲಾಖೆ ಯೋಜನೆಗಳು ಸಾರ್ವಜನಿಕರಿಗೆ ತಲಪುವಂತೆ ಕ್ರಮಕ್ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ೧೨೪ ವೃಕ್ಷೋದ್ಯಾಗಳವನ್ನು ನಿರ್ವಹಣೆ ಮಾಡಲು ಗುರಿಯನ್ನು ಹಂಚಿಕೆ ಮಾಡಲಾಗಿದೆ.
- **ಬೆಂಗಳೂರು ಮಿಷನ್-2022:** ಬೆಂಗಳೂರಿಗೆ ನವಚೈತನ್ಯ ಕಾರ್ಯಕ್ರಮದಂತೆ ಹಾಗೂ 2021-22ನೇ ಸಾಲಿನಲ್ಲಿ ಬೆಂಗಳೂರು ವಿಭಾಗ ವ್ಯಾಪ್ತಿಯ ಕಾಡುಗೋಡಿ ವೃಕ್ಷೋದ್ಯಾನ, ಮಾಚೋಹಳ್ಳಿ ವೃಕ್ಷೋದ್ಯಾನ ಮತ್ತು ತುರಹಳ್ಳಿ ಎಂ.ಎಸ್ ವೃಕ್ಷೋದ್ಯಾನಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಯಿತು. 2021 ರ ಜೂನ್ 30ರಂದು ಕಾಡುಗೋಡಿಯಲ್ಲಿ ನಿರ್ಮಾಣಗೊಂಡಿರುವ ವೃಕ್ಷೋದ್ಯಾನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದರು.
- ರಾಜ್ಯದಲ್ಲಿ ಡೀಮ್ಡ್ ಫಾರೆಸ್ಟ್ ಅಧಿಸೂಚನೆ ಹೊರಡಿಸಲು ಇದ್ದ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಯಿತು.
- **ಮಾನವ - ಪ್ರಾಣಿ ಸಂಘರ್ಷದ ಸನ್ನಿವೇಶಗಳಲ್ಲಿ ಬಲಿಯಾಗುವ ಕರಿ - ಮೇಕೆಗಳಿಗೆ ಕೊಡುವ ಪರಿಹಾರಧನವನ್ನು 5 ಸಾವಿರ ರೂ.ನಿಂದ 10 ಸಾವಿರ ರೂ.ಗೆ ಹಾಗೂ ದನ-ಎಮ್ಮೆಗಳಿಗೆ 10 ಸಾವಿರ ರೂ.ನಿಂದ 20 ಸಾವಿರ ರೂ.ಗೆ ಹೆಚ್ಚಳ ಮಾಡಲಾಯಿತು.**
- ವನ್ಯ ಜೀವಿಗಳಿಗೆ ಪೂರಕವಾದ ಅರಣ್ಯದಲ್ಲಿ ಹಣ್ಣಿನ ಗಿಡಗಳನ್ನು ಬೆಳಸುವ ಯೋಜನೆಯನ್ನು ಪ್ರಾಯೋಗಿಕವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ

ತುರಹಳ್ಳಿ ಟ್ರೀ ಪಾರ್ಕ್ ಕುರಿತು ನಾಗರಿಕರೊಂದಿಗೆ ಸಂವಾದ

## ಅರಣ್ಯ ಸಚಿವರಾಗಿ ಹಲವಾರು ಸ್ಥಳಗಳಿಗೆ ಭೇಟಿ, ವೀಕ್ಷಣೆ ಮತ್ತು ಸಭೆಗಳು

ಸೇವಾ ಟ್ರಸ್ಟ್‌ನ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಯಿತು.

- ಶ್ರೀರಂಗಪಟ್ಟಣದ ರಾಮಸರ್ ಪ್ರದೇಶವನ್ನು ಜೀವವೈವಿಧ್ಯ ತಾಣವನ್ನಾಗಿ ಘೋಷಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
- ಅರಣ್ಯ ಇಲಾಖೆಯ ಅಧಿಕಾರಿ ನೌಕರರ ಜೇಷ್ಠತಾ ವಿಷಯದಲ್ಲಿ ಸುಮಾರು 5 ವರ್ಷಗಳಿಂದ ಬಾಕಿ ಇದ್ದ ನ್ಯೂನತೆಗಳನ್ನು ಸರಿಪಡಿಸಿ ಗಾರ್ಡ್ ಹಂತದಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಂತದವರೆಗೆ ಬಡ್ತಿ ಪಡೆಯಲು ಅವಕಾಶ ಕಲ್ಪಿಸಲಾಯಿತು.
- ಚಾಮರಾಜನಗರದಿಂದ ಕಲಬುರಗಿಯವರೆಗೆ, ದಕ್ಷಿಣ ಕನ್ನಡದಿಂದ ಬೆಳಗಾವಿಯವರೆಗೆ ಅರಣ್ಯ ವಿಭಾಗಗಳಿಗೆ ನಿರಂತರ ಪ್ರವಾಸ ಮಾಡಿ ಇಲಾಖೆಯ ಕೆಲಸಗಳಿಗೆ ವೇಗ ನೀಡಲಾಯಿತು.
- **ದೇವರಕಾಡು (ದೈವೀನವನ) ಅಭಿವೃದ್ಧಿ ಮತ್ತು ಸಂರಕ್ಷಣೆ ಯೋಜನೆ:** 2021-22 ನೇ ಸಾಲಿನಲ್ಲಿ 26 ದೇವರಕಾಡುಗಳನ್ನು ನಿರ್ವಹಣೆ ಮಾಡಲು ಯೋಜನೆ ರೂಪಿಸಲಾಯಿತು.
- ಸಮೃದ್ಧ ಹಸಿರು ಗ್ರಾಮ ಯೋಜನೆಯಡಿಯಲ್ಲಿ 2021-22 ನೇ ಸಾಲಿನಲ್ಲಿ 75 ಹೆ ನೆಡುತೋಪು ನಿರ್ವಹಣೆ ಮಾಡಲು ಯೋಜನೆ ರೂಪಿಸಲಾಯಿತು.

**ಶ್ರೀ ಅರವಿಂದ ಲಿಂಬಾವಳಿಯವರು ಸಚಿವರಾಗಿದ್ದಾಗ ಬಿಬಿಎಂಪಿ ಕೋವಿಡ್ ನಿಯಂತ್ರಣ ಉಸ್ತುವಾರಿ ನೋಡಲ್ ಸಚಿವರಾಗಿ ಕೋವಿಡ್ ವಾರ್‌ರೂಂ, ಹೆಲ್ಪ್‌ಲೈನ್‌ಗಳ ನಿರ್ವಹಣೆ, ಮೇಲ್ವಿಚಾರಣೆ ನಡೆಸಿದರು. ಅಲ್ಲದೆ ಟ್ರಯಾಜ್ ಕೇಂದ್ರಗಳ ಪರಿಕಲ್ಪನೆ ಮತ್ತು ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದರು.**

- ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆ 2021-22ನೇ ಸಾಲಿನಲ್ಲಿ 575 ಹೆ. ನೆಡುತೋಪು ನಿರ್ವಹಣೆ ಮಾಡಲು ಯೋಜನೆ ರೂಪಿಸಲಾಯಿತು.
- **ಸ್ಮೃತಿವನಗಳ ನಿರ್ಮಾಣ:** 2021-22ನೇ ಸಾಲಿನ ಆಯವ್ಯಯದ ಘೋಷಣೆಯಂತೆ ತುಮಕೂರಿನಲ್ಲಿ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಮತ್ತು ಉಡುಪಿಯಲ್ಲಿ ಶ್ರೀ ಪೇಜಾವರ ವಿಶ್ವೇಶ್ವರ ತೀರ್ಥ ಶ್ರೀಪಾದರ ಗೌರವಾರ್ಥ ಸ್ಮೃತಿವನವನ್ನು ತಲಾ 2.00 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಕಾರ್ಯಕ್ರಮವನ್ನು ರೂಪಿಸಲಾಯಿತು.
- 2021-22ನೇ ಸಾಲಿನ ಆಯವ್ಯಯದ ಘೋಷಣೆಯಂತೆ ರಾಜ್ಯ ನಗರಗಳಲ್ಲಿ ವೃಕ್ಷ ಸಂಪತ್ತನ್ನು ಹೆಚ್ಚಿಸಿ ಉತ್ತಮ ಪರಿಸರವನ್ನು ಸೃಷ್ಟಿಸಲು ಆಯ್ದ ಪ್ರದೇಶಗಳಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಮತ್ತು ಆರ್ಥಿಕ ಸಹಾಯದೊಂದಿಗೆ ಸ್ಮೃತಿವನಗಳ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಯೋಜನೆ ರೂಪಿಸಲಾಯಿತು.
- ರಾಜ್ಯದ ಪೂರ್ವ ಪ್ರಸ್ಥಭೂಮಿ ಪ್ರದೇಶದಲ್ಲಿ ಕಾಣಸಿಗುವ ಅಳಿವಿನಂಚಿನಲ್ಲಿರುವ ಲೆಸ್ಸರ್ ಫ್ಲೋರಿಕಾನ್ **(LESSER FLORICAN)** ಪಕ್ಷಿ ಪ್ರಭೇದ ಸಂರಕ್ಷಣೆ ಕಾರ್ಯಕ್ರಮವನ್ನು ಪ್ರಾರಂಭಿಕವಾಗಿ 50.00 ಲಕ್ಷ ರೂ.ಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲು ಯೋಜನೆ ರೂಪಿಸಲಾಯಿತು.
- ಕಾಡಂಚಿನಲ್ಲಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಆಕಸ್ಮಿಕ ವನ್ಯಜೀವಿಗಳ ಹಾವಳಿಯಿಂದ ಉಂಟಾಗುತ್ತಿರುವ ಹಾನಿ ಪ್ರಕರಣಗಳಲ್ಲಿ ತ್ವರಿತವಾಗಿ ದಯಾತ್ಮಕ ಧನ ಪಾವತಿಸಲು ಅರಣ್ಯ ಇ-ಪರಿಹಾರ ಯೋಜನೆ ಯನ್ನು ಅನುಷ್ಠಾನಗೊಳಿಸಲಾಯಿತು. ಜುಲೈ-2021 ರಿಂದ ಅಕ್ಟೋಬರ್-2021 ರವರೆಗೆ542.32 ಲಕ್ಷ ರೂ. ಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಇ-ಪರಿಹಾರ ತಂತ್ರಾಂಶದ ಮೂಲಕ ಪಾವತಿಸಲು ಕ್ರಮಕೈಗೊಳ್ಳಲಾಯಿತು.
- ಚಾಮರಾಜಪೇಟೆನಗರ ಜಿಲ್ಲೆಯ ಗೋಪಿನಾಥಂ ಪ್ರದೇಶದಲ್ಲಿ 5 ಕೋಟಿ ರೂ.ವೆಚ್ಚದಲ್ಲಿ ವನ್ಯಜೀವಿ ಸಫಾರಿಯನ್ನೊಳಗೊಂಡಂತೆ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಿ, ಕ್ರಮಕೈಗೊಳ್ಳಲಾಯಿತು.
- ಆನೆ ಕಾರಿಡಾರ್ ಭಾಗವಾಗಿರುವ ಚಾಮರಾಜನಗರ ಜಿಲ್ಲೆಯ ಬೂದಿಪಡಗದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಆನೆ ಶಿಬಿರವನ್ನು ಪ್ರಾರಂಭಿಸಲು ಅನುಷ್ಠಾನಗೊಳಿಸಿ, ಕ್ರಮಕೈಗೊಳ್ಳಲಾಗಿದೆ.

**ಕೋಲಾರ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಜಿಲ್ಲೆಯ ಅಭಿವೃದ್ಧಿಗೆ ಹಾಗೂ ಕೋವಿಡ್ ನಿಯಂತ್ರಣ ಕಾರ್ಯಗಳನ್ನು ಯಶ್ವಸಿಯಾಗಿ ನಿರ್ವಹಿಸಲಾಗಿದೆ.**

# 3. ಕ್ರಿಯಾಶೀಲತೆ ಮೆರೆದ ಆರೋಗ್ಯ ಖಾತೆ (2012-13)

- **ಆಯುಷ್ ವೈದ್ಯರ ಬೇಡಿಕೆಗೆ ಸಮಿತಿ:** `ಆಯುಷ್' ವಿಭಾಗದ ವೈದ್ಯರೂ ಮುಷ್ಕರಕ್ಕೆ ಇಳಿದಾಗ ಅವರ ಮೂರು ಪ್ರಮುಖ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ.
- ವೈದ್ಯರ ವೇತನ ಹೆಚ್ಚಳ: ಸರ್ಕಾರಿ ವೈದ್ಯರ ವೇತನದ ಗಮನಾರ್ಹ ಹೆಚ್ಚಳ.
- **ಡೆಂಗ್ಯು, ಪಿಡುಗಿನ ನಿರ್ವಹಣೆ:** ರಾಜ್ಯದಲ್ಲಿ ಹಬ್ಬಿದ್ದ ಡೆಂಗ್ಯು ಜ್ವರದ ಸಮರ್ಥ ನಿರ್ವಹಣೆ. ಪಿಡುಗು ತಡೆಗಟ್ಟಲು ಎಲ್ಲಾ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಂಡಿದ್ದಕ್ಕೆ ಸಾರ್ವಜನಿಕರಿಂದ ಪ್ರಶಂಸೆ.
- ಉಡುಪಿ ಜಿಲ್ಲಾ ಆಸ್ಪತ್ರೆಯ ವಿಸ್ತರಣೆಯ ಶಂಕುಸ್ಥಾಪನೆ. ಹೊಳಲ್ಕೆರೆ ತಾಲೂಕು ಆಸ್ಪತ್ರೆಯು ಕಾರ್ಯಾರಂಭ; ಹಿರಿಯೂರು ತಾಲೂಕಿನ ಹರಿಯಬ್ಬೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ.
- **ಎಂಡೋಸಲ್ಫಾನ್ ಸಂತ್ರಸ್ತರಿಗೆ ಪರಿಹಾರ :** ಎಂಡೋಸಲ್ಫಾನ್ ಸಂತ್ರಸ್ತರನ್ನು ಕಣ್ಣಾರೆ ನೋಡಲು ಕೊಕ್ಕಡ ಗ್ರಾಮಕ್ಕೆ ಬಂದ ಪ್ರಥಮ ಆರೋಗ್ಯ ಸಚಿವ. ದಕ್ಷಿಣ ಕನ್ನಡ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಎಂಡೋಸಲ್ಫಾನ್ ಕೀಟನಾಶಕದ ದುಷ್ಪರಿಣಾಮದಿಂದಾಗಿ ಜನಿಸಿದ ನೂರಾರು ವಿಕಲಾಂಗ ಮಕ್ಕಳಿಗೆ ಪರಿಹಾರ; ಎಂಡೋಸಲ್ಫಾನ್ ಸಂತ್ರಸ್ತರಿಗಾಗಿಯೇ ಒಂದು ಸಮುದಾಯ ಆರೋಗ್ಯ

ಕೇಂದ್ರವನ್ನು ಸ್ಥಾಪಿಸಲು ಆದೇಶ.

- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಒಂದೂವರೆ ಲಕ್ಷ ರೂ.ವರೆಗೆ ವೈದ್ಯಕೀಯ ವಿಮೆ ಸೌಲಭ್ಯ ನೀಡುವ ದೇಶದಲ್ಲೇ ವಿಶಿಷ್ಟವಾದ `ವಾಜಪೇಯಿ ಆರೋಗ್ಯಶ್ರೀ' ಯೋಜನೆ ಕಾಡುಗೋಡಿಯಲ್ಲಿ ಬೃಹತ್ ಆರೋಗ್ಯ ಮೇಳದ ಮೂಲಕ ಆರಂಭ; ವಿಸ್ತರಿತ ಯೋಜನೆಯಿಂದ ಲಕ್ಷಾಂತರ ನಾಗರಿಕರಿಗೆ ಅನುಕೂಲ.
- ಬೆಂಗಳೂರಿಗೆ ವಿದೇಶದಿಂದ ಬಂದು ಹಬ್ಬಿದ್ದ ಹಕ್ಕಿಜ್ವರದ ನಿಯಂತ್ರಣಕ್ಕಾಗಿ ಹದಿನೈದು ದಿನಗಳ ಕಾಲ ಸತತವಾಗಿ ಕಾರ್ಯಾಚರಣೆ ನಡೆಸಿ ಸಾಂಕ್ರಾಮಿಕ ರೋಗವನ್ನು ಆರಂಭದಲ್ಲೇ ಚಿವುಟಲು ಸೂಕ್ತ ಕ್ರಮ; ಇದಕ್ಕಾಗಿ ವಿಶೇಷ ಕಾರ್ಯಪಡೆಯನ್ನೂ ರಚಿಸಿ ನುರಿತ ವೈದ್ಯರ, ಸಿಬ್ಬಂದಿಗಳ ನೆರವು ಪಡೆದು ರೋಗಪೀಡಿತ ಹಕ್ಕಿಗಳ ನಾಶ.
- ಆಯುಷ್ ಮತ್ತು ಎಂಬಿಬಿಎಸ್ ವೈದ್ಯರ ನಡುವಣ ವೇತನ ತಾರತಮ್ಯ ನಿವಾರಣೆ.
- 13 ವರ್ಷ ಸೇವೆ ಸಲ್ಲಿಸಿದ ವೈದ್ಯಾಧಿಕಾರಿಗಳು ಮತ್ತು ದಂತ ವೈದ್ಯಾಧಿಕಾರಿಗಳ ವೇತನ ಹೆಚ್ಚಳ.

# 4. ಶಿಕ್ಷಣ ರಂಗಕ್ಕೆ ಹೊಸದಿಕ್ಕು (2008-10)

**2008ರ ಹೊತ್ತಿಗೆ ಶಿಕ್ಷಣ ರಂಗವು ಹಲವು ಗಂಭೀರ ಸವಾಲುಗಳನ್ನು ಎದುರಿಸುತ್ತಿತ್ತು. ದೇಶದ ಮಾನವ ಸಂಪನ್ಮೂಲವನ್ನು ಸಮೃದ್ಧಗೊಳಿಸುವ ಈ ಕಾಯಕದಲ್ಲಿ ಅರವಿಂದ ಲಿಂಬಾವಳಿಯವರು ಗರಿಷ್ಠ ಪ್ರಮಾಣದ ರಚನಾತ್ಮಕ, ಗುಣಾತ್ಮಕ ಬದಲಾವಣೆಗಳನ್ನು ತಂದರು. ಅವರು ಉನ್ನತ ಶಿಕ್ಷಣ ಸಚಿವರಾಗಿದ್ದ ಕಾಲಾವಧಿಯಲ್ಲಿ ತಳೆದ ನಿರ್ಣಯಗಳು, ರೂಪಿಸಿದ ಕಾರ್ಯಕ್ರಮಗಳು, ಜಾರಿಗೆ ತಂದ ವಿನೂತನ ಉಪಕ್ರಮಗಳೇ ಅವರ ಯಶಸ್ಸಿಗೆ ನಿದರ್ಶನಗಳಾಗಿವೆ.**

- **ಕರ್ನಾಟಕ ಜ್ಞಾನ ಆಯೋಗದ ಸ್ಥಾಪನೆ**
- **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸ್ಥಾಪನೆ**
- **ವಿಕೇಂದ್ರೀಕರಣದ ಮೊದಲ ಹೆಜ್ಜೆ - ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆ;** ಮಾದರಿ ವಿಶ್ವವಿದ್ಯಾಲಯಗಳ ಪರಿಕಲ್ಪನೆ : ದಾವಣಗೆರೆ ವಿಶ್ವವಿದ್ಯಾಲಯ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಕಾನೂನು ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ, ಶ್ರೀಮತಿ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವ ವಿದ್ಯಾಲಯ
- ವಿಶ್ವವಿದ್ಯಾಲಯಗಳಿಗೆ ಒದಗಿಸುವ ಅನುದಾನದಲ್ಲಿ ಹೆಚ್ಚಳ
- ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ: ಅಜಿಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, ಅಲಯನ್ಸ್ ವಿಶ್ವವಿದ್ಯಾಲಯ

- ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಯುಜಿಸಿ 6ನೇ ವೇತನ ಶ್ರೇಣಿ
- ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ವ್ಯವಸ್ಥೆ
- ಅಂತಾರಾಷ್ಟ್ರೀಯ ಜ್ಞಾನ ವಿನಿಮಯ ಕಾರ್ಯಕ್ರಮ
- ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಯೋಜನೆಗಳಿಗೆ ವಿಶೇಷ ಅನುದಾನ
- ರಾಜ್ಯದ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ವಿಭಾಗಗಳಿಗೆ ವಿಶೇಷ ಅನುದಾನ
- ಉನ್ನತ ಶಿಕ್ಷಣ ಪ್ರವೇಶ ಹೆಚ್ಚಳಕ್ಕೆ ಕ್ರಮ: ಉನ್ನತ ಶಿಕ್ಷಣ ಪ್ರವೇಶ ಪ್ರಮಾಣ ಶೇ. 11 ಶೇ. ದಿಂದ 17ಕ್ಕೆ ಏರಿಕೆ.
- ವಿದ್ಯಾರ್ಥಿನಿಯರಿಗೆ ಪೂರ್ಣ ಪ್ರಮಾಣದ ಶುಲ್ಕ ರಿಯಾಯಿತಿ
- ಹಿಂದುಳಿದ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣಕ್ಕೆ ಉತ್ತೇಜನ
- ಡಾ. ನಂಜುಂಡಪ್ಪ ಸಮಿತಿಯ ವರದಿಯ ಅನುಷ್ಠಾನ
- ಖಾಸಗಿ ಕಾಲೇಜುಗಳಿಗೆ ಅನುದಾನ

- ಕಾಲೇಜುಗಳಲ್ಲಿನ ಅತಿಥಿ ಉಪನ್ಯಾಸಕರಿಗೆ ವೇತನ ಹೆಚ್ಚಳ
- ಅಧ್ಯಾಪಕರ ನೇಮಕಾತಿ
- ಉದ್ಯೋಗ ಮೇಳಗಳು
- ಸರ್ಕಾರಿ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳ ಅಭೂತಪೂರ್ವ ಅಭಿವೃದ್ಧಿ
- ವಿಜ್ಞಾನ ಕೋರ್ಸ್‌ಗಳತ್ತ ವಿದ್ಯಾರ್ಥಿಗಳನ್ನು ಸೆಳೆಯಲು ಕ್ರಮ
- ಸಿಇಟಿ ಕೌನ್ಸೆಲಿಂಗ್‌ನಲ್ಲಿ ಏಕರೂಪತೆ, ವಿಕೇಂದ್ರೀಕರಣ, ಬಡವರಿಗೆ ಶುಲ್ಕ ವಿನಾಯ್ತಿ, ಪ್ರತಿಭಾವಂತರಿಗೆ ಶೇಕಡಾ 6ರ ದರದಲ್ಲಿ ಸಾಲ, ಕನ್ನಡದಲ್ಲಿ ಓದಿದವರಿಗೆ ಶೇ. 5 ಮೀಸಲಾತಿ
- ಶೈಕ್ಷಣಿಕ ಸಮಸ್ಯೆಗಳ ನಿವಾರಣೆಗೆ ಶಿಕ್ಷಣ ಅದಾಲತ್
- **ಆಪ್ತಮಿತ್ರ :** ಸರ್ಕಾರಿ ಮತ್ತು ಖಾಸಗೀ ಸಹಭಾಗಿತ್ವವನ್ನೊಳಗೊಂಡ ಶಿಕ್ಷಣ ಸಂಸ್ಥೆಗಳಲ್ಲಿ ಮಧುರ ಬಾಂಧವ್ಯವನ್ನು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಕಾರ್ಯಕ್ರಮ.
- ಸಹಯೋಗ: ಸರ್ಕಾರಿ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಸಂಸ್ಥೆಗೆ ಬೇಕಾಗುವ ಕೌಶಲ್ಯಗಳ ತರಬೇತಿ ನೀಡಿಕೆ.
- **ಆಂಗ್ಲ ಭಾಷೆ ಕಲಿಕೆ**: ಆಯ್ದ ಕಾಲೇಜುಗಳಲ್ಲಿ ಇಂಗ್ಲಿಶ್ ಭಾಷಾ ಪ್ರಯೋಗಾಲಯ ಮತ್ತು ಡಿಜಿಟಲ್ ಲೈಬ್ರರಿಗಳನ್ನು ವ್ಯವಸ್ಥೆಗೊಳಿಸಲಾಗಿದೆ.
- **ಮಾನವತೆ:** ವಿದ್ಯಾರ್ಥಿಗಳಿಗೆ ಮೌಲ್ಯ ಪ್ರಜ್ಞೆ, ನೈತಿಕತೆ ಮಾನವೀಯತೆ ತರಬೇತಿ.
- ಕಾಲೇಜುಗಳಿಗೆ ಅಂತರಜಾಲ ಸಂಪರ್ಕ
- **ತಾಂತ್ರಿಕ ಶಿಕ್ಷಣಕ್ಕೆ ಕಾಯಕಲ್ಪ:** ಪಾಲಿಟೆಕ್ನಿಕ್ ಓದಿದವರಿಗೆ ಶೇ. 15 ಸೀಟು; 23ಹೊಸ ಪಾಲಿಟೆಕ್ನಿಕ್; ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕಾರ್ಡ್‌ಗಳು
- **ಸಮುದಾಯ ಪಾಲಿಟೆಕ್ನಿಕ್‌ಗಳು** : ಗ್ರಾಮೀಣ ಪ್ರದೇಶದಲ್ಲಿನ ಪಾಲಿಟೆಕ್ನಿಕ್‌ಗಳ ಗುಣಮಟ್ಟದ ಸಾಮರ್ಥ್ಯ ಹೆಚ್ಚಳ.
- **ಹೊಸ ಕಾಲೇಜುಗಳಿಗೆ ಮಾನ್ಯತೆ :** ಹೊಸ 10 ಇಂಜಿನಿಯರಿಂಗ್ ಕಾಲೇಜುಗಳಿಗೆ AICTE ಮನ್ನಣೆ ದೊರಕಿದೆ.
- ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉಪಗ್ರಹ ಆಧಾರಿತ ಉಚಿತ ಸಿಇಟಿ ಕೋಚಿಂಗ್
- ವಿವಿಧ ಬಗೆಯ ಶಿಕ್ಷಕರ ಹತ್ತಾರು ಬೇಡಿಕೆಗಳ ಈಡೇರಿಕೆ.
- 40 ಸರ್ಕಾರಿ ಪದವಿ ಕಾಲೇಜುಗಳಿಗೆ ನ್ಯಾಕ್ನ ಮರುಮನ್ನಣೆ. .
- ಅರೆಕಾಲಿಕ ಶಿಕ್ಷಕರ ನೇಮಕಾತಿಯ ಸಕ್ರಮಾತಿ(1987-88ರಿಂದ 92-93ರ ತನಕ).
- ರಾಷ್ಟ್ರೀಯತೆ, ಪರಂಪರೆಯ ಸಂರಕ್ಷಣೆಯ ನಿಟ್ಟಿನಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಭಯೋತ್ಪಾದನಾ ವಿರೋಧಿ ಸಮಾವೇಶಗಳು

**ಹೀಗೆ ಉನ್ನತ ಶಿಕ್ಷಣ ರಂಗದಲ್ಲಿ ಮೌಲಿಕ, ಸಂಖ್ಯಾತ್ಮಕ ಹಾಗೂ ಗುಣಾತ್ಮಕ ಬದಲಾವಣೆಗಳನ್ನು ತರುವಲ್ಲಿ ಅರವಿಂದ ಲಿಂಬಾವಳಿಯವರು ವಹಿಸಿದ ಪಾತ್ರವು ಗಮನಾರ್ಹ. ಅವರು ಜಾರಿಗೊಳಿಸಿದ ಬಹುತೇಕ ಕ್ರಮಗಳು ವಿದ್ಯಾರ್ಥಿ, ಶಿಕ್ಷಕ, ಸಿಬ್ಬಂದಿ, ಆಡಳಿತವರ್ಗ, ಪಾಲಕ ಸಮುದಾಯ, ಶಿಕ್ಷಣ ತಜ್ಞರು - ಹೀಗೆ ಎಲ್ಲರ ಮುಕ್ತ ಪ್ರಶಂಸೆಗೆ ಒಳಗಾಗಿದೆ.**

# ಕರ್ನಾಟಕಕ್ಕೆ ಮೋದಿ ಸರ್ಕಾರದ ಕೊಡುಗೆಗಳು

**ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರದ ಬಿ.ಜೆ.ಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕರ್ನಾಟಕದ ಅಭಿವೃದ್ಧಿಗಾಗಿ ನೀಡಿರುವ ಅನುದಾನ ಅಪಾರವಾಗಿದೆ. ಇದು ಕೇಂದ್ರದ ಬಿ.ಜೆ.ಪಿ ಸರ್ಕಾರಕ್ಕೆ ಕರ್ನಾಟಕದ ಬಗ್ಗೆ ಇರುವ ಪ್ರಾಮಾಣಿಕ ಕಳಕಳಿಯನ್ನು ತೋರಿಸುತ್ತದೆ.**

# ಕರ್ನಾಟಕಕ್ಕೆ ಮೋದಿ ಸರ್ಕಾರದ ಮುಖ್ಯ ಕೊಡುಗೆಗಳು

## ● ರಸ್ತೆಗಳು, ಬಂದರು ಅಭಿವೃದ್ಧಿ

- 2014 ರಿಂದ ಈವರೆಗೆ ಕರ್ನಾಟಕದ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಇಮ್ಮಡಿಯಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು 1.16 ಲಕ್ಷ ಕೋಟಿ ರೂ.ಗಳಷ್ಟು ಇಮ್ಮಡಿ ಮೊತ್ತವನ್ನು ಹೂಡಿದೆ.
- ಶ್ರೀ ನರೇಂದ್ರ ಮೋದಿಯವರು ಕರ್ನಾಟಕದಲ್ಲಿ 27 ಸಾವಿರ ಕೋಟಿ ರೂ.ಗಳ ಮೊತ್ತದ ವಿವಿಧ ಯೋಜನೆಗಳಿಗೆ ಇತ್ತೀಚೆಗೆ ಶಿಲಾನ್ಯಾಸ ಮಾಡಿದ್ದಾರೆ.
- ಭಾರತಮಾಲಾ ಪರಿಯೋಜನೆಯ ಅಡಿಯಲ್ಲಿ ಬೆಂಗಳೂರು ರಿಂಗ್‌ರೋಡ್ ಯೋಜನೆಯನ್ನು (ಸೆಟಲೈಟ್ ಟೌನ್ ರಿಂಗ್ ರೋಡ್) 15 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.
- ಕಾರವಾರ ಬಂದರಿಗೆ ಸಂಬಂಧಿಸಿದಂತೆ 3800 ಕೋಟಿ ರೂ.ಗಳ ಏಳು ಯೋಜನೆಗಳಿಗೆ ಶ್ರೀ ನರೇಂದ್ರ ಮೋದಿಯವರು ಶಿಲಾನ್ಯಾಸ ಮಾಡಿದ್ದಾರೆ.
- 50 ವಿವಿಧ ಜಿಲ್ಲಾ ಯೋಜನೆಗಳ ಅಡಿಯಲ್ಲಿ 3549 ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ

## ● ರೈಲು ಸೌಕರ್ಯ

- ಕರ್ನಾಟಕಕ್ಕೆ ದೊರಕುತ್ತಿರುವ ರೈಲ್ವೆ ಅನುದಾನದಲ್ಲಿ ಶೇಕಡಾ 92 ರಷ್ಟು ಹೆಚ್ಚಳವಾಗಿದೆ. ಬಂಡವಾಳ ವೆಚ್ಚವು ಶೇಕಡಾ 129 ರಷ್ಟು ಹೆಚ್ಚಾಗಿದೆ; ಹೊಸ ರೈಲುಮಾರ್ಗಗಳ ನಿರ್ಮಾಣ ಪ್ರಮಾಣವು ಶೇಕಡಾ 190 ರಷ್ಟು ಹೆಚ್ಚಾಗಿದೆ. ರೈಲ್ವೆ ಹಳಿಗಳ ಡಬ್ಲಿಂಗ್ ಕಾರ್ಯವೂ 2014 ಕ್ಕೆ ಹೋಲಿಸಿದರೆ ಶೇಕಡಾ 60 ರಷ್ಟು ಹೆಚ್ಚಾಗಿದೆ.

## ● ಸಬ್‌ಅರ್ಬನ್ ರೈಲು

- 2022ರ ಜುಲೈ ತಿಂಗಳಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು 15,767 ಕೋಟಿ ರೂ.ಗಳ ಅಂದಾಜು ವೆಚ್ಚದ 148 ಕಿಮೀ ಉದ್ದದ ಸಬ್‌ಅರ್ಬನ್ ರೈಲು ಯೋಜನೆಗೆ ಶಿಲಾನ್ಯಾಸ ಮಾಡಿದ್ದಾರೆ. ಇದನ್ನು ಕೇವಲ 40 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದು.
- ಬೈಯಪ್ಪನಹಳ್ಳಿಯಿಂದ ಚಿಕ್ಕಬಾಣಾವರದವರೆಗಿನ ಕಾರಿಡಾರ್-2 ಯೋಜನೆಗೆ ಈಗಾಗಲೇ ಕಾರ್ಯಾದೇಶವನ್ನು ನೀಡಲಾಗಿದೆ.

## ● ಮೆಟ್ರೋ ರೈಲು

- 2014 ರಲ್ಲಿ ಕೇವಲ ಏಳು ಕಿಲೋಮೀಟರ್‌ಗಳ ಉದ್ದವಿದ್ದ ಮೆಟ್ರೋ ರೈಲಿನ ಉದ್ದ ಈಗ 56 ಕಿಮೀ ಆಗಿದೆ. ಎರಡನೇ ಹಂತ, 2ಎ ಮತ್ತು 2ಬಿ ಹಂತಕ್ಕೆ 41,193 ಕೋಟಿ ರೂ.ಗಳನ್ನು ನೀಡಲಾಗಿದೆ. 2ಎ ಮತ್ತು 2ಬಿ ಯೋಜನೆಗಳು ಆದಷ್ಟು ಬೇಗ ಪೂರ್ಣಗೊಳ್ಳಲಿವೆ. ಇದಲ್ಲದೆ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೋ ಮಾರ್ಗವೂ ಪೂರ್ಣವಾಗಲಿದೆ.

## ● ವಿಮಾನಯಾನ ಸೌಕರ್ಯ

- 2014 ರಲ್ಲಿ ಕರ್ನಾಟಕದಲ್ಲಿ ಏಳು ವಿಮಾನ ನಿಲ್ದಾಣಗಳಿದ್ದವು. ಅವುಗಳ ಸಂಖ್ಯೆ ಈಗ ದುಪ್ಪಟ್ಟಾಗಿದೆ. ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ) ಯೋಜನೆಯಲ್ಲಿ ಆರು ವಿಮಾನ ನಿಲ್ದಾಣಗಳು ಮತ್ತು 90 ವಿಮಾನ ಮಾರ್ಗಗಳು ಆರಂಭವಾಗಿವೆ.
- ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಟರ್ಮಿನಲ್ 2 ಸೇರ್ಪಡೆಯಾಗಿದೆ. ಈ ಟರ್ಮಿನಲ್‌ನ ಮೊದಲ ಹಂತವನ್ನು ಶ್ರೀ ನರೇಂದ್ರ ಮೋದಿಯವರು ಇತ್ತೀಚೆಗೆ ಉದ್ಘಾಟಿಸಿದರು. ಇಲ್ಲಿ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಬೃಹತ್ ಪ್ರತಿಮೆಯನ್ನೂ ಅನಾವರಣ ಮಾಡಲಾಗಿದೆ.

## ● ವಿದ್ಯುತ್ ಚಾಲಿತ ವಾಹನಗಳ ಕ್ರಾಂತಿ

- ಫೇಮ್ 2 ಯೋಜನೆಯಡಿ ಟಾಟಾ ಸಂಸ್ಥೆಯ 921 ಹಾಗೂ ಸ್ವಿಚ್ ಮೊಬಿಲಿಟಿಯ 300 ಇ-ಬಸ್‌ಗಳನ್ನು ಬೆಂಗಳೂರಿಗೆ ಮಂಜೂರು ಮಾಡಲಾಗಿದೆ. ಈಗಾಗಲೇ 170 ಬಸ್‌ಗಳು ಸೇವಾನಿರತವಾಗಿವೆ. ಮುಂದಿನ ದಿನಗಳಲ್ಲಿ ಬಿಎಂಟಿಸಿಯು ಒಟ್ಟಾರೆ 1500 ಇ-ಬಸ್‌ಗಳನ್ನು ಹೊಂದಲಿದೆ.

## ● ಜಿಎಸ್‌ಟಿ ಮೂಲಕ ಹಣಕಾಸು ಸುದೃಢತೆ

- 2021 ಮತ್ತು 2022 ರ ನಡುವೆ ಕರ್ನಾಟಕದ ಜಿಎಸ್‌ಟಿ ಪ್ರಮಾಣವು ಶೇಕಡಾ 30 ರಷ್ಟು ಹೆಚ್ಚಾಗಿದೆ. 2022-2023ರಲ್ಲಿ ಕರ್ನಾಟಕದ ಕೇಂದ್ರ ತೆರಿಗೆ ಸಂಗ್ರಹ ಪ್ರಮಾಣವು 29,783 ಕೋಟಿ ರೂ.ಗಳಾಗಿದ್ದವು. ಇದು 2014ಕ್ಕಿಂತ ಎರಡು ಪಟ್ಟು ಹೆಚ್ಚು.

## ● ನೇರ ವಿದೇಶಿ ಹೂಡಿಕೆ

- ಕರ್ನಾಟಕಕ್ಕೆ ಹರಿದ ನೇರ ವಿದೇಶಿ ಹೂಡಿಕೆಯ ಮೊತ್ತವು 2021-22 ರಲ್ಲಿ ದೇಶದ ಒಟ್ಟಾರೆ ಪ್ರಮಾಣದ ಶೇಕಡಾ 38 ರಷ್ಟಾಗಿದೆ. ಇದರಲ್ಲಿ ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಗೆ ಶೇಕಡಾ 35 ರಷ್ಟು, ಆಟೋಮೊಬೈಲ್ ಉದ್ಯಮಕ್ಕೆ ಶೇಕಡಾ 20 ರಷ್ಟು ಮತ್ತು ಶಿಕ್ಷಣ ರ ಂಗಕ್ಕೆ ಶೇಕಡಾ 12 ರಷ್ಟು ಹಣ ಹರಿದುಬಂದಿರುವುದು ಒಂದು ದಾಖಲೆ.

## ● ಸೆಮಿಕಂಡಕ್ಟರ್ ಉತ್ಪಾದನಾ ಕೇಂದ್ರವಾಗಿ

### ಬೆಂಗಳೂರು

- ಆತ್ಮನಿರ್ಭರ ಭಾರತದ ಭಾಗವಾಗಿ ಆರಂಭವಾದ ಸೆಮಿಕಂಡಕ್ಟರ್ ಉದ್ದಿಮೆಯಲ್ಲಿ ಕರ್ನಾಟಕಕ್ಕೆ 76 ಸಾವಿರ ಕೋಟಿ ರೂ.ಗಳ ಹೂಡಿಕೆ ಒದಗಿದೆ. ಅಂತಾರಾಷ್ಟ್ರೀಯ ಸೆಮಿಕಂಡಕ್ಟರ್ ಕನ್ಸಾರ್ಟಿಯಂ ರಾಜ್ಯದಲ್ಲಿ 22,900 ಕೋಟಿ ರೂ.ಗಳ ಹೂಡಿಕೆಗೆ ಮುಂದೆ ಬಂದಿದೆ.

### ● ರಾಷ್ಟ್ರೀಯ ತನಿಖಾ ಸಂಸ್ಥೆಯ ಕಚೇರಿ

- ಭಯೋತ್ಪಾದನಾ ಚಟುವಟಿಕೆಗಳ ಮೇಲೆ ನಿಗಾ ಇಡಲು ಬೆಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯ ಕಚೇರಿಯನ್ನು ಸ್ಥಾಪಿಸಲಾಗುತ್ತಿದೆ.

### ● "ಸ್ವರಾಜ್ಯದಿಂದ ಸುರಾಜ್‌ನತ್ತ"

- ಪ್ರಧಾನಮಂತ್ರಿಯವರ "ಸ್ವರಾಜ್ಯದಿಂದ ಸುರಾಜ್‌ನತ್ತ" ಮುನ್ನಡೆಯುವ ಆಶಯದ ಭಾಗವಾಗಿ ಬೆಂಗಳೂರಿನ ಬಹುತೇಕ ಜನತೆಯು ಹಲವು ಫಲಾನುಭವಗಳನ್ನು ಪಡೆದಿದ್ದಾರೆ. ಪ್ರಧಾನಮಂತ್ರಿ ಜನ್‌ಧನ್ ಯೋಜನೆಯಡಿ 13.49 ಲಕ್ಷ ಜನರು 713 ಕೋಟಿ ರೂ. ಠೇವಣಿಗಳನ್ನು ಮಾಡಿ ಲಾಭ ಪಡೆದಿದ್ದಾರೆ.

### ● ಪ್ರಧಾನಮಂತ್ರಿ ಆವಾಸ್ ಯೋಜನೆ

- ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕರ್ನಾಟಕಕ್ಕೆ 11,494 ಕೋಟಿ ರೂ.ಗಳ ವೆಚ್ಚದಲ್ಲಿ ಏಳು ಲಕ್ಷಕ್ಕೂ ಹೆಚ್ಚು ಮನೆಗಳನ್ನು ಕಟ್ಟಲಾಗುತ್ತಿದೆ.

### ● ಜಲಜೀವನ ಅಭಿಯಾನ

- ಪ್ರತಿ ಮನೆಗೂ ನೀರು: ಈ ಯೋಜನೆಯಡಿ ಕರ್ನಾಟಕದ 31 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ.

### ● ಕೃಷಿ ರಂಗಕ್ಕೆ ಕೊಡುಗೆ

- ಕರ್ನಾಟಕದ 750 ಹಳ್ಳಿಗಳಲ್ಲಿ ತಲಾ 30 ಲಕ್ಷ ರೂ.ಗಳ ನೆರವಿನೊಂದಿಗೆ ಆಹಾರ ಉತ್ಪಾದಕ ಸಂಸ್ಥೆಗಳನ್ನು (ಎಫ್‌ಪಿಓ) ಸ್ಥಾಪಿಸಲಾಗುತ್ತಿದೆ. "ಪ್ರತಿ ಹನಿಗೆ ಹೆಚ್ಚು ಬೆಳೆ" ಯೋಜನೆಯಡಿ 2500 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ.
- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಡಿ 54,42,644 ರೈತರು ವರ್ಷಕ್ಕೆ ತಲಾ 6000 ರೂ. ಪಡೆಯುತ್ತಿದ್ದಾರೆ. ಕರ್ನಾಟಕ ಸರ್ಕಾರವು ದೇಶದಲ್ಲೇ ವಿಶಿಷ್ಟವಾಗಿ ಈ ಹಣಕ್ಕೆ 4000 ರೂ.ಗಳನ್ನು ಸೇರಿಸಿ ರೈತರಿಗೆ ನೀಡುತ್ತಿದೆ.
- ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 285878 ಎಕರೆ ಪ್ರದೇಶವನ್ನು ಅತಿ ಸಣ್ಣ ನೀರಾವರಿ ಯೋಜನೆಯಡಿ ತರಲಾಗಿದೆ.

### ● ಬೆಳಕು, ವಿದ್ಯುತ್

- ಕಡಿಮೆ ಖರ್ಚಿನಲ್ಲಿ ಕರ್ನಾಟಕಕ್ಕೆ ಬೆಳಕಿತ್ತ 'ಉಜಾಲ' ಯೋಜನೆಯಡಿಯಲ್ಲಿ ಕೇಂದ್ರ ಬಿ.ಜೆ.ಪಿ ಸರ್ಕಾರವು ರಾಜ್ಯದಲ್ಲಿ 2.45 ಕೋಟಿ ಎಲ್.ಇ.ಡಿ ಬಲ್ಬ್ ವಿತರಣೆ ಮಾಡಿದೆ. ಇದರಿಂದ ರಾಜ್ಯಕ್ಕೆ ವರ್ಷಕ್ಕೆ 862 ಕೋಟಿ ರೂ. ಉಳಿಯುತ್ತಿದೆ.
- ಕರ್ನಾಟಕದಲ್ಲಿ ಇಂಧನ ಉತ್ಪಾದನಾ ಸಾಮರ್ಥ್ಯವನ್ನು 14,269ಮೆಗಾವಾಟ್‌ನಿಂದ 31452.86 ಮೆಗಾವಾಟ್‌ಗೆ ಹೆಚ್ಚಿಸಲಾಗಿದೆ.

## ಕರ್ನಾಟಕದಲ್ಲೇ ದೇಶಿ ಹೆಲಿಕಾಪ್ಟರ್ ನಿರ್ಮಾಣ ಘಟಕ ಆರಂಭ

ಇದೇ ಫೇಬ್ರುವರಿ ಮೊದಲ ವಾರ ಕರ್ನಾಟಕಕ್ಕೆ ಬಂದ ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ತುಮಕೂರಿನಲ್ಲಿ HAL ಹೆಲಿಕಾಪ್ಟರ್ ಕಾರ್ಖಾನೆ ಘಟಕವನ್ನು ಉದ್ಘಾಟಿಸಿದ್ದಾರೆ. ಇಲ್ಲಿ ಇನ್ನುಮುಂದೆ ಹೆಲಿಕಾಪ್ಟರ್‌ಗಳು ನಿರ್ಮಾಣವಾಗಲಿವೆ. 2016ರಲ್ಲಿ ಶ್ರೀ ಮೋದಿಯವರೇ ಶಂಕುಸ್ಥಾಪನೆ ಮಾಡಿದ್ದ ಈ ಯೋಜನೆಯು ಅವರಿಂದಲೇ ಉದ್ಘಾಟನೆಗೊಂಡಿದೆ.

ಇದಲ್ಲದೆ ತುಮಕೂರು ಕೈಗಾರಿಕಾ ಪ್ರದೇಶದ ಶಿಲಾನ್ಯಾಸವನ್ನೂ ಪ್ರಧಾನಿ ಶ್ರೀ ನರೇಂದ್ರ ಮೋದಿ ನೆರವೇರಿಸಿ ರಾಜ್ಯದ ಉದ್ಯಮರಂಗಕ್ಕೆ ಬಲ ನೀಡಿದ್ದಾರೆ. . ಮೂರು ಹಂತಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಮಾಡುವ ಯೋಜನೆ ಇದಾಗಿದ್ದು, ಇದನ್ನು ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಯೋಜನೆಯಡಿ ಪ್ರದೇಶದ ಅಭಿವೃದ್ಧಿ ಮಾಡಲಾಗುತ್ತದೆ. ಸುಮಾರು 8,484 ಎಕರೆ ಪ್ರದೇಶದಲ್ಲಿ ಮೂರು ಹಂತಗಳಲ್ಲಿ ಅಭಿವೃದ್ಧಿ ಮಾಡುವ ಯೋಜನೆ ಹೊಂದಲಾಗಿದೆ.

# ಮೋದಿ ಸರ್ಕಾರದ ಸಾಧನೆಗಳು

**2014ರಿಂದ ಭಾರತದ ಪ್ರಧಾನಮಂತ್ರಿಯಾಗಿ ದೇಶವನ್ನು ಮುನ್ನಡೆಸುತ್ತಿರುವ ಶ್ರೀ ನರೇಂದ್ರ ಮೋದಿಯವರು ಕಳೆದ 9 ವರ್ಷಗಳಿಂದ ಭಾರತದ ಜನತೆಗಾಗಿ ನೀಡಿದ ಕೊಡುಗೆಗಳ ಸಂಕ್ಷಿಪ್ತ ನೋಟ ಇಲ್ಲಿದೆ. ಕೋಟ್ಯಂತರ ನಾಗರಿಕರು ಈ ಹಲವು ಯೋಜನೆಗಳ ಫಲಾನುಭವಕ್ಕೆ ಪಾತ್ರರಾಗಿದ್ದಾರೆ. ನಾವೆಲ್ಲರೂ ಶ್ರೀ ನರೇಂದ್ರ ಮೋದಿಯವರನ್ನು ಅಭಿನಂದಿಸೋಣ!**

## ಬಡವರು - ದುರ್ಬಲರ ಸೇವೆ

- ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿಯಲ್ಲಿ 80 ಕೋಟಿ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ.
- ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ 6.29 ಕೋಟಿ ಮನೆಗಳಿಗೆ ಕೊಳವೆ ನೀರಿನ ಸಂಪರ್ಕ.
- ನಗರ ಮತ್ತು ಗ್ರಾಮೀಣ ಭಾಗದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 3 ಕೋಟಿಗೂ ಅಧಿಕ ಮನೆ ನಿರ್ಮಾಣ.
- ಸ್ವಚ್ಛ ಭಾರತ್ ಅಡಿಯಲ್ಲಿ 11.5 ಕೋಟಿ ಶೌಚಾಲಯ ನಿರ್ಮಾಣ.
- ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಡಿಯಲ್ಲಿ 31.9 ಲಕ್ಷ ಬೀದಿ ಬದಿಯ ವರ್ತಕರಿಗೆ ಸಾಲ ವಿತರಣೆ.
- ಮುದ್ರಾ ಯೋಜನೆಯಡಿ 35 ಕೋಟಿ ಸಣ್ಣ ಉದ್ಯಮಿಗಳಿಗೆ ಸಾಲ.
- ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ.
- ಕೋವಿಡ್ ಸಮಯದಲ್ಲಿ 20 ಕೋಟಿ ಮಹಿಳೆಯರಿಗೆ ನಗದು ವಿತರಣೆ.
- ಸ್ಟ್ಯಾಂಡಪ್ ಇಂಡಿಯಾ ಯೋಜನೆ ಅಡಿಯಲ್ಲಿ ಎಸ್‌ಸಿ ಮತ್ತು ಎಸ್‌ಟಿ ವರ್ಗಕ್ಕೆ 5,300 ಕೋಟಿ ರೂ.ಗೂ ಅಧಿಕ ಸಾಲ ಮಂಜೂರು.
- 60% ಹಾಲಿ ಸಚಿವರು ಎಸ್‌ಸಿ, ಎಸ್‌ಟಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದವರು.
- ಹಿಂದಿನದಕ್ಕೆ ಹೋಲಿಸಿದರೆ 2014ರಿಂದ ಮಂಜೂರಾದ ಏಕಲವ್ಯ ವಸತಿ ಶಾಲೆಗಳ ಪ್ರಮಾಣ 5 ಪಟ್ಟು ಹೆಚ್ಚು.
- ಮಹತ್ವಾಕಾಂಕ್ಷೆಯ ಜಿಲ್ಲೆಗಳು ರಫ್ತು ಸೇರಿದಂತೆ ಅಭಿವೃದ್ಧಿ ನೆಲೆಗಟ್ಟಿನಲ್ಲಿ ಸ್ಪರ್ಧಾತ್ಮಕ.
- 45.21 ಕೋಟಿ ಜನ್‌ಧನ್ ಖಾತೆ.
- ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 2.3 ಕೋಟಿಗೂ ಅಧಿಕ ಮನೆಗಳ ನಿರ್ಮಾಣ.
- 28.37 ಕೋಟಿ ಮಂದಿಯಿಂದ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಸದುಪಯೋಗ.
- 22.6 ಲಕ್ಷ ಕೋಟಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ.
- ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ವ್ಯಾಪ್ತಿಯಲ್ಲಿ 12.76 ಕೋಟಿ ಮಂದಿ.
- ಸೌಭಾಗ್ಯ ಯೋಜನೆಯಡಿ 2.6 ಕೋಟಿ ನಿವಾಸಿಗಳಿಗೆ ವಿದ್ಯುತ್ ಸಂಪರ್ಕ.
- ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 17.9 ಕೋಟಿ ಫಲಾನುಭವಿಗಳು.
- ಉಜ್ವಲ ಯೋಜನೆ ಅಡಿಯಲ್ಲಿ 9.1 ಕೋಟಿ ಎಲ್‌ಪಿಜಿ ಸಂಪರ್ಕ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯ 70% ಫಲಾನುಭವಿಗಳು ಎಸ್‌ಸಿ/ಎಸ್‌ಟಿ/ಒಬಿಸಿ ವರ್ಗಕ್ಕೆ ಸೇರಿದವರು.
- ಪ್ರಧಾನ ಮಂತ್ರಿ ಕಿಸಾನ್ ಅಡಿಯಲ್ಲಿ ಆದಾಯ ಸ್ವೀಕರಿಸುತ್ತಿರುವ 63% ಫಲಾನುಭವಿಗಳು ಎಸ್‌ಸಿ/ ಎಸ್‌ಟಿ/ಒಬಿಸಿ ವರ್ಗಕ್ಕೆ ಸೇರಿದವರು.
- ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯ 60% ಮನೆಗಳು ಎಸ್‌ಸಿ/ಎಸ್‌ಟಿ ವರ್ಗಕ್ಕೆ ಸೇರಿದವರದ್ದು.
- ವಿದ್ಯಾರ್ಥಿ ವೇತನ ಸ್ವೀಕರಿಸುತ್ತಿರುವ 60% ಎಸ್‌ಸಿ/ ಎಸ್‌ಟಿ/ಒಬಿಸಿ ವರ್ಗಕ್ಕೆ ಸೇರಿದವರು.
- ಮುದ್ರಾ ಯೋಜನೆಯ 35 ಕೋಟಿ ಫಲಾನುಭವಿಗಳಲ್ಲಿ 50% ಎಸ್‌ಸಿ/ಎಸ್‌ಟಿ/ಒಬಿಸಿ ವರ್ಗಕ್ಕೆ ಸೇರಿದವರು.
- ಉನ್ನತ ಶಿಕ್ಷಣದಲ್ಲಿ 10% ಇಡಬ್ಲ್ಯುಎಸ್ ಪಾಲು
- ವೈದ್ಯಕೀಯ ಶಿಕ್ಷಣದಲ್ಲಿ ಒಬಿಸಿ ಮತ್ತು ಇಡಬ್ಲ್ಯುಎಸ್ ಪಾಲು
- ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿ ಕಾಯ್ದೆ ಮೂಲಕ ಲೈಂಗಿಕ ಅಲ್ಪಸಂಖ್ಯಾತರ ಹಕ್ಕು ರಕ್ಷಣೆ
- ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಂಬಂಧಿತ ಜಾಗಗಳಲ್ಲಿ “ಪಂಚತೀರ್ಥ” ಅಭಿವೃದ್ಧಿ.

- ನ.15 ಭಗವಾನ್ ಬಿರ್ಸಾ ಮುಂಡಾ ಜಯಂತಿಯನ್ನು ಜನಜಾತೀಯ ಗೌರವ್ ದಿವಸ್ ಆಗಿ ಆಚರಣೆ.
- ಉದ್ಯೋಗಕ್ಕಾಗಿನ ಇ-ಶ್ರಮ ವೆಬ್ ಪೋರ್ಟಲ್‌ನಲ್ಲಿ 27.63 ಕೋಟಿ ಅಸಂಘಟಿತ ವಲಯದ ಕಾರ್ಮಿಕರು
- ನೋಂದಾಯಿತ ಪ್ರತಿ ಕಾರ್ಮಿಕರಿಗೆ 2 ಲಕ್ಷ ರೂ. ಅಪಘಾತ ವಿಮೆ ಸೌಲಭ್ಯ.
- ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ ಅಡಿಯಲ್ಲಿ ಪಿಂಚಣಿಗಾಗಿ 46.65 ಲಕ್ಷ ಅಸಂಘಟಿತ ವಲಯದ ಕಾರ್ಮಿಕರ ನೋಂದಣಿ.
- 60 ವರ್ಷದ ನಂತರ ಅವರಿಗೆಲ್ಲ 3000 ರೂ. ಕನಿಷ್ಠ ಪಿಂಚಣಿ ಲಭ್ಯ.
- ಮಾಸಿಕ 15000 ರೂ.ಗಿಂತ ಕಡಿಮೆ ವೇತನ ಪಡೆಯುವ ಕಾರ್ಮಿಕರಿಗೆ ಅವರ ಮಾಸಿಕ ವೇತನದ 24% ಕೋವಿಡ್-19 ಪರಿಹಾರವಾಗಿ ಇಪಿಎಫ್ ಖಾತೆಗೆ ವರ್ಗಾವಣೆ.
- ಇಪಿಎಫ್ಒ ಕಚೇರಿಯಿಂದ 91.69 ಲಕ್ಷ ಕಾರ್ಮಿಕರಿಗೆ ಕೋವಿಡ್-19 ಪರಿಹಾರದ ಮುಂಗಡವಾಗಿ 19,129 ಕೋಟಿ ರೂ. ವಿತರಣೆ.

## ರೈತರ ಏಳಿಗೆಯತ್ತ ದಾಪುಗಾಲು

- 2007-14 ಅವಧಿಗೆ ಹೋಲಿಸಿದರೆ 2014-22 ರ ಕೃಷಿ ಬಜೆಟ್ ಪ್ರಮಾಣ 4 ಪಟ್ಟು ಏರಿಕೆ.
- 1 ಲಕ್ಷ ಕೋಟಿ ರೂ. ಕೃಷಿ ಮೂಲಸೌಕರ್ಯ ನಿಧಿಗೆ ನೀಡಿಕೆ.
- 23 ಕೋಟಿ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆ.
- 2013-14 ರಿಂದ 2021-22ರವರೆಗೆ 109% ಬಾಸುಮತಿಯೇತರ ಅಕ್ಕಿ ರಫ್ತು.
- ಕನಿಷ್ಠ ಬೆಂಬಲ ಬೆಲೆಯಲ್ಲಿ ಎಣ್ಣೆಬೀಜ ಖರೀದಿ 1,500% ಹೆಚ್ಚಳ.
- ಕನಿಷ್ಠ ಬೆಂಬಲ ಬೆಲೆಯಲ್ಲಿ ಧಾನ್ಯ ಖರೀದಿ 7,350% ಹೆಚ್ಚಳ.
- ರೈತರನ್ನು ಜಾಗತಿಕ ಬೆಲೆ ಏರಿಕೆಯಿಂದ ರಕ್ಷಿಸಲು ರಸಗೊಬ್ಬರ ರಿಯಾಯಿತಿ 140% ಏರಿಕೆ.
- 2022-23ರಲ್ಲಿ 18 ಲಕ್ಷ ರೂ. ಕೋಟಿ ಕೃಷಿ ಸಾಲ ವಿತರಣೆ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ 1.2 ಲಕ್ಷ ಕೋಟಿ ರೂ.ಗೂ ಅಧಿಕ ಮೊತ್ತ ವಿತರಣೆ.
- 2021-26 ಅವಧಿಯ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ 93,068 ಕೋಟಿ ರೂ.ಗೂ ಅಧಿಕ ಮಂಜೂರು.
- ಪ್ರಸ್ತುತ 1000ಕ್ಕೂ ಅಧಿಕ ಮಂಡಿ ಇಎನ್‌ಎಎಂನೊಂದಿಗೆ ಸೇರ್ಪಡೆ
- 2007-14 ಅವಧಿಯಲ್ಲಿ ಕೃಷಿ ಬಜೆಟ್ 1.46 ಲಕ್ಷ ಕೋಟಿ ರೂ. 2014-22 ರ ಕೃಷಿ ಬಜೆಟ್ 6.1 ಲಕ್ಷ ಕೋಟಿ ರೂ.
- ಕನಿಷ್ಠ ಬೆಂಬಲ ಬೆಲೆಯಲ್ಲಿ ಧಾನ್ಯ ಖರೀದಿ 2009-14ರ ಅವಧಿಯಲ್ಲಿನ 1.51 ಲಕ್ಷ ಮೆಟ್ರಿಕ್ ಟನ್ನಿಂದ 2016-21ರ ಅವಧಿಯಲ್ಲಿ 112.63 ಮೆಟ್ರಿಕ್ ಟನ್‌ಗೆ ಏರಿಕೆ.
- ಗೋಧಿಗೆ ಕನಿಷ್ಠ ಬೆಂಬಲ ಬೆಲೆ ಪಾವತಿ 2007-14ರಲ್ಲಿನ 1.99 ಲಕ್ಷ ಕೋಟಿ ರೂ.ನಿಂದ 2014-21ರಲ್ಲಿ 3.65 ಲಕ್ಷ ಕೋಟಿ ರೂ.ಗೆ ಏರಿಕೆ
- ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆ ಪಾವತಿ 2007-14ರಲ್ಲಿ 2.58 ಲಕ್ಷ ಕೋಟಿ ರೂ.ನಿಂದ 2014-21ರಲ್ಲಿ 7.43 ಲಕ್ಷ ಕೋಟಿ ರೂ.ಗೆ ಏರಿಕೆ.
- 10 ಹೊಸ ಬುಡಕಟ್ಟು ಸ್ವತಂತ್ರ ಹೋರಾಟಗಾರರ ಸಂಗ್ರಹಾಲಯ ಅಭಿವೃದ್ಧಿ
- ಬೀಜದಿಂದ ಬಜಾರ್‌ವರೆಗೂ ರೈತರಿಗೆ ಮೋದಿ ಸರ್ಕಾರದ ನೆರವು
- ವೆಚ್ಚಕ್ಕಿಂತ 50% ಹೆಚ್ಚುವರಿ ಕನಿಷ್ಠ ಬೆಂಬಲ ಬೆಲೆ ಮೂಲಕ ರೈತರ ರಕ್ಷಣೆ
- 11 ಕೋಟಿ ರೈತರಿಗೆ ಪಿಎಂ ಕಿಸಾನ್ ಮೂಲಕ 6000 ರೂ. ಖಚಿತ ಆದಾಯ
- ಕೈಗೆಟಕುವ ದರದಲ್ಲಿ ಬೆಳೆ ವಿಮೆ
- ವಿಮೆ ಮಾಡಿದ ರೈತರಿಗೆ 1 ಲಕ್ಷ ಕೋಟಿ ರೂ. ಕ್ಲೈಮ್ ವಿತರಣೆ.
- ಮಳೆ ಅವಲಂಬಿತ ಕೃಷಿ ಕಡಿಮೆ ಮಾಡಿದ 77,595 ಕೋಟಿ ರೂ.ನೊಂದಿಗೆ 99 ನೀರಾವರಿ ಯೋಜನೆಗಳು.
- ಬೆಳೆ ನಷ್ಟ ಪರಿಹಾರ ಪ್ರಮಾಣ 50%ಕ್ಕೆ ಏರಿಕೆ.
- ವಾರ್ಷಿಕ ಹಾಲು ಉತ್ಪಾದನೆ 2013-14 ರಿಂದ 2019-20ರ ಅವಧಿಯಲ್ಲಿ 44% ಏರಿಕೆ.
- ಬರಡು ಭೂಮಿಯಲ್ಲಿ ಸೌರ ಪ್ಯಾನೆಲ್ ಅಳವಡಿಕೆ ಮೂಲಕ ಆದಾಯ ಗಳಿಕೆಗೆ ಉತ್ತೇಜನ.
- ಮೀನುಗಾರಿಕೆಗೆ ಪ್ರತ್ಯೇಕ ಇಲಾಖೆ.
- 8 ವರ್ಷದಲ್ಲಿ ಜೇನಿನ ರಫ್ತು ದುಪಟ್ಟು.
- ಎಥೆನಾಲ್ ದಾಸ್ತಾನು 2013-14ರ 38 ಕೋಟಿ ಲೀಟರ್‌ನಿಂದ 2020-21ರಲ್ಲಿ 350 ಕೋಟಿ ಲೀಟರ್‌ಗೆ ಏರಿಕೆ.

## ನವ ಭಾರತಕ್ಕಾಗಿ ನಾರಿ ಶಕ್ತಿ

- ಭಾರತದಲ್ಲಿ ಮೊದಲ ಬಾರಿಗೆ 1000 ಪುರುಷರಿಗೆ ಪ್ರತಿಯಾಗಿ 1020 ಮಹಿಳೆಯರು.(ಎನ್‌ಎಫ್‌ಎಚ್‌ಎಸ್-5)
- ವೇತನ ಸಹಿತ ಗರ್ಭಧಾರಣೆ ರಜೆ 12 ವಾರದಿಂದ 26 ವಾರಕ್ಕೆ ಏರಿಕೆ.
- ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದ ಅಡಿಯಲ್ಲಿ 3.11 ಕೋಟಿ ಉಚಿತ ಪ್ರಸವಪೂರ್ವ ತಪಾಸಣೆ.
- ಪ್ರಧಾನ ಮಂತ್ರಿ ಮಾತೃ ವಂದನ ಯೋಜನೆ ಅಡಿಯಲ್ಲಿ 2.78 ಮಹಿಳೆಯರು.
- ಜನ ಔಷಧಿ ಕೇಂದ್ರಗಳಲ್ಲಿ 1 ರೂ.ಗೆ 21 ಕೋಟಿಗೂ ಅಧಿಕ ಸ್ಯಾನಿಟರಿ ಪ್ಯಾಡ್ ವಿತರಣೆ.
- 2.73 ಕೋಟಿ ಸುಕನ್ಯಾ ಸಮೃದ್ಧಿ ಯೋಜನಾ ಖಾತೆಗಳು.
- 9 ಕೋಟಿ ಹೊಗೆಮುಕ್ತ ಅಡುಗೆಕೋಣೆಗಳು.
- ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಯೋಜನೆಯ 2 ಕೋಟಿ ಫಲಾನುಭವಿಗಳಲ್ಲಿ 60% ಮಹಿಳೆಯರು.

- 23 ಕೋಟಿಗೂ ಅಧಿಕ ಮಹಿಳಾ ಫಲಾನುಭವಿಗಳಿಗೆ ಮುದ್ರಾ ಸಾಲ.
- ಸೇನಾಯಲ್ಲಿನ ಮಹಿಳೆಯರಿಗೆ ಶಾಶ್ವತ ಆಯೋಗ.
- 2020-21ರಲ್ಲಿ ಲಿಂಗ ಅನುಪಾತದಲ್ಲಿ ಮಹಿಳೆಯರ ಜನನ ಪ್ರಮಾಣ 937ಕ್ಕೆ ಏರಿಕೆ.
- ಪ್ರಸವ ಸಮಯದದಲ್ಲಿನ ಮರಣ ಸಂಖ್ಯೆ 2020-2021ರಲ್ಲಿ 103ಕ್ಕೆ ಇಳಿಕೆ.
- ಭಾರತದ ಒಟ್ಟಾರೆ ಲಿಂಗ ಅನುಪಾತದಲ್ಲಿ 2019-21ರಲ್ಲಿ ಮೊದಲ ಸಲ 1000 ಪುರುಷರಿಗೆ ಪ್ರತಿಯಾಗಿ 1020 ಮಹಿಳೆಯರು. 2011ರಲ್ಲಿ 943.
- 2011-13ರಲ್ಲಿ ಪ್ರಸವ ಸಮಯದಲ್ಲಿ ಮರಣ ಪ್ರಮಾಣ 167. ಪ್ರಸವ ಸಮಯದಲ್ಲಿನ ಮರಣ ಸಂಖ್ಯೆ 2020-2021ರಲ್ಲಿ 103ಕ್ಕೆ ಇಳಿಕೆ.
- ಹೆಣ್ಣುಮಕ್ಕಳ ಮದುವೆ ವಯಸ್ಸು 18ರಿಂದ 21ಕ್ಕೆ ಏರಿಕೆ.
- ಮುಸ್ಲಿಂ ಹೆಣ್ಣುಮಕ್ಕಳ ರಕ್ಷಣೆಗೆ ತ್ರಿವಳಿ ತಲಾಖ್ ವಿರುದ್ಧ ಕಾನೂನು.
- ಸೂಕ್ತ ಪೌಷ್ಠಿಕಾಂಶಕ್ಕಾಗಿ 1.81 ಲಕ್ಷ ಕೋಟಿ ರೂ.
- ಬೇಟಿ ಬಚಾವೊ, ಬೇಟಿ ಪಡಾವೊ ಮೂಲಕ ಸ್ತ್ರೀಯರ ಪ್ರಮಾಣ ಏರಿಕೆ.
- ಶಾಲೆಯಲ್ಲಿ ಹುಡುಗಿಯರಿಗಾಗಿ 4.17 ಲಕ್ಷ ಪ್ರತ್ಯೇಕ ಶೌಚಾಲಯ.
- 45 ಲಕ್ಷ ಬಾಲಕಿಯರು / ಮಹಿಳೆಯರಿಗೆ ವಿದ್ಯಾರ್ಥಿ ವೇತನ.
- 2.73 ಕೋಟಿ ಸುಕನ್ಯಾ ಸಮೃದ್ಧಿ ಖಾತೆಯಲ್ಲಿ 80,000 ಕೋಟಿ ರೂ.
- ಮಹಿಳೆಯರಿಗೆ 23 ಕೋಟಿ ಮುದ್ರಾ ಸಾಲ.
- ಪ್ರಧಾನ ಮಂತ್ರಿ ಆವಾಸ್ ಯೋಜನಾ ಗ್ರಾಮೀಣ ಮನೆಗಳಲ್ಲಿ ಮಹಿಳೆಯರ ಪಾಲು 68%

## ಯುವ ಕೇಂದ್ರಿತ ಅಭಿವೃದ್ಧಿ

- ಸುಮಾರು 4 ದಶಕಗಳ ನಂತರ ರಾಷ್ಟ್ರೀಯ ಶಿಕ್ಷಣ ನೀತಿ.
- 2016ರಿಂದ ಗುರುತಿಸಿಕೊಂಡ ಸ್ಟಾರ್ಟಪ್‌ಗಳ ಪ್ರಮಾಣದಲ್ಲಿ 100 ಪಟ್ಟು ಏರಿಕೆ.
- ಟಾಪ್ಸ್ ಕಾರ್ಯಕ್ರಮಗಳ ಮೂಲಕ ಸುಮಾರು 150 ಕ್ರೀಡಾಳುಗಳಿಗೆ ಬೆಂಬಲ.
- (7 ಪದಕದೊಂದಿಗೆ) ಟೋಕಿಯೊ 2020 ಒಲಿಂಪಿಕ್ಸ್ ಮತ್ತು (19 ಪದಕದೊಂದಿಗೆ) ಪ್ಯಾರಾಒಲಿಂಪಿಕ್ಸ್ ಈವರೆಗಿನ ಅತ್ಯುತ್ತಮ ಒಲಿಂಪಿಕ್ಸ್.
- ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನೆ ಅಡಿಯಲ್ಲಿ 1.34 ಕೋಟಿ ಜನರಿಗೆ ತರಬೇತಿ.
- ಒಟ್ಟು ಸಂಖ್ಯೆ 20 ಆಗಿಸಲು 2022ರಲ್ಲಿ 7 ಹೊಸ ಐಐಎಂ ಸ್ಥಾಪನೆ.
- 2017-22ರ ಅವಧಿಯಲ್ಲಿ 3.52 ಕೋಟಿ ಇಪಿಎಫ್‌ಒ ಹೊಸ ಚಂದಾದಾರರು.
- 2017-21ರ ಅವಧಿಯಲ್ಲಿ ಟೆಕ್ ಸ್ಟಾರ್ಟಪ್ ಮೂಲಕ 23 ಲಕ್ಷ ನೇರ ಹಾಗೂ ಪರೋಕ್ಷ ಉದ್ಯೋಗ ಸೃಷ್ಟಿ.
- ಭಾರತದಲ್ಲಿನ ಎಐಐಎಂಎಸ್ ಸಂಖ್ಯೆ 3 ಪಟ್ಟು ಏರಿಕೆ, ಶೀಘ್ರದಲ್ಲಿ 22 ಎಐಐಎಂಎಸ್.
- 7 ಹೊಸ ಐಐಟಿ ಪ್ರಾರಂಭ. ಈಗ ಒಟ್ಟು 23 ಐಐಟಿ(2022ರಂತೆ)
- 1000 ಖೇಲೋ ಇಂಡಿಯಾ ಕೇಂದ್ರ ಪ್ರಾರಂಭ.
- 320 ಹೊಸ ವಿಶ್ವವಿದ್ಯಾಲಯ ಸ್ಥಾಪನೆ.
- 2021ರಲ್ಲಿ ಉದ್ಯೋಗ ನೇಮಕ ಪ್ರಕ್ರಿಯೆ 2020ಕ್ಕಿಂತ 34% ಏರಿಕೆ.
- 2021-22ರಲ್ಲಿ ಭಾರತದ ಸರಕು ರಫ್ತು 420 ಶತಕೋಟಿ ಡಾಲರ್.

## ಮಧ್ಯಮ ವರ್ಗ:ಬದುಕು ಸುಗಮ

- 7 ಲಕ್ಷ ರೂ.ವರೆಗಿನ ಆದಾಯ ತೆರಿಗೆ ಮುಕ್ತ.
- ಪರಿಣಾಮಕಾರಿ ತೆರಿಗೆ ದರ 2013 ರಲ್ಲಿನ 12.7% ರಿಂದ 2022 ರಲ್ಲಿ 8.3% ಕ್ಕೆ (ವಾರ್ಷಿಕ 15 ಲಕ್ಷ ರೂ.) ಇಳಿಕೆ.
- UMANG **ಆ್ಯಪ್** ಮೂಲಕ 20,500ಕ್ಕೂ ಅಧಿಕ ಸರ್ಕಾರಿ ಸೇವೆಗಳು ಲಭ್ಯ.
- ರಿಯಲ್ ಎಸ್ಟೇಟ್ ಯೋಜನೆಗಳಿಗೆ ಸ್ವಾಮಿಹ್ ನಿಧಿ ಅಡಿಯಲ್ಲಿ 25,000 ಕೋಟಿ ರೂ.
- ರೇರಾ ಅಡಿಯಲ್ಲಿ 30 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ 86,942 ಪ್ರಕರಣಗಳ ವಿಲೇವಾರಿ.
- ಗೃಹ ಸಾಲದ ಹೊರೆಯನ್ನು 48,000 ಕೋಟಿ ರೂ.ನಷ್ಟು ತಗ್ಗಿಸಿದ CLSS.
- ನಗರ ಪ್ರದೇಶದ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 1.23 ಕೋಟಿ ಮನೆಗಳು ಮಂಜೂರು.
- 2014ರಲ್ಲಿನ 5 ನಗರಗಳಿಂದ 2022ರಲ್ಲಿ 27 ನಗರಗಳಿಗೆ ಮೆಟ್ರೊ ವಿಸ್ತರಣೆ.
- ಉಡಾನ್ ಅಡಿಯಲ್ಲಿ 86 ಲಕ್ಷಕ್ಕೂ ಅಧಿಕ ಜನರಿಗೆ ಕೈಗೆಟಕುವ ದರದಲ್ಲಿ ವಿಮಾನಯಾನ.
- 10 ಕೋಟಿಗೂ ಅಧಿಕ ಡಿಜಿಲಾಕ್ ಬಳಕೆದಾರರು.
- ಇಂಟರ್ನೆಟ್ ಡಾಟಾ ದರ 97% ಇಳಿಕೆ
- 4371 ನಗರಗಳಿಗೆ ಒಡಿಎಫ್ ಸ್ಥಾನಮಾನ.
- ಜಲಜೀವನ್ ಮಿಷನ್ ಅಡಿಯಲ್ಲಿ 6.29 ಕೋಟಿ ನನೀರಿನ ಕೊಳಾಯಿ ಸಂಪರ್ಕ.
- ಸೌಭಾಗ್ಯ ಯೋಜನೆ ಅಡಿಯಲ್ಲಿ 2.8 ಕೋಟಿ ವಿದ್ಯುತ್ ಸಂಪರ್ಕ.
- ಭಾರತ್ ನೆಟ್ ಯೋಜನೆ ಅಡಿಯಲ್ಲಿ 1.77 ಲಕ್ಷ ಹಳ್ಳಿಗಳಿಗೆ ಆಪ್ಟಿಕ್ ಫೈಬರ್.
- ಆಯುಷ್ಮಾನ್ ಭಾರತ್ ಅಡಿಯಲ್ಲಿ 17.9 ಕೋಟಿ ಆರೋಗ್ಯ ವಿಮೆ ಕಾರ್ಡ್.

- ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ ಅಡಿಯಲ್ಲಿ 45.21 ಕೋಟಿ ಬ್ಯಾಂಕ್ ಖಾತೆಗಳು.
- ಇಂಟರ್ನೆಟ್ ಸಂಪರ್ಕ 231% ಏರಿಕೆ.
- 2014ರಿಂದ ಈಚೆಗೆ 5,700 ಹೊಸ ಕಾಲೇಜುಗಳು.
- ವಂದೇ ಭಾರತ್ ಯೋಜನೆ ಅಡಿಯಲ್ಲಿ 2.17 ಲಕ್ಷ ವಿಮಾನಗಳ ಹಾರಾಟ.
- ವಿಮಾನ ನಿಲ್ದಾಣಗಳ ಸಂಖ್ಯೆ 2014ರಲ್ಲಿ 74 ರಿಂದ 2022ರಲ್ಲಿ 140ಕ್ಕೆ ಏರಿಕೆ.
- ಉನ್ನತ ಶಿಕ್ಷಣ ಸಾಲ ಬಡ್ಡಿ ದರ ಇಳಿಕೆ.

## ಮೂಲಸೌಕರ್ಯಕ್ಕೆ ವೇಗ

- 2014ರಿಂದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮುಂಗಡ ನೀಡಿಕೆ 500% ಏರಿಕೆ.
- 400 ವಿಶ್ವದರ್ಜೆಯ ವಂದೇ ಭಾರತ್ ರೈಲು ನಿರ್ಮಾಣ
- 37 ಕಿ.ಮೀ/ದಿನ ತಲುಪಿರುವ ಹೆದ್ದಾರಿ ನಿರ್ಮಾಣ ವೇಗ.
- 99% ಕವರೇಜ್‌ನೊಂದಿಗೆ ಗ್ರಾಮೀಣ ರಸ್ತೆ ಸಂಪರ್ಕ.
- ರೈಲು ಸಾವುನೋವುಗಳಿಲ್ಲದೆ ನೇರ 34 ತಿಂಗಳು
- ಮೆಟ್ರೊ ಉದ್ದ 2014ರಲ್ಲಿನ 248 ಕಿ.ಮೀ ಇಂದ 2022ರಲ್ಲಿ 791 ಕಿ.ಮೀ.
- ಪ್ರಧಾನ ಮಂತ್ರಿ ಗತಿಶಕ್ತಿ ಯೋಜನೆ ಅಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ 100 ಲಕ್ಷ ಕೋಟಿ ರೂ.
- ಪ್ರಗತಿ ಸಭೆಗಳ ಮೂಲಕ ಪ್ರಧಾನಿ ಮೋದಿಯಿಂದ 300ಕ್ಕೂ ಅಧಿಕ ಯೋಜನೆಗಳ ಪರಿಶೀಲನೆ.
- 2016ರಿಂದ 66 ವಿಮಾನ ನಿಲ್ದಾಣಗಳ ಕಾರ್ಯಾಚರಣೆ.
- ಅಮೃತ್ ಅಡಿಯಲ್ಲಿ 4268 ನಗರ ಅಭಿವೃದ್ಧಿ ಯೋಜನೆಗಳು ಪೂರ್ಣ.
- 2014ರಿಂದ 3.26 ಲಕ್ಷ ಕಿ.ಮೀ ಗ್ರಾಮೀಣ ರಸ್ತೆಗಳ ನಿರ್ಮಾಣ.
- ರಾಷ್ಟ್ರೀಯ ನೀರಿನ ಮಾರ್ಗ ಕಾಯ್ದೆ 2016ರ ಅಡಿಯಲ್ಲಿ 111 ನೀರಿನ ಮಾರ್ಗಗಳನ್ನು ರಾಷ್ಟ್ರೀಯ ನೀರಿನ ಮಾರ್ಗಗಳೆಂದು ಘೋಷಣೆ.
- 2022-23ರಲ್ಲಿ ರಸ್ತೆ ಮತ್ತು ಹೆದ್ದಾರಿಗೆ 1.99 ಲಕ್ಷ ಕೋಟಿ ರೂ.
- 2014-15ರಲ್ಲಿ 33,305 ಕೋಟಿ ರೂ.
- ಹೆದ್ದಾರಿ ನಿರ್ಮಾಣದ ವೇಗ 2013ರಲ್ಲಿ ದಿನಕ್ಕೆ 12 ಕಿ.ಮೀ, 2021ರಲ್ಲಿ ದಿನಕ್ಕೆ 37 ಕಿ.ಮೀ. 200% ಏರಿಕೆ.
- ಗ್ರಾಮೀಣ ರಸ್ತೆ ಸಂಪರ್ಕ 2014ರಲ್ಲಿ 55%, 2022ರಲ್ಲಿ 99%
- ಉತ್ತರ ಪ್ರದೇಶದಲ್ಲಿ 4 ದಶಕಗಳಿಂದ ನೆನಗುದಿಗೆ ಬಿದ್ದಿದ್ದ ಸರಯೂ ನರಹ್ ನೀರಾವರಿ ಕಾಲುವೆ ಪೂರ್ಣ.
- ಬಿಹಾರದಲ್ಲಿ ಕೋಸಿ ರೈಲ್ ಮಹಾ ಸೇತು ಪ್ರಾರಂಭ.
- ಕೇರಳದಲ್ಲಿ ಕೊಲಂ ಬೈಪಾಸ್ ಯೋಜನೆ.
- ಬ್ರಹ್ಮಾಪುತ್ರ ನದಿಗೆ ಬೋಗಿಬಿಲ್ ರೈಲು-ರಸ್ತೆ ಸೇತುವೆ.
- 10,000 ಅಡಿಯ ಅಟಲ್ ಸುರಂಗಮಾರ್ಗ ಪೂರ್ಣ.

## ಆರೋಗ್ಯ - ಕೋವಿಡ್ ನಿರ್ವಹಣೆ

- 3.28 ಕೋಟಿ ಮಂದಿ ಆಯುಷ್ಮಾನ್ ಭಾರತ್ ಅಡಿಯಲ್ಲಿ ಆಸ್ಪತ್ರೆಗೆ ದಾಖಲು.
- 1.18 ಲಕ್ಷಕ್ಕೂ ಅಧಿಕ ಆಯುಷ್ಮಾನ್ ಭಾರತ್ ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಗಳು.
- 8,700ಕ್ಕೂ ಅಧಿಕ ಜನ್ ಔಷಧಿ ಕೇಂದ್ರಗಳು.
- ಇಂದ್ರಧನುಷ್ ಯೋಜನೆ ಅಡಿಯಲ್ಲಿ 5 ಕೋಟಿಗೂ ಹೆಚ್ಚು ತಾಯಿ ಮತ್ತು ಮಕ್ಕಳ ರಕ್ಷಣೆ.
- 15 ಎಐಐಎಂಎಸ್ ಮತ್ತು 200ಕ್ಕೂ ಅಧಿಕ ವೈದ್ಯಕೀಯ ಕಾಲೇಜುಗಳ ಪ್ರಾರಂಭ.
- ಅಮೃತ್ ಫಾರ್ಮಸಿಯಿಂದ ಕೈಗೆಟಕುವ ದರದಲ್ಲಿ ಔಷಧ ಖರೀದಿಸಿರುವ 2.7 ಕೋಟಿ ನಾಗರೀಕರು.
- 190 ಕೋಟಿಗೂ ಅಧಿಕ ಕೋವಿಡ್ ಲಸಿಕೆ ಡೋಸ್‌ಗಳ ದಾಖಲು.
- 22 ಕೋಟಿಗೂ ಅಧಿಕ ಡಿಜಿಟಲ್ ಆರೋಗ್ಯ ಐಡಿ ಸೃಷ್ಟಿ.
- ಪ್ರಧಾನ ಮಂತ್ರಿ ಕೇರ್ಸ್ ಮೂಲಕ 50,000 ಮೇಡ್ ಇನ್ ಇಂಡಿಯಾ ವೆಂಟಿಲೇಟರ್ ಪೂರೈಕೆ.
- ಯಾವುದೇ ಪಿಪಿಇ ಕಿಟ್ ಉತ್ಪಾದನೆಯಿಲ್ಲದ ಹಂತದಿಂದ ದಿನಕ್ಕೆ 5 ಲಕ್ಷ ಕಿಟ್ಗಳ ಉತ್ಪಾದನೆ.
- ಕೇಂದ್ರ ಸರ್ಕಾರದಿಂದ 1500ಕ್ಕೂ ಅಧಿಕ ಪಿಎಸ್‌ಎ ಘಟಕ ಮಂಜೂರು.
- ಹೆಚ್‌ಡಬ್ಲ್ಯುಸಿಎಸ್ ಮೂಲಕ 2.34 ಕೋಟಿ ದೂರವಾಣಿ ಸಂವಹನ.
- ಕೋವಿಡ್ ವಿರುದ್ಧದ ಐತಿಹಾಸಿಕ ಹೋರಾಟದಲ್ಲಿ ಮಾರ್ಚ್ 2020ಕ್ಕೆ 14 ಪ್ರಯೋಗಾಲಯಗಳಿಂದ ಈಗ 4000 ಪರೀಕ್ಷಾ ಪ್ರಯೋಗಾಲಯಗಳು.
- ಮಾರ್ಚ್ 2020 ರಲ್ಲಿನ 2168 ಹಾಸಿಗೆಗಳಿಂದ ಈಗ 1.39 ಲಕ್ಷ ಐಸಿಯು ಹಾಸಿಗೆಗಳು.
- ಮಾರ್ಚ್ 2020 ರಲ್ಲಿನ 50,583 ಆಕ್ಸಿಜನ್ ಹಾಸಿಗೆಗಳಿಂದ ಈಗ 5 ಲಕ್ಷ ಹಾಸಿಗೆ.
- ಸುಮಾರು 200 ಆಕ್ಸಿಜನ್ ಎಕ್ಸ್‌ಪ್ರೆಸ್ ರೈಲಿನಿಂದ 36,840 ಟನ್ ಆಕ್ಸಿಜನ್ ಪೂರೈಕೆ.
- ವಾಯು ಸೇನೆಯಿಂದ ಕ್ರಯೋಜನಿಕ್ ಟ್ಯಾಂಕರ್ ಸಾಗಣೆ.
- 4176 ಕೋಚ್‌ಗಳು ಕ್ವಾರಂಟೈನ್/ಐಸೋಲೇಷನ್ ಘಟಕಗಳಾಗಿ ಪರಿವರ್ತನೆ.

## ರಾಷ್ಟ್ರೀಯ ಭದ್ರತೆ - ವಿದೇಶಿ ನೀತಿ

- 2016**ರಿಂದ ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಈಶಾನ್ಯ ರಾಜ್ಯಗಳಲ್ಲಿನ ಭಯೋತ್ಪಾನೆಯಿಂದ ಸಾವಿನ ಸಂಖ್ಯೆ ಶೂನ್ಯ.**
- **ವಿಧೇಯಕ** 370 **ಮತ್ತು** 35 **ಎ ಅನ್ನು ಭಾರತೀಯ**

ಸಂವಿಧಾನದಿಂದ ತೆಗೆದು ಹಾಕುವ ಐತಿಹಾಸಿಕ ನಿರ್ಧಾರ.

- ಬಜೆಟ್ ಬಂಡವಾಳದ 68% ದೇಶೀಯ ಉತ್ಪಾದನೆಗಾಗಿ ಮೀಸಲು.
- ರಕ್ಷಣಾ ರಫ್ತಿನಲ್ಲಿ 6 ಪಟ್ಟು ಏರಿಕೆ.
- ವಂದೇ ಭಾರತ್ ವಿಮಾನದ ಮೂಲಕ 1.83 ಕೋಟಿಗೂ ಅಧಿಕ ಪ್ರಯಾಣಿಕರ ಪ್ರಯಾಣ.
- ರಕ್ಷಣಾ ಸ್ವದೇಶೀಕರಣ ಪಟ್ಟಿಗೆ 300ಕ್ಕೂ ಅಧಿಕ ಉತ್ಪನ್ನ ಸೇರ್ಪಡೆ.
- ಉಕ್ರೇನ್ನಿಂದ 22,500 ಭಾರತೀಯರ ಸ್ಥಳಾಂತರ.
- ರಕ್ಷಣಾ ಕ್ಷೇತ್ರದಲ್ಲಿ 74% ವಿದೇಶಿ ಬಂಡವಾಳ ಹೂಡಿಕೆ.
- ಡಿಫೆನ್ಸ್ ಸ್ಟಾರ್ಟ್ ಅಪ್‌ಗಳ ಪ್ರಾರಂಭಕ್ಕೆ 500 ಕೋಟಿ ರೂ.
- ಆರ್ಡಿನೆನ್ಸ್ ಕಾರ್ಖಾನೆ ಮಂಡಳಿ 7 ಪಿಎಸ್ಯು ಆಗಿ ಪರಿವರ್ತನೆ.
- ವ್ಯಾಕ್ಸಿನ್ ಮೈತ್ರಿ ಅಡಿಯಲ್ಲಿ 100ಕ್ಕೂ ಅಧಿಕ ದೇಶಗಳಿಗೆ 20 ಕೋಟಿಗೂ ಅಧಿಕ ಕೋವಿಡ್-19 ಲಸಿಕೆ.
- ರಕ್ಷಣಾ ರಫ್ತು 2014ರಲ್ಲಿನ 1,941 ಕೋಟಿ ರೂ.ನಿಂದ 2021ರಲ್ಲಿ 11,067 ಕೋಟಿ ರೂ.ಗೆ ಏರಿಕೆ.
- ಎನ್‌ಐಎನಿಂದ ಭಯೋತ್ಪಾದನೆ ಹಣಕಾಸು ನೆರವು ಪ್ರಕರಣ ಪತ್ತೆ 94%.
- ಪ್ರಧಾನಿ ಮೋದಿ ಆಡಳಿತಕ್ಕೆ ಹಲವು ಜಾಗತಿಕ ಮತ್ತು ನಾಗರೀಕ ಪ್ರಶಸ್ತಿಗಳು.
- ಹಲವು ರಾಷ್ಟ್ರಗಳೊಂದಿಗೆ ಆರ್ಥಿಕ ಒಪ್ಪಂದ.
- ಯುದ್ಧ ಸಮಯದಲ್ಲಿ ಉಕ್ರೇನ್, ಸಿರಿಯಾ, ಯೆಮೆನ್, ಲಿಬಿಯಾದಲ್ಲಿ ಭಾರತೀಯರ ರಕ್ಷಣೆ.
- ನೇಪಾಳ, ಸೂಡಾನ್, ಚೀನಾ, ಅಫಘಾನಿಸ್ತಾನಕ್ಕೆ ಸಂಕಷ್ಟದಲ್ಲಿ ಭಾರತದ ನೆರವು.

## ಆರ್ಥಿಕತೆ ಪುನಶ್ಚೇತನ

- 2022ರಲ್ಲಿ ಭಾರತವು ವಿಶ್ವದ ಅತ್ಯಂತ ವೇಗಯುತ ಬೆಳವಣಿಗೆ ಹೊಂದುತ್ತಿರುವ ಪ್ರಮುಖ ಆರ್ಥಿಕತೆಯ ದೇಶ.
- 2021ರಲ್ಲಿ ಭಾರತದಲ್ಲಿ 40% ಜಾಗತಿಕ ರಿಯಲ್ ಟೈಂ ಡಿಜಿಟಲ್ ಪಾವತಿ.
- ಕೋವಿಡ್ ವೇಳೆ 20 ಲಕ್ಷ ಕೋಟಿ ರೂ. ಆತ್ಮನಿರ್ಭರ್ ಭಾರತ್ ಪ್ಯಾಕೇಜ್.
- ಪಿಎಂಐ ಸೇವೆ 2021ರ ಅಕ್ಟೋಬರ್ನಲ್ಲಿ 10 ವರ್ಷದಲ್ಲೇ ಗರಿಷ್ಠ 58.4 ತಲುಪಿತ್ತು.
- ಏಪ್ರಿಲ್ 2022ರಲ್ಲಿ ಮಾಸಿಕ ಜಿಎಸ್‌ಟಿ ಸಂಗ್ರಹ ಸಾರ್ವಕಾಲಿಕ ದಾಖಲೆಯ 1.68 ಲಕ್ಷ ಕೋಟಿ ರೂ.
- 2022ನೇ ಆರ್ಥಿಕ ವರ್ಷದಲ್ಲಿ ದಾಖಲೆಯ 670 ಶತಕೋಟಿ ಡಾಲರ್ ಸರಕು ಮತ್ತು ಸೇವೆ ರಫ್ತು.
- ಇಸಿಎಲ್ಜಿಎಸ್ ಅಡಿಯಲ್ಲಿ ಎಂಎಸ್‌ಎಂಇಗಳಿಗೆ 3.19 ಲಕ್ಷ ಕೋಟಿ ರೂ.ಗೂ ಅಧಿಕ ಮಂಜೂರು.
- ಮುಂದಿನ 5 ವರ್ಷಗಳಲ್ಲಿ 60 ಲಕ್ಷ ಹೆಚ್ಚುವರಿ ಉದ್ಯೋಗ ನಿರ್ಮಾಣಕ್ಕೆ ಪಿಎಲ್‌ಐ ಯೋಜನೆ.
- ಮೊಬೈಲ್ ಆಮದಿನಿಂದ 2021-22ರಲ್ಲಿ 5.5 ಶತಕೋಟಿ ಡಾಲರ್ ಮೊಬೈಲ್ ರಫ್ತು.
- ವಸೂಲಿಯಾಗದ 5.49 ಲಕ್ಷ ಕೋಟಿ ರೂ. ವಸೂಲಿ.
- 2021-22ರಲ್ಲಿ ವಾರ್ಷಿಕ ಎಫ್‌ಡಿಐ ಒಳಹರಿವು ಸಾರ್ವಕಾಲಿಕ ದಾಖಲೆಯ 83.57 ಶತಕೋಟಿ ಡಾಲರ್.
- ಭಾರತ ಈಗ 100 ಯೂನಿಕಾರ್ನ್‌ಗಳ ತವರು.
- 7 ವರ್ಷದಲ್ಲಿ 440.27 ಶತಕೋಟಿ ಡಾಲರ್ ವಿದೇಶಿ ಹೂಡಿಕೆ.
- ನಿರುದ್ಯೋಗ ಪ್ರಮಾಣ 6.5%ಕ್ಕೆ ಇಳಿಕೆ.

## ಸುಲಭವಾದ ವಹಿವಾಟು

- ಸುಲಭ ವಹಿವಾಟು ಪಟ್ಟಿಯಲ್ಲಿ 2014ರಲ್ಲಿನ 142ನೇ ಸ್ಥಾನದಿಂದ 2019ರಲ್ಲಿ 63ನೇ ಸ್ಥಾನಕ್ಕೆ ಜಿಗಿತ.
- 2021-22ರಲ್ಲಿ 1.67 ಲಕ್ಷ ಹೊಸ ಕಂಪನಿಗಳ ನೋಂದಣಿ.
- ಕಾರ್ಮಿಕ ಹಿತರಕ್ಷಣೆಗಾಗಿ 4 ಹೊಸ ಕಾರ್ಮಿಕ ನಿಯಮ.
- ಹಿಂದಿನ ತೆರಿಗೆಯನ್ನು ತೆಗೆದು ಹಾಕಲಾಗಿದೆ.
- ಏಂಜಲ್ ತೆರಿಗೆ ತೆಗೆದು ಹಾಕಲಾಗಿದೆ.
- ಹೊಸ ಉತ್ಪಾದನೆ ಕಂಪನಿಗಳಿಗೆ ಕಾರ್ಪೋರೇಟ್ ತೆರಿಗೆ 25% ರಿಂದ 15%ಕ್ಕೆ ಇಳಿಕೆ.
- ಕಂಪನಿ ಕಾಯ್ದೆಯ 81 ಅಪರಾಧ ಕಾನೂನುಗಳಲ್ಲಿ 16 ಅನ್ನು ತೆಗೆದು ಹಾಕಲಾಗಿದೆ.
- 25000 ಅನಗತ್ಯ ಅನುಸರಣೆಗಳನ್ನು ತೆಗೆದು ಹಾಕಲಾಗಿದೆ.
- 1400ಕ್ಕೂ ಅಧಿಕ ಹಳೆಯ ಕಾನೂನುಗಳನ್ನು ರದ್ದುಗೊಳಿಸಲಾಗಿದೆ.
- ಹೊಸ ವಹಿವಾಟು ಆರಂಭಿಸಲು ಬೇಕಾಗಿದ್ದ ಅನುಮತಿಗಳನ್ನು 14 ರಿಂದ 3ಕ್ಕೆ ಇಳಿಸಲಾಗಿದೆ.
- ಪೇಟೆಂಟ್ ಮಂಜೂರು 4 ಪಟ್ಟು ಹೆಚ್ಚಾಗಿದೆ.
- ರಾಷ್ಟ್ರೀಯ ಏಕ ಗವಾಕ್ಷಿ ವ್ಯವಸ್ಥೆಯಿಂದ ಸುಲಭ ಅನುಸರಣೆ.
- ಕೇಂದ್ರದಿಂದ 14,000ಕ್ಕೂ ಅಧಿಕ ಹೊಸ ಸ್ಟಾರ್ಟಪ್‌ಗಳ ಗುರುತಿಸುವಿಕೆ.

## ಈಶಾನ್ಯ ಭಾರತದ ಬೆಳವಣಿಗೆ

- ಈ ಪ್ರದೇಶದ ಎಎಫ್‌ಎಸ್‌ಪಿಎ ಭಾಗದಲ್ಲಿ ಇಳಿಕೆ.
- 16 ವರ್ಷಗಳ ವಿಳಂಬದ ಬಳಿಕ ಬೋಗಿಬೀಲ್ ಸೇತುವೆ ಪೂರ್ಣ.
- ಈ ಭಾಗದಲ್ಲಿ ಬಂಡಾಯ 80% ಕಡಿಮೆಯಾಗಿದೆ.
- ಬೋಡೊ ಒಪ್ಪಂದ, ನಾಗಾ ಒಪ್ಪಂದ, ಬ್ರೂ-ರಿಯಾಂಗ್ ಒಪ್ಪಂದದಿಂದ ಈಶಾನ್ಯ ಭಾಗದಲ್ಲಿ ಶಾಂತಿ ಸ್ಥಾಪನೆ.
- ಕಳೆದ 8 ವರ್ಷಗಳಲ್ಲಿ 6 ವಿಮಾನ ನಿಲ್ದಾಣ ನಿರ್ಮಾಣ.
- ಬ್ರಾಡ್‌ಗೇಜ್‌ನೊಂದಿಗೆ ಎಲ್ಲ ರಾಜ್ಯಗಳ ರಾಜಧಾನಿ ಸಂಪರ್ಕ.

- 1.55 ಲಕ್ಷ ಹೆಕ್ಟೇರ್ ಭೂಮಿ ಸಾವಯವ ಕೃಷಿಗೆ ಬಳಕೆ.
- 4,016 ಕಿ.ಮೀ ರಸ್ತೆ ಕಾಮಗಾರಿ ಪ್ರಗತಿಯಲ್ಲಿ.
- ಈ ಭಾಗಕ್ಕೆ 22,000 ಕೋಟಿ ರೂ. ಮೌಲ್ಯದ 2,000 ಯೋಜನೆಗಳ ಮಂಜೂರು.
- ಬಿದಿರು ಮತ್ತು ಸಂಬಂಧಿ ಉದ್ಯಮ ಬಲವರ್ಧನೆಗೆ ರಾಷ್ಟ್ರೀಯ ಬಿದಿರು ಆಯೋಗ ಸ್ಥಾಪನೆ.
- ಅಸ್ಸಾಂನಲ್ಲಿ 21 ವೈದ್ಯಕೀಯ ಕಾಲೇಜುಗಳ ನಿರ್ಮಾಣ.
- ವನ್ ಧನ್ ಯೋಜನೆ ಅಡಿಯಲ್ಲಿ 3.3 ಲಕ್ಷ ಫಲಾನುಭವಿಗಳು.

## ಸಾಂಸ್ಕೃತಿಕ ಪರಂಪರೆ ರಕ್ಷಣೆ

- **ವಿಶ್ವದರ್ಜೆಯ ಕಾಶಿ ವಿಶ್ವನಾಥ ಕಾರಿಡಾರ್**
- 2020**ರಲ್ಲಿ ರಾಮಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ.**
- ಸ್ವದೇಶ್ ದರ್ಶನ್ ಅಡಿಯಲ್ಲಿ 15 ಪ್ರವಾಸಿ ಸರ್ಕ್ಯೂಟ್ ರಚನೆ.
- 2014ರಿಂದ ಕಳ್ಳತನವಾಗಿದ್ದ 228 ಕಲಾಕೃತಿಗಳ ಮರುವಶ. ಈ ಸಂಖ್ಯೆ 2014ರವರೆಗೆ ಕೇವಲ 13 ಇತ್ತು.
- 130 ಕೋಟಿ ರೂ. ವೆಚ್ಚದಲ್ಲಿ ಕೇದಾರನಾಥ್ ಮರು ಅಭಿವೃದ್ಧಿ ಯೋಜನೆ.
- ಚಾರ್ಧಾಮ್ ಹೆದ್ದಾರಿ ಸಂಪರ್ಕ ಯೋಜನೆ ಅಡಿಯಲ್ಲಿ 889 ಕಿ.ಮೀ ಹೆದ್ದಾರಿ ಅಭಿವೃದ್ಧಿ.
- 3.5 ಕೋಟಿ ರೂ.ವೆಚ್ಚದಲ್ಲಿ ಸೋಮನಾಥ್ ದೇವಾಲಯ ಮರು ನಿರ್ಮಾಣ.
- ರಾಷ್ಟ್ರೀಯ ಯುದ್ಧ ಸ್ಮಾರಕ ಮತ್ತು ಪೊಲೀಸ್ ಸ್ಮಾರಕ.
- ಹೃದಯ್ ಯೋಜನೆ ಅಡಿಯಲ್ಲಿ 12 ಪಾರಂಪರಿಕ ನಗರ ನಿರ್ಮಾಣ.
- 10 ಹೊಸ ಬುಡಕಟ್ಟು ಸ್ವತಂತ್ರ ಹೋರಾಟಗಾರರ ಸಂಗ್ರಹಾಲಯ ನಿರ್ಮಾಣ.
- ಪ್ರಸಾದ್ ಯೋಜನೆ ಅಡಿಯಲ್ಲಿ ಸಾಂಸ್ಕೃತಿಕ ನಗರ ಅಭಿವೃದ್ಧಿಗೆ 1200 ಕೋಟಿ ರೂ.
- ಸಿಖ್ ಯಾತ್ರಾರ್ಥಿಗಳಿಗಾಗಿ ಕರ್ತಾರ್‌ಪುರ್ ಸಾಹೀಬ್ ಕಾರಿಡಾರ್ ಆರಂಭ.

## ತಂತ್ರಜ್ಞಾನ ಆಧಾರಿತ ಭಾರತ

- 2021ರ ಅಂತ್ಯಕ್ಕೆ ಭಾರತದಲ್ಲಿ 120 ಕೋಟಿ ಮೊಬೈಲ್ ಚಂದಾದಾರರು, ಅದರಲ್ಲಿ 75 ಕೋಟಿ ಸ್ಮಾರ್ಟ್ ಫೋನ್ ಬಳಕೆದಾರರು
- 1.77 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಆಪ್ಟಿಕ್ ಫೈಬರ್ ಸಂಪರ್ಕ
- ಡಾಟಾ ತಲಾ ಜಿಬಿ ದರ 308 ರೂ.ನಿಂದ 10 ರೂ.ಗೆ ಇಳಿಕೆ
- ಡಿಬಿಟಿ ಮೂಲಕ 2.2 ಲಕ್ಷ ಕೋಟಿ ರೂ. ಉಳಿತಾಯ
- ಜಿಇಎಂ ಪೋರ್ಟಲ್‌ನಲ್ಲಿ ದಾಖಲೆಯ 1 ಲಕ್ಷ ಕೋಟಿ ರೂ. ಖರೀದಿ
- ದೇಶದ 555 ಜಿಲ್ಲೆಗಳಲ್ಲಿ ಹೊಸ ಸ್ಟಾರ್ಟ್‌ಅಪ್‌ಗಳು
- ಏಪ್ರಿಲ್ 2022ರಲ್ಲಿ 558 ಕೋಟಿ ಯುಪಿಐ ವಹಿವಾಟು
- 2021ರಲ್ಲಿ ವಿಶ್ವದ 40% ಡಿಜಿಟಲ್ ವಹಿವಾಟು ಭಾರತದ್ದು
- ಕಳೆದ 5 ವರ್ಷಗಳಲ್ಲಿ ಭಾರತದ ಇಂಟರ್ನೆಟ್ ಬಳಕೆದಾರರ ಸಂಖ್ಯೆ ದುಪ್ಪಟ್ಟಿಗಿಂತ ಹೆಚ್ಚು.
- ಡಿಜಿಟಲ್ ಇಂಡಿಯಾ ಅಡಿಯಲ್ಲಿ 4.63 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳು(ಸಿಎಸ್ಸಿಎಸ್).
- ಭಾರತ್ ನೆಟ್ ಅಡಿಯಲ್ಲಿ 5.67 ಲಕ್ಷ ಕಿ.ಮೀ ಆಪ್ಟಿಕಲ್ ಫೈಬರ್
- ಇಸ್ರೊದಿಂದ ವಿಶ್ವದಾಖಲೆಯ 104 ಉಪಗ್ರಹಗಳ ಯಶಸ್ವಿ ಉಡಾವಣೆ.
- ಪ್ರಧಾನ ಮಂತ್ರಿ ಡಿಜಿಟಲ್ ಸಾಕ್ಷರತಾ ಅಭಿಯಾನದಲ್ಲಿ 4.04 ಲಕ್ಷ ತರಬೇತಿ ಕೇಂದ್ರ, 5.04 ಕೋಟಿ ಮಂದಿಗೆ ತರಬೇತಿ.
- 1.77 ಲಕ್ಷ ಜಿಪಿಎಸ್ ಸೇವೆ ಸಿದ್ಧ.
- 558 ಕೋಟಿ ಯುಪಿಐ ಪಾವತಿ

## ಪರಿಸರ ಮತ್ತು ಸ್ಥಿರತೆ

- 2018ರ ಗಣತಿ ಪ್ರಕಾರ ಭಾರತದಲ್ಲಿನ ಹುಲಿಗಳ ಸಂಖ್ಯೆ ದುಪ್ಪಟ್ಟು.
- ನಮಾಮಿ ಗಂಗಾ ಯೋಜನೆ ಅಡಿಯಲ್ಲಿ 30,853 ಕೋಟಿ ರೂ. ಮೌಲ್ಯದ ಯೋಜನೆಗಳು.
- 2070ರ ವೇಳೆಗೆ ಶೂನ್ಯ ಭಾರತ ಹೊಗೆ ಮುಕ್ತವಾಗುವ ಗುರಿ.
- COP 21 ಗುರಿ 9 ವರ್ಷ ಮೊದಲೇ ಸಾಧನೆ.
- 2014 ರಿಂದ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ದುಪ್ಪಟ್ಟಿಗಿಂತ ಅಧಿಕ.
- 2014ರಿಂದ ಸೌರ ಶಕ್ತಿ ಅಳವಡಿಕೆ ಸಾಮರ್ಥ್ಯ 1900% ಹೆಚ್ಚಳ.
- 2014ರಿಂದ ಸೌರ ಶಕ್ತಿ ದರದಲ್ಲಿ 70% ಇಳಿಕೆ.
- ಪಿಎಂ ಕುಸುಮ ಅಡಿಯಲ್ಲಿ 20 ಲಕ್ಷ ಸೋಲಾರ್ ಪಂಪ್ ಅಳವಡಿಕೆ.
- ಉಜಾಲಾ ಯೋಜನೆಯಡಿ 36 ಕೋಟಿ ಎಲ್‌ಇಡಿ ಬಲ್ಬ್ ವಿತರಣೆ.
- ಭಾರತದ 10ಕ್ಕೂ ಅಧಿಕ ಸಮುದ್ರ ತೀರಗಳಿಗೀಗ ಬ್ಲೂ ಫ್ಲ್ಯಾಗ್ ಪ್ರಮಾಣ ಪತ್ರ.
- ಜಮ್ಮು ಮತ್ತು ಕಾಶ್ಮೀರದಲ್ಲಿ ದೇಶದ ಮೊದಲ ಕಾರ್ಬನ್ ನ್ಯೂಟ್ರಲ್ ಪಂಚಾಯತ್.
- ರಾಜಸ್ಥಾನದ ಭದ್ಲಾದಲ್ಲಿ ವಿಶ್ವದ ಬೃಹತ್ ಸೌರಪಾರ್ಕ್.

# ಮೋದಿ ಆಡಳಿತದ ಪ್ರಮುಖ ಯೋಜನೆಗಳು

## PMAY-ಪ್ರಧಾನ ಮಂತ್ರಿ ಆವಾಸ್ ಯೋಜನೆ

ಪ್ರಧಾನ್ ಮಂತ್ರಿ ಆವಾಸ್ ಯೋಜನೆಯನ್ನು ಸಮಾಜದ ದುರ್ಬಲ ವರ್ಗಗಳಿಗೆ ವಸತಿ ಒದಗಿಸುವ ಗುರಿಯೊಂದಿಗೆ ಮೋದಿ ಸರ್ಕಾರ 2015 ರಲ್ಲಿ ಪ್ರಾರಂಭಿಸಿತು. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ರೂಪಿಸಲಾದ ಎರಡು ಯೋಜನೆಗಳಲ್ಲಿ ಪಿಎಂಎವೈ-ಯು ನಗರ ಪ್ರದೇಶಗಳ ಮೇಲೆ ಕೇಂದ್ರೀಕೃತವಾಗಿದ್ದರೆ, ಪಿಎಂಎವೈ – ಜಿ ಗ್ರಾಮೀಣ ಪ್ರದೇಶಗಳಿಗೆ ಸೌಲಭ್ಯ ನೀಡುತ್ತದೆ. ಈವರೆಗೆ ಒಟ್ಟು 112.69 ಲಕ್ಷ ಮನೆಗಳನ್ನು ಈ ಯೋಜನೆಯಡಿ ನಿರ್ಮಿಸಲಾಗಿದೆ.

- https://pmaymis.gov.in/
- https://pmayg.nic.in/netiayHome/home.aspx

## PMKSY -ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ

ಭಾರತದ ಕೃಷಿಯಲ್ಲಿ ನಿಯಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ಹೆಚ್ಚಿನ ಇಳುವರಿ ಪಡೆಯುವ ಕೃಷಿ ವಿಧಾನಗಳನ್ನು ಉತ್ತೇಜಿಸಲು ಭಾರತ ಕೇಂದ್ರ ಸರ್ಕಾರದಿಂದ ಜಾರಿಯಾಗಿರುವ ಯೋಜನೆಯೇ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ. ಈ ಯೋಜನೆಗಾಗಿ 2015 -16 ರ ಸಾಲಿನ ಬಜೆಟ್ ನಲ್ಲಿ 533 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು.

- https://pmksy.gov.in/

## PM-JAY- ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ

ಆಯುಷ್ಮಾನ್ ಭಾರತ್ ಯೋಜನೆ (ಪ್ರಧಾನ್ ಮಂತ್ರಿ ಜನಾರೋಗ್ಯ ಯೋಜನೆ ಅಥವಾ ರಾಷ್ಟ್ರೀಯ ಆರೋಗ್ಯ ಸಂರಕ್ಷಣಾ ಯೋಜನೆ ಎಂದೂ ಕರೆಯಲಾಗುತ್ತದೆ) ಭಾರತದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆಯುಷ್ಮಾನ್ ಭಾರತ್ ಮಿಷನ್ ಅಡಿಯಲ್ಲಿ 2018ರಲ್ಲಿ ಪ್ರಾರಂಭಿಸಲಾಗಿರುವ ಕೇಂದ್ರ ಸರಕಾರದ ಯೋಜನೆ. ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಆರೈಕೆ ವ್ಯವಸ್ಥೆಗಳಲ್ಲಿ ಮಧ್ಯಸ್ಥಿಕೆ ವಹಿಸುವುದು, ಸಮಗ್ರ ಆರೋಗ್ಯ ರಕ್ಷಣೆ ಈ ಯೋಜನೆಯ ಉದ್ದೇಶ.

- https://setu.pmjay.gov.in/setu/

## PMJDY- ಪ್ರಧಾನ ಮಂತ್ರಿ ಜನ್-ಧನ್ ಯೋಜನೆ

ಪ್ರಧಾನ ಮಂತ್ರಿ ಜನ್-ಧನ್ ಯೋಜನೆ, ಭಾರತದ ಕಟ್ಟಕಡೆಯ ನಾಗರಿಕನಿಗೂ ಆರ್ಥಿಕ ಸೇವೆ ಸಿಗುವಂತಾಗಲು ಮತ್ತು ದೇಶದ ಆರ್ಥಿಕ ವಾಹಿನಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಸಲುವಾಗಿ, ಭಾರತ ಸರ್ಕಾರವು ಘೋಷಿಸಿದ ಒಂದು ಯೋಜನೆಯಾಗಿದೆ. ಈ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಗಸ್ಟ್ 15, 2014ರಂದು ಘೋಷಿಸಿದರು ಮತ್ತು 28ನೇ ಆಗಸ್ಟ್ 2014ರಂದು ಈ ಯೋಜನೆಯು ಅಧಿಕೃತವಾಗಿ ಜಾರಿಯಾಯಿತು.

- https://pmjdy.gov.in/

## PMGKAY-ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ

COVID-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಮಾರ್ಚ್ 2020ರಲ್ಲಿ ಕೇಂದ್ರ ಸರ್ಕಾರವು ಘೋಷಿಸಿದ ಕಲ್ಯಾಣ ಯೋಜನೆಯಾಗಿದೆ. ಅಂದಿನಿಂದ ಈ ಯೋಜನೆಯನ್ನು ಹಲವಾರು ಬಾರಿ ವಿಸ್ತರಿಸಲಾಗಿದೆ. ಎಲ್ಲಾ ಆದ್ಯತೆಯ ಮನೆಗಳಿಗೆ (ಪಡಿತರ ಕಾರ್ಡುದಾರರಿಗೆ)

ಮತ್ತು ಅಂತ್ಯೋದಯ ಅನ್ನ ಯೋಜನೆಗೆ ತಲುಪಲು ವಿನ್ಯಾಸಗೊಳಿಸಲಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಧಾನ್ಯಗಳನ್ನು ಒದಗಿಸುವುದು ಯೋಜನೆಯ ಉದ್ದೇಶ.

- https://dfpd.gov.in/allocation_PMGKAY.htm

## PMUY- ಪ್ರಧಾನ ಮಂತ್ರಿ ಉಜ್ವಲ ಯೋಜನೆ

ಪ್ರಧಾನಿ ನರೇಂದ್ರ ಮೋದಿ ಗ್ರಾಮೀಣ ಮಹಿಳೆಯರಿಗಾಗಿ "ಉಜ್ವಲ" ಯೋಜನೆಯನ್ನು ಮೇ.1, 2016ರಂದು ಪ್ರಾರಂಭಿಸಿದರು. ಬಡತನ ರೇಖೆಗಿಂತ ಕೆಳಗೆ ಇರುವವರನ್ನು ಗಮನದಲ್ಲಿ ಇರಿಸಿಕೊಂಡು ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆ. ದೇಶದ ಎಪಿಎಲ್, ಬಿಪಿಎಲ್ ಮತ್ತು ಪಡಿತರ ಚೀಟಿ ಹೊಂದಿರುವ ಮಹಿಳೆಯರಿಗೆ ಎಲ್‌ಪಿಜಿ ಒದಗಿಸಲಾಗುವುದು ಯೋಜನೆಯ ಮೂಲ ಉದ್ದೇಶ. ಕುಟುಂಬದ ವೆಚ್ಚವನ್ನು ಕಡಿಮೆ ಮಾಡುವುದು ಅಲ್ಲದೇ ಮಹಿಳೆಯರ ಆರೋಗ್ಯ ಸುಧಾರಣೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸಲಿದೆ. ಜನಧನ ಖಾತೆಯ ಆಧಾರಲ್ಲಿ ಕುಟುಂಬದ ಮಹಿಳೆ ಇದರ ಸಬ್ಸಿಡಿ ಪಡೆದುಕೊಳ್ಳಲಿದ್ದಾಳೆ.

- https://www.pmuy.gov.in/index.aspx

## PM-KISAN-ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಭಾರತ ಸರ್ಕಾರದ ಉಪಕ್ರಮವಾಗಿದ್ದು, ರೈತರಿಗೆ ಕನಿಷ್ಠ ಆದಾಯ ಬೆಂಬಲವಾಗಿ ವರ್ಷಕ್ಕೆ ₹6000 ನೀಡುತ್ತದೆ. 2018ರಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಯೋಜನೆ ಅಡಿಯಲ್ಲಿ ರೈತರು ವಾರ್ಷಿಕವಾಗಿ ಮೂರು ಕಂತುಗಳಲ್ಲಿ ಈ ಹಣ ಪಡೆಯಲಿದ್ದಾರೆ.

- https://pmkisan.gov.in/

## PMJJBY -ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ

ಭಾರತದ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆಯನ್ನು ಮೇ 9, 2015 ರಂದು ಪ್ರಾರಂಭಿಸಿತು. ಯಾವುದೇ ಕಾರಣದಿಂದ ಇದರ ಫಲಾನುಭವಿಗಳು 55 ವರ್ಷಕ್ಕಿಂತ ಮೊದಲು ಮರಣಹೊಂದಿದರೆ, ಸರ್ಕಾರವು ಎರಡು ಲಕ್ಷ ರೂಪಾಯಿ ಮೊತ್ತದಲ್ಲಿ ಜೀವ ವಿಮಾ ಪಾಲಿಸಿಯನ್ನು ನಾಮಿನಿಗೆ ನೀಡುತ್ತದೆ. ಭಾರತೀಯ ಜೀವ ವಿಮಾ ನಿಗಮ ಮತ್ತು ಇತರ ಖಾಸಗಿ ವಿಮಾ ಕಂಪನಿಗಳು ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕುಗಳ ಮೂಲಕ ಯೋಜನೆಯನ್ನು ನೀಡುತ್ತಿವೆ.

- https://financialservices.gov.in/insurance-divisions/Government-Sponsored-Socially-Oriented-Insurance-Schemes/Pradhan-Mantri-Jeevan-Jyoti-Bima-Yojana(PMJJBY)

## PMSBY-ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ

ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY) ಎಂಬುದು ಅಪಘಾತ ವಿಮೆ ಯೋಜನೆ. ಬಡವರು ಮತ್ತು ಕಡಿಮೆ ಆದಾಯದವರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರಕಾರ ಈ ಯೋಜನೆ ಜಾರಿ ಮಾಡಿದ. ಒಂದು ವೇಳೆ ಅಪಘಾತದಲ್ಲಿ ಸಾವು ಸಂಭವಿಸಿದರೆ ಮತ್ತು ಅಂಗವೈಕಲ್ಯವಾದರೆ ಒಂದು ವರ್ಷದ ಅವಧಿಗೆ ವಿಮೆ ಸಿಗುತ್ತದೆ. ಅಲ್ಲದೆ ಈ ಯೋಜನೆಯಡಿ ವಿಮೆಯನ್ನು ವಾರ್ಷಿಕ ಪ್ರೀಮಿಯಂ ಪಾವತಿಸುವ ಮೂಲಕ ನವೀಕರಣ ಮಾಡಬಹುದು. 18ರಿಂದ 70 ವರ್ಷ ವಯೋಮಾನದವರು, ಉಳಿತಾಯ ಖಾತೆ ಹೊಂದಿರುವವರು ಈ ಯೋಜನೆಗೆ ಸೇರ್ಪಡೆ ಆಗಬಹುದು.

- https://financialservices.gov.in/insurance-divisions/Government-Sponsored-Socially-Oriented-Insurance-Schemes/Pradhan-Mantri-Suraksha-Bima-Yojana(PMSBY)

## PMMY-ಪ್ರಧಾನ ಮಂತ್ರಿ ಮುದ್ರಾ ಯೋಜನೆ

ಪ್ರಧಾನ ಮಂತ್ರಿ ಮುದ್ರಾ ಸಾಲ ಯೋಜನೆಗೆ 2015 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು. ಈ ಕಾರ್ಯಕ್ರಮದ ಅಡಿಯಲ್ಲಿ ತಮ್ಮ ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ದೇಶದ ಜನತೆ ಸುಮಾರು 10 ಲಕ್ಷ ರೂಪಾಯಿಗಳ

ಸಹಾಯಕ್ಕೆ ಅರ್ಹರಾಗಿರುತ್ತಾರೆ. ಸಾಲವನ್ನು ಬಯಸುವ ವ್ಯಕ್ತಿಗಳು ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ ಯಾವುದೇ ಸಂಸ್ಕರಣಾ ಶುಲ್ಕವನ್ನು ಪಾವತಿಸುವ ಅಗತ್ಯವಿಲ್ಲ. ಅಲ್ಲದೆ, ಈ ಯೋಜನೆಯಡಿ ಮಾಡಿದ ಸಾಲಗಳ ಮರುಪಾವತಿ ಅವಧಿಯನ್ನು ಐದು ವರ್ಷಗಳವರೆಗೆ ಹೆಚ್ಚಿಸಲಾಗಿದೆ.

- https://www.mudra.org.in/

## APY-ಅಟಲ್ ಪಿಂಚಣಿ ಯೋಜನೆ

ಅಟಲ್ ಪಿಂಚಣಿ ಯೋಜನೆ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಯಾಗಿದೆ. ಇದನ್ನು ಪ್ರಧಾನಿ ನರೇಂದ್ರ ಮೋದಿ 2015 ರ ಜೂನ್ 1ರಂದು ಪ್ರಾರಂಭಿಸಿದರು. ಈ ಯೋಜನೆಯಡಿ ಫಲಾನುಭವಿಗಳ ವಯಸ್ಸು 60 ವರ್ಷ ಪೂರ್ಣಗೊಂಡ ನಂತರ ಪ್ರತಿ ತಿಂಗಳು 1,000 ರೂ.ನಿಂದ 5,000 ರೂ.ವರೆಗೆ ಪಿಂಚಣಿ ನೀಡಲಾಗುತ್ತದೆ. 2022ರ ಮಾರ್ಚ್ ವೇಳೆಗೆ ಈ ಯೋಜನೆಯಡಿ ಒಟ್ಟು 4.01 ಕೋಟಿ ಜನ ಚಂದಾದಾರರಾಗಿದ್ದಾರೆ. ಈ ಯೋಜನೆಯಲ್ಲಿ ಹೂಡಿಕೆ ಮತ್ತು ಫಲಾನುಭವಿಯ ವಯಸ್ಸಿಗೆ ಅನುಗುಣವಾಗಿ ಪಿಂಚಣಿ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಅಟಲ್ ಪಿಂಚಣಿ ಯೋಜನೆಯ ಲಾಭ ಪಡೆಯಲು ವ್ಯಕ್ತಿಯ ವಯಸ್ಸು 18 ರಿಂದ 40 ವರ್ಷಗಳ ನಡುವೆ ಇರಬೇಕು

- https://financialservices.gov.in/pension-reforms-divisions/Atal-Pension-Yojana

## BBBP-ಬೇಟಿ ಬಚಾವೋ, ಬೇಟಿ ಪಡಾವೋ

ಹೆಣ್ಣು ಮಗುವಿನ ಉಳಿವು, ರಕ್ಷಣೆ ಮತ್ತು ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಹರಿಯಾಣದಲ್ಲಿ ಭಾರತದ ಪ್ರಧಾನ ಮಂತ್ರಿಯವರು 22 ಜನವರಿ 2015 ರಂದು ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆಯನ್ನು ಪ್ರಾರಂಭಿಸಿದರು. ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬ ಮೂರು ಸಚಿವಾಲಯಗಳ ಸಂಯೋಜನೆಯಾಗಿದೆ.

- https://wcd.nic.in/bbbp-schemes

## PM SVANidhi-ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ

ಸಣ್ಣ ವ್ಯಾಪಾರಿಗಳಿಗೆ ತಮ್ಮ ವ್ಯಾಪಾರಕ್ಕೆ ಆರ್ಥಿಕ ನೆರವು ಒದಗಿಸುವ ಸಲುವಾಗಿ ಕೇಂದ್ರ ಸರಕಾರ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ ಆರಂಭಿಸಿದೆ. ಈ ಯೋಜನೆಯನ್ನು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಡಿ ಅರ್ಹರಾಗಿರುವವರು ಯಾವುದೇ ಅಡಮಾನವಿಲ್ಲದೆ ಸಾಲಕ್ಕಾಗಿ ಅರ್ಜಿ ಸಲ್ಲಿಸಬಹುದು. 10,000 ಆರಂಭಿಕ ಸಾಲ ತೆಗೆದುಕೊಳ್ಳಬಹುದು. ಈ ಹಣವನ್ನು ಒಂದು ವರ್ಷದೊಳಗೆ ಮರುಪಾವತಿ ಮಾಡಬೇಕು.

- https://pmsvanidhi.mohua.gov.in/

## PM SYM-ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ

ಕಟ್ಟಡ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಅಥವಾ ಇಟ್ಟಿಗೆ ಗೂಡಂಗಡಿಗಳಲ್ಲಿ ಅಸಂಘಟಿತ ವಲಯದ ಇತರ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಆರ್ಥಿಕ ಸಹಾಯವನ್ನು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ ಪ್ರಾರಂಭಿಸಿದೆ. ಮಾಸಿಕ ಪಿಂಚಣಿ ರೂಪದಲ್ಲಿ ವೃದ್ಧಾಪ್ಯದಲ್ಲಿ ಸಾಮಾಜಿಕ ಭದ್ರತೆಯನ್ನು ಒದಗಿಸುವ ಉದ್ದೇಶದಿಂದ ಸರ್ಕಾರವು 2019 ರಲ್ಲಿ ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿ ಕಾರ್ಮಿಕರಿಗೆ 60 ವರ್ಷದ ನಂತರ ಕನಿಷ್ಠ 3,000 ರೂ. ಗಳ ಮಾಸಿಕ ಪಿಂಚಣಿ ನೀಡಲಾಗುತ್ತದೆ.

- https://labour.gov.in/pm-sym

## PMFBY-ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ

ಭಾರತದ ಕೃಷಿಯನ್ನು ಮಳೆಯ ಜೊತೆಗಿನ ಜೂಜಾಟ ಎಂದೇ ಹೇಳಬಹುದು. ಹವಾಮಾನ ವೈಪರೀತ್ಯದ ಕಾರಣದಿಂದ ರೈತರು ಪದೇಪದೆ ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಅತಿವೃಷ್ಟಿ ಅಥವಾ ಅನಾವೃಷ್ಟಿ ಯಾವುದೇ ಸಂಭವಿಸಿದರೂ ರೈತ ಸಂಕಷ್ಟಕ್ಕೆ ಸಿಲುಕುತ್ತಾನೆ. ಹೀಗಾಗಿ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಹಾಗೂ ಅಪಾಯ ಸಂಭಾವ್ಯತೆಯನ್ನು ಕಡಿಮೆ ಮಾಡಲು ಪ್ರಧಾನ ಮಂತ್ರಿಯವರು ಫಸಲ್ ಬಿಮಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. 2016ರ ಜನವರಿ 13 ರಂದು ಈ ಯೋಜನೆಯನ್ನು ಘೋಷಿಸಲಾಯಿತು. ಕೇಂದ್ರ ಕೃಷಿ ಮತ್ತು ಕಲ್ಯಾಣ ಸಚಿವಾಲಯವು ಈ ಯೋಜನೆಯ ನಿರ್ವಹಣೆ ಮಾಡುತ್ತಿದ್ದು, ಕರ್ನಾಟಕ ಸೇರಿದಂತೆ ಭಾರತದ ಎಲ್ಲ ರಾಜ್ಯಗಳಲ್ಲೂ ಜಾರಿಯಲ್ಲಿದೆ. ಬೆಳೆಗೆ ಸರ್ಕಾರದಿಂದ ವಿಮೆ ಸೇವೆ ಸಿಗಲಿದೆ. ವಿಪತ್ತಿನ ವೇಳೆ ಸರ್ಕಾರವೇ ಪ್ರೀಮಿಯಂ ಭರಿಸುತ್ತದೆ.

- https://pmfby.gov.in/

## PMSMA-ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನೆಯಿದು. ಗರ್ಭಿಣಿ ಮಹಿಳೆಯರಿಗೆ ಪ್ರತಿ ತಿಂಗಳ 9 ರಂದು ಉಚಿತವಾಗಿ ತಪಾಸಣೆ ಮತ್ತು ಆರೋಗ್ಯ ಸೇವೆ ನೀಡುತ್ತದೆ. 2016ರ ಜುಲೈ 31ರಂದು ಪ್ರಧಾನಿ ಮೋದಿ ಈ ಯೋಜನೆಗೆ ಚಾಲನೆ ನೀಡಿದರು.

- https://pmsma.nhp.gov.in/

## PMMVY-ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಗರ್ಭಿಣಿಯರಿಗೆ ₹5000 ಸಹಾಯಧನ ಒದಗಿಸುತ್ತಿದೆ. ಎರಡನೇ ಮಗು ಹೊಂದಿದ್ದರೂ ಯೋಜನೆಯ ಸೌಲಭ್ಯ ನೀಡಲು ಸರ್ಕಾರ ನಿರ್ಧರಿಸಿದೆ. ಈ ಯೋಜನೆಯಡಿ ಗರ್ಭಿಣಿಯರಿಗೆ ₹5000 ನೀಡಲಾಗುತ್ತಿತ್ತು. ಇದೀಗ ಕೇಂದ್ರ ಸರ್ಕಾರವು ಈ ಯೋಜನೆಯ ನಿಯಮಗಳನ್ನು ಬದಲಾಯಿಸಿದ್ದು, ಈಗ ಎರಡನೇ ಮಗುವಿನ ಗರ್ಭಧಾರಣೆ ಅವಧಿಯಲ್ಲೂ ಸಹಾಯದ ಮೊತ್ತ ಪಡೆಯಲು ಅರ್ಹರಾಗಿದ್ದಾರೆ.

- https://wcd.nic.in/schemes/pradhan-mantri-matru-vandana-yojana

## PMBJP-ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ

ಎಲ್ಲರಿಗೂ ಕೈಗೆಟುಕುವ ದರದಲ್ಲಿ ಗುಣಮಟ್ಟದ ಜನರಿಕ್ ಔಷಧಗಳನ್ನು ಲಭ್ಯವಾಗುವಂತೆ ಮಾಡುವ ಉದ್ದೇಶದೊಂದಿಗೆ ಭಾರತ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಫಾರ್ಮಸುಟಿಕಲ್ಸ್ ಇಲಾಖೆ 2018ರ ನವೆಂಬರ್ ನಲ್ಲಿ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ(ಪಿಎಂಬಿಜೆಪಿ)ಯನ್ನು ಆರಂಭಿಸಿತು. 2021ರ ಅಕ್ಟೋಬರ್ 10ರವರೆಗೆ ಜನೌಷಧಿ ಮಳಿಗೆಗಳ ಸಂಖ್ಯೆ 8,366ಕ್ಕೆ ಏರಿಕೆಯಾಗಿದೆ.

- http://janaushadhi.gov.in/pmjy.aspx

## SSY-ಸುಕನ್ಯಾ ಸಮೃದ್ಧಿ ಯೋಜನೆ

ಸುಕನ್ಯಾ ಸಮೃದ್ಧಿ ಖಾತೆ ಹೆಣ್ಣು ಮಕ್ಕಳ ಆರ್ಥಿಕ ಅಭಿವೃದ್ಧಿಗಾಗಿ ಹಾಗು ಅವರ ಭವಿಷ್ಯದ ವಿದ್ಯಾಭ್ಯಾಸ, ವಿವಾಹದಂತಹ ಖರ್ಚು ವೆಚ್ಚಗಳ ವಿಚಾರದಲ್ಲಿ ಪೋಷಕರಿಗೆ ನೆರವಾಗಲು, ಉಳಿತಾಯ ಖಾತೆಯನ್ನು ತೆರೆಯುವ, ಭಾರತ ಸರ್ಕಾರದ ಒಂದು ಯೋಜನೆಯಾಗಿದೆ. 2015 ರ ಜನವರಿ 22 ರಂದು ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆಯನ್ನು ಹರಿಯಾಣದ ಪಾಣಿಪತ್ ನಲ್ಲಿ ಲೋಕಾರ್ಪಣೆಗೊಳಿಸಿದರು. ಭಾರತದ ಯಾವುದೇ ಅಂಚೆ ಕಛೇರಿ ಹಾಗು ಕೆಲವು ಅಂಗೀಕೃತ ಬ್ಯಾಂಕ್ ಗಳಲ್ಲಿ ಖಾತೆ ತೆರೆಯಲು ಅವಕಾಶವಿದೆ.

- http://www.nsiindia.gov.in/InternalPage.aspx?Id_Pk=89

## PMKVY-ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನೆ

ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಪ್ರಮುಖ ಯೋಜನೆಯಾಗಿದೆ. ಈ ಕೌಶಲ್ಯ ಪ್ರಮಾಣೀಕರಣ ಯೋಜನೆಯ ಉದ್ದೇಶವು ಹೆಚ್ಚಿನ ಸಂಖ್ಯೆಯ ಭಾರತೀಯ ಯುವಕರು ಉತ್ತಮ ಜೀವನೋಪಾಯವನ್ನು ಪಡೆಯಲು ಸಹಾಯ ಮಾಡುವ ಉದ್ಯಮ-ಸಂಬಂಧಿತ ಕೌಶಲ್ಯ ತರಬೇತಿಯನ್ನು ತೆಗೆದುಕೊಳ್ಳಲು ಅನುವುಮಾಡಿಕೊಡುವುದಾಗಿದೆ.

- http://www.pmkvyofficial.org/

## ವಂದೇ ಭಾರತ್ ಯೋಜನೆ

2019ರಲ್ಲಿ ವಂದೇ ಭಾರತ್ ರೈಲು ಯೋಜನೆ ಆರಂಭವಾಗಿದ್ದು , ಸುಸಜ್ಜಿತ, ವೇಗಯುತ ರೈಲು ಸೇವೆ ನೀಡುವುದು ಇದರ ಗುರಿ.

## ಜಲಜೀವನ್ ಮಿಷನ್ ಯೋಜನೆ

ದೇಶದ ಪ್ರತಿ ಹಳ್ಳಿಗೂ 2024ರೊಳಗೆ ನಿರಂತರ ಶುದ್ಧ ಕುಡಿಯುವ ನೀರು ಕಲ್ಪಿಸುವ ಮಹತ್ವಾಕಾಂಕ್ಷಿ ಜಲ್ ಜೀವನ್ ಮಿಷನ್‌ನ ಭಾಗವಾಗಿರುವ ಮೊಬೈಲ್ ಅಪ್ಲಿಕೇಷನ್‌ಗೆ ಪ್ರಧಾನಿ ನರೇಂದ್ರ ಮೋದಿ 2021ರ ಅಕ್ಟೋಬರ್‌ನಲ್ಲಿ ಚಾಲನೆ ನೀಡಿದ್ದಾರೆ. ಇದುವರೆಗೆ ಒಟ್ಟು 3.27 ಕೋಟಿ ಗ್ರಾಮೀಣ ಕುಟುಂಬಗಳಿಗೆ ನೀರಿನ ಸಂಪರ್ಕ ನೀಡಲಾಗಿದೆ.

- https://ejalshakti.gov.in/jjmreport/JJMIndia.aspx

## ಸ್ವಚ್ಛ ಭಾರತ ಮಿಷನ್

ದೇಶಾದ್ಯಂತ ಸಾರ್ವಜನಿಕ ಆಸ್ತಿಗಳು, ರಸ್ತೆಗಳು ಮತ್ತು ಸಮಾಜವನ್ನು ಸ್ವಚ್ಛವಾಗಿಡುವುದು ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ಮೂಲ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಚ್ಛ ಭಾರತ ಅಭಿಯಾನ ಆರಂಭಿಸಿದರು. ಸ್ವಚ್ಛ ಭಾರತ ಅಭಿಯಾನ ಅಥವಾ ಸ್ವಚ್ಛ ಭಾರತ್ ಮಿಷನ್ ಅನ್ನು ಮಹಾತ್ಮ ಗಾಂಧಿ ಜನ್ಮದಿನದಂದು 2014ರ ಅಕ್ಟೋಬರ್ 2ರಂದು ಆರಂಭಿಸಲಾಯಿತು.

- https://swachhbharatmission.gov.in/

## ಪ್ರಧಾನ ಮಂತ್ರಿ ಸಹಾಜ್ ಬಿಜ್ಲಿ ಹರ್ ಘರ್ ಯೋಜನಾ (ಸೌಭಾಗ್ಯ)

ಪ್ರಧಾನ ಮಂತ್ರಿ ಸಹಜ್ ಬಿಜಲಿ ಹರ್ ಘರ್ ಯೋಜನೆಯಡಿ ಆರ್ಥಿಕವಾಗಿ ದುರ್ಬಲವಾಗಿರುವ ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ ಹಾಗೂ ಇತರೆ ಕುಟುಂಬಗಳಿಗೆ 10 ಮಾಸಿಕ ಕಂತುಗಳಲ್ಲಿ ತಲಾ ₹50ರಂತೆ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. ಈ ಯೋಜನೆಯಡಿ 1.23 ಕೋಟಿ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಗುರಿ ಹೊಂದಲಾಗಿದೆ.

- https://www.india.gov.in/spotlight/pradhan-mantri-sahaj-bijli-har-ghar-yojana-saubhagya

# ಸಮೃದ್ಧ ಕರ್ನಾಟಕ - ಸರ್ವರ ವಿಕಾಸ

## ಸುಶಾಸನದಿಂದ ಮನಗೆದ್ದ ಕರ್ನಾಟಕ ಸರ್ಕಾರ

**2018ರಲ್ಲೇ ಬಿಜೆಪಿಗೆ ಅಪಾರ ಪ್ರಮಾಣದ ಜನಾದೇಶವಿದ್ದರೂ ಅವಕಾಶವಾದಿ ರಾಜಕಾರಣದಿಂದ 2019ರಲ್ಲಿ ಜನರ ಆಸೆ ಕೈಗೂಡಿ ಬಿಜೆಪಿ ಅಧಿಕಾರಕ್ಕೆ ಬಂದಿತು. ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರ ಎರಡು ವರ್ಷಗಳ ಸಮರ್ಥ ಆಡಳಿತ ಮತ್ತು ನಂತರದಲ್ಲಿ ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರ ನಾಯಕತ್ವದ ಸರ್ಕಾರದ ಮೂಲಕ ಕರ್ನಾಟಕದಲ್ಲಿ ಸಮಗ್ರ ಅಭಿವೃದ್ಧಿಗಾಗಿ ನೂರಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.**

### ● ಕೃಷಿ

- **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ** ಯೋಜನೆಯಡಿ 3 ವರ್ಷಗಳಲ್ಲಿ 2800 ಕೋಟಿ ರೂ. ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ.
- 28.42 ಲಕ್ಷ ರೈತರಿಗೆ ರೂ.20,971.79 ಕೋಟಿ **ಕೃಷಿ ಸಾಲ** ವಿತರಣೆ
- 76,000 ಹೆಕ್ಟೇರ್ ಭೂಮಿಯಲ್ಲಿ 10.05 ಕೋಟಿ ರೂ ವಿನಿಯೋಗಿಸಿ 83,000 ರೈತರಿಗಾಗಿ **ಸಾವಯವ ಕೃಷಿ ಯೋಜನೆ** ಜಾರಿ.
- 2020-21ನೇ ಸಾಲಿನಲ್ಲಿ 158.73 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆ.
- **ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ ಜಾರಿ**. ಕೋರ್ಸಿಗೆ ಅನುಗುಣವಾಗಿ 2 ಸಾ.ರೂ.ನಿಂದ 11 ಸಾ.ರೂ. ವರೆಗೆ ವಿದ್ಯಾರ್ಥಿ ವೇತನ.
- **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ**ಯಡಿ 57 ತಾಲ್ಲೂಕುಗಳ 2.75 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ 642.26 ಕೋಟಿ ರೂ.
- ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ರೈಲ್ವೆ ಮುಖಾಂತರ ಸಾಗಿಸುವ **"ಕಿಸಾನ್ ರೈಲ್"** ಸೌಲಭ್ಯ ಪ್ರಾರಂಭ.
- **ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ** ವಿಮೆ ಪಾವತಿ, ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಕಲ್ಯಾಣಿ ಯೋಜನೆ ಜಾರಿ.
- **ಭೂ ಒಡೆತನ ಯೋಜನೆ**ಯಡಿ ಘಟಕ ವೆಚ್ಚ 15 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ.
- ಪ್ರವಾಹದಿಂದಾದ ಬೆಳೆ ನಷ್ಟಕ್ಕೆ 48 ಗಂಟೆಗಳಲ್ಲೇ **ಪರಿಹಾರ ವಿತರಣೆ**. 18.56 ಲಕ್ಷ ರೈತರಿಗೆ ಅನುಕೂಲ ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ ರೂ.250 ಡೀಸೆಲ್ ಸಹಾಯಧನ
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್** ಸ್ಥಾಪಿಸುವ ಯೋಜನೆ
- 36,601 ಸ್ವಸಹಾಯ ಗುಂಪುಗಳಿಗೆ ಸಹಕಾರ ಬ್ಯಾಂಕುಗಳಿಂದ

ರೂ.1,385.17 ಕೋಟಿ ಸಾಲ ವಿತರಣೆ

- 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ ನೆರವು ನೀಡುವ **ಮತ್ಸ್ಯ ಸಿರಿ** ಯೋಜನೆ.

## ● ಜಲ ಸಂಪನ್ಮೂಲ, ನೀರಾವರಿ

- **ಕೃಷ್ಣಾ ನ್ಯಾಯಾಧಿಕರಣ** ತೀರ್ಪಿನ ಗೆಜೆಟ್ ಪ್ರಕಟಣೆಗೆ ಕೇಂದ್ರಕ್ಕೆ ಮನವಿ - ಸಕಾರಾತ್ಮಕ ಸ್ಪಂದನೆ
- **ಮೇಕೆದಾಟು** ಯೋಜನೆ ಡಿಪಿಆರ್ ಕೇಂದ್ರದಿಂದ ಪರಿಶೀಲನೆ.
- **ಎತ್ತಿನ ಹೊಳೆ ಯೋಜನೆ ಮೊದಲ ಹಂತ** ಈ ಮುಂಗಾರಿನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ
- ಅಣೆಕಟ್ಟು ಸುರಕ್ಷತಾ ಸಂಸ್ಥೆ ಸ್ಥಾಪನೆ.
- **ಕೆಸಿ ಕಣಿವೆ** ಎರಡನೇ ಹಂತದ ಯೋಜನೆಗೆ ಚಾಲನೆ
- ಪಶ್ಚಿಮವಾಹಿನಿ ಯೋಜನೆ ಜಾರಿಗೆ ಕ್ರಮ.
- 61147 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.
- ಸುಜಲಾಂ ಸುಫಲಾಂ ಕರ್ನಾಟಕ ಕೆರೆ ಪುನಶ್ಚೇತನಕ್ಕೆ ಮಿಷನ್ ಕಲ್ಯಾಣಿ.

## ● ತೋಟಗಾರಿಕೆ

- ರೈತರ ಆದಾಯ ಹೆಚ್ಚಿಸಲು ದೇಶದಲ್ಲೇ ಮೊದಲ ಬಾರಿಗೆ **ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ** ಸ್ಥಾಪನೆ.
- ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂರಕ್ಷಣೆ, ಗ್ರಾಮೀಣ - ಗುಡಿ ಕೈಗಾರಿಕೆಗಳ ಮೂಲಕ ರೈತರ ಆದಾಯ ಹೆಚ್ಚಿಸಲು ಮತ್ತು ಗ್ರಾಮೀಣ ಉದ್ಯೋಗಾವಕಾಶ ಹೆಚ್ಚಿಸಲು ಆದ್ಯತೆ.
- ಕೃಷಿ ಯಾಂತ್ರೀಕರಣ,ಉತ್ಪನ್ನ ಸಂಸ್ಕರಣೆ ಘಟಕಗಳಿಗೆ 483.56 ಕೋಟಿ ರೂ. ಸಹಾಯಧನ
- ದ್ರಾಕ್ಷಿ ಅಭಿವೃದ್ಧಿ ಮತ್ತು ದ್ರಾಕ್ಷರಸ ಮಂಡಳಿ
- **ಅಟಲ್ ಬಿಹಾರಿ ವಾಜಪೇಯಿ ಉದ್ಯಾನವನ ಅಭಿವೃದ್ಧಿ**

## ● ಪಶು ಸಂಗೋಪನೆ

- ತಲಾ 15 ಕೋ.ರೂ. ವೆಚ್ಚದಲ್ಲಿ **ಜಿಲ್ಲೆಗೊಂದು ಗೋಶಾಲೆ** ಸ್ಥಾಪನೆಗೆ ಕ್ರಮ.
- ಪುಣ್ಯ ಕೋಟಿ ದತ್ತು ಯೋಜನೆ: ಗೋಶಾಲೆಗಳಲ್ಲಿನ ಜಾನುವಾರುಗಳನ್ನು ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ವಾರ್ಷಿಕ ರೂ. 11,000/- ಮೊತ್ತಕ್ಕೆ ದತ್ತು ಪಡೆಯುವ **ಪುಣ್ಯಕೋಟಿ ದತ್ತು ಯೋಜನೆ** ಜಾರಿ.
- ಮನೆಬಾಗಿಲಿಗೆ ಪಶುವೈದ್ಯಕೀಯ ಸೇವೆ: 275 ಸಂಚಾರಿ ಪಶು ಚಿಕಿತ್ಸಾ ವಾಹನ ಲೋಕಾರ್ಪಣೆ.
- ಆಕಸ್ಮಿಕ ಮರಣ ಹೊಂದಿದ 1,06.812 ಕುರಿ/ಮೇಕೆಗಳ ಮಾಲೀಕರುಗಳಿಗೆ 54.32 ಕೋಟಿ ರೂ. ಪರಿಹಾರ ಧನ.
- ಜಾನುವಾರುಗಳಿಗೆ ದಿನದ ಎಲ್ಲಾ ಸಮಯ ಸೇವೆ ನೀಡಲು **ಪ್ರಾಣಿ ಕಲ್ಯಾಣ ಸಹಾಯವಾಣಿ** 8277100200 ಆರಂಭ.

## ● ಸಹಕಾರ ಇಲಾಖೆ

- ರೈತರು ತಾವು ಬೆಳೆದ ಬೆಳೆಗಳನ್ನು ತಮ್ಮ ಇಚ್ಛೆಯಂತೆ ಎಲ್ಲಿ ಬೇಕಾದರೂ ಮಾರಾಟ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ಕ್ಕೆ ತಿದ್ದುಪಡಿ **'ತನ್ನ ಬೆಳೆ ತನ್ನ ಹಕ್ಕು ತನ್ನ ಬೆಲೆ"** ಎಂದು ಹೊಲಗಳಲ್ಲಿ, ಎ.ಪಿ.ಎಂ.ಸಿ. ಮಾರುಕಟ್ಟೆ ಅಥವಾ ಮಾರುಕಟ್ಟೆ ಹೊರಗೆ ಮಾರಾಟ ಮಾಡುವ ಸ್ವಾತಂತ್ರ್ಯ.
- ರೈತರ ಮೇಲಿನ ಎಪಿಎಂಸಿ ಮಾರುಕಟ್ಟೆ ಶುಲ್ಕ ಶೇ. 1.5ರಿಂದ 0.6ಕ್ಕೆ ಇಳಿಕೆ.
- **ಯಶಸ್ವಿನಿ ಯೋಜನೆ ಮರುಜಾರಿ**- ಯೋಜನೆ ಕಾರ್ಡ್ ಹೊಂದಿರುವವರಿಗೆ 5 ಲಕ್ಷ ರೂ.ವರೆಗೆ ಉಚಿತ ಆರೋಗ್ಯ ಸೇವೆ ಒದಗಿಸುವ ಯೋಜನೆ.
- **ಶೂನ್ಯ ಬಡ್ಡಿಗೆ ಬೆಳೆ ಸಾಲ;** ಶೇ. 3 ಬಡ್ಡಿಗೆ ಕೃಷಿ ಸಾಲ.

## ● ಮೀನುಗಾರಿಕೆ

- ಮೀನುಗಾರರ 49 ಕೋಟಿ ರೂ. **ಸಾಲ ಮನ್ನಾ**
- ಮೀನುಗಾರಿಕೆ ಕೊಂಡಿ ರಸ್ತೆಗಳ ಅಭಿವೃದ್ಧಿ.
- **ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ**ಯಡಿ 570 ಕೋಟಿ ರೂ. ವಿತರಣೆಗೆ ಕ್ರಮ.
- ಎಂಟು ಮೀನುಗಾರಿಕೆ ಬಂದರುಗಳಲ್ಲಿ ನ್ಯಾವಿಗೇಶನ್ ಚಾನೆಲ್ ಹೂಳೆತ್ತಲು ಕ್ರಮ.
- ಗ್ರಾಮಪಂಚಾಯ್ತಿ ಕೆರೆಗಳಲ್ಲಿ ಮೀನು ಕೃಷಿಗೆ ಯೋಜನೆ.
- ಮೀನುಗಾರರಿಗೆ 2019-2022ರವರೆಗೆ 264.55 ಕೋಟಿ ರೂ. ಸಹಾಯಧನ.

## ● ಕುಡಿಯುವ ನೀರು

- ಮನೆ ಮನೆಗೆ ಗಂಗೆ: **ಜಲಜೀವನ್ ಮಿಷನ್** ಯೋಜನೆಯಡಿ 22.85 ಲಕ್ಷ ಮನೆಗಳಿಗೆ ಹೊಸದಾಗಿ ನಲ್ಲಿ ಸಂಪರ್ಕ; ಶೇ. 100 ರಷ್ಟು ಗುರಿ ಮುಟ್ಟಲಾಗಿದೆ.

## ● ನೇಕಾರರು

- ನೇಕಾರರ ಒಂದು ಲಕ್ಷ ರೂವರೆಗಿನ **ಸಾಲ ಮನ್ನಾ,**
- 2021-22ನೇ ಸಾಲಿನಲ್ಲಿ 49,544 ನೇಕಾರರಿಗೆ ನೇರ ನಗದು ವರ್ಗಾವಣೆ.
- ನೇಕಾರ ಸಮ್ಮಾನ್ ನೆರವಿನ ಮೊತ್ತ ರೂ.2,000/- ದಿಂದ ರೂ.5,000/-ಕ್ಕೆ ಹೆಚ್ಚಳ.
- **ನೇಕಾರರ ಮಕ್ಕಳಿಗೆ ವಿದ್ಯಾನಿಧಿ**

# ಅಮೃತ ಯೋಜನೆಗಳು

## ● ಅಮೃತ ಗ್ರಾಮ ಪಂಚಾಯತಿ ಯೋಜನೆ

- 750 ಗ್ರಾಮ ಪಂಚಾಯತಿಗಳ ಸಮಗ್ರ ಅಭಿವೃದ್ಧಿ.
- ಅಮೃತ ಗ್ರಾಮೀಣ ವಸತಿ ಯೋಜನೆ
- 750 ಗ್ರಾಮ ಪಂಚಾಯತಿಗಳಲ್ಲಿ ವಸತಿ ಮತ್ತು ಆಶ್ರಯರಹಿತರಿಗೆ ವಸತಿ ಸೌಲಭ್ಯ.

## ● ಅಮೃತ ರೈತ ಉತ್ಪಾದಕ ಸಂಸ್ಥೆಗಳು

- 750 ಅಮೃತ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಿ, ಪ್ರತಿ ಸಂಸ್ಥೆಗೆ 30 ಲಕ್ಷ ರೂ. ನಂತೆ ಮೂರು ವರ್ಷದ ಅವಧಿಗೆ 225 ಕೋಟಿ ರೂ. ಅನುದಾನ.

## ● ಅಮೃತ ಶಾಲಾ ಸೌಲಭ್ಯ ಯೋಜನೆ

- ಆಯ್ದ 750 ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ ಇತ್ಯಾದಿ ಸಮಗ್ರ ಸೌಲಭ್ಯ ಒದಗಿಸಲು ತಲಾ 10 ಲಕ್ಷ ರೂ.ಗಳಂತೆ 75 ಕೋಟಿ ರೂ.

## ● ಅಮೃತ ಅಂಗನವಾಡಿ ಕೇಂದ್ರಗಳು

- ಅಂಗನವಾಡಿ ಕೇಂದ್ರಗಳ ಮೂಲಸೌಕರ್ಯ. ಮೇಲ್ದರ್ಜೆಗೇರಿಸಲು ಪ್ರತಿ ಅಂಗನವಾಡಿಗೆ 1 ಲಕ್ಷ ರೂ.ನಂತೆ 7.5 ಕೋಟಿ ರೂ. ಹಣ ವಿನಿಯೋಗ

## ● ಅಮೃತ ಸ್ವಸಹಾಯ ಕಿರು ಉದ್ದಿಮೆಗಳು

- ಆಯ್ದ 7,500 ಸ್ವಸಹಾಯ ಗುಂಪುಗಳನ್ನು ಕಿರು ಉದ್ಯಮ ಸಂಸ್ಥೆಗಳಾಗಿ ರೂಪಿಸಲು ತಲಾ 1 ಲಕ್ಷ ರೂ. ನಂತೆ 75 ಕೋಟಿ ರೂ.

## ● ಅಮೃತ ಸಮುದಾಯ ಅಭಿವೃದ್ಧಿ ಯೋಜನೆ

- 750 ರಚನಾತ್ಮಕ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಗುರುತಿಸಿ ಸಾಮುದಾಯಿಕ ಪ್ರೇರೇಪಿಸಲಾಗುವುದು.

## ● ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ

- ಆಯ್ದ 750 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಸೌಕರ್ಯಗಳ ವಿಸ್ತರಣೆ ಮತ್ತು ಉನ್ನತೀಕರಣಕ್ಕೆ ತಲಾ 20 ಲಕ್ಷ ರೂ.ಗಳಂತೆ 150 ಕೋಟಿ ರೂ.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

## ● ಅಮೃತ ಕೌಶಲ್ಯ ತರಬೇತಿ ಯೋಜನೆ

- ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳ 75 ಸಾವಿರ ಯುವಕ ಯುವತಿಯರ ಕೌಶಲ್ಯಾಭಿವೃದ್ಧಿಗೆ 2 ವರ್ಷಗಳ ತರಬೇತಿಗೆ 12 ಕೋಟಿ ರೂ.

## ● ಅಮೃತ ಕ್ರೀಡಾ ದತ್ತು ಯೋಜನೆ

- ಪ್ಯಾರೀಸ್ ಒಲಂಪಿಕ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿ ಪದಕ ವಿಜೇತ ಸಾಮರ್ಥ್ಯವುಳ್ಳ ಆಯ್ದ 75 ಕ್ರೀಡಾಪಟುಗಳನ್ನು ರೂಪಿಸಲು ಅಗತ್ಯವಾದ ತರಬೇತಿ ಮತ್ತು ಪ್ರೋತ್ಸಾಹ.

## ● ಅಮೃತ ನಿರ್ಮಲ ನಗರ

- 75 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛತೆ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ಪ್ರತಿ ಸ್ಥಳೀಯ ಸಂಸ್ಥೆಗೆ 1 ಕೋಟಿ ರೂ. ನಂತೆ 75 ಕೋಟಿ ರೂ.

## ● ಅಮೃತ ಸ್ಟಾರ್ಟಪ್ ಯೋಜನೆ

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಹಾಗೂ ಮಹಿಳಾ ಉದ್ದಿಮೆದಾರರಿಗೆ 100 ಸ್ಟಾರ್ಟ್ ಅಪ್ ಗಳನ್ನು ಉತ್ತೇಜಿಸುವ ಗುರಿ.

## ● ಅಮೃತ ನಗರೋತ್ಥಾನ ಯೋಜನೆ:

- 6000 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು ನಗರದ ಕೆರೆಗಳು ಉದ್ಯಾನಗಳು, ಸಂಚಾರ ವ್ಯವಸ್ಥೆ ಹಾಗೂ ಇತರ ಮೂಲ ಸೌಕರ್ಯಗಳನ್ನು ಅಭಿವೃದ್ಧಿ.
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ: 3885 ಕೋಟಿ ರೂ. ಅನುದಾನದಲ್ಲಿ ಸಣ್ಣ ಮತ್ತು ಮಧ್ಯಮ ನಗರಗಳ ಅಭಿವೃದ್ಧಿ.

## ಉತ್ತರ ಕರ್ನಾಟಕದ ಐದು ಜಿಲ್ಲೆಗಳ 52,072 ತಾಂಡಾ/ಅಲೆಮಾರಿ ಜನರಿಗೆ ಹಕ್ಕುಪತ್ರಗಳ ವಿತರಣೆ

**ರಾಜ್ಯದ ಲಂಬಾಣಿ ತಾಂಡಾ, ಹಟ್ಟಿ, ಹಾಡಿ, ಗೊಲ್ಲರಹಟ್ಟಿ, ವಡ್ಡರ ಹಟ್ಟಿಯಲ್ಲಿರುವ ಅಲೆಮಾರಿ ಸಮುದಾಯದವರಿಗೆ ಸೂರು ಒದಗಿಸುವ ದೃಷ್ಟಿಯಿಂದ ಕಲಬುರಗಿ (27,267), ಬೀದರ್ (7,500), ರಾಯಚೂರು (3,500), ಯಾದಗಿರಿ(11,200) ಹಾಗೂ ವಿಜಯಪುರದ (2,605) ಒಟ್ಟು 52,072 ಜನರಿಗೆ ಹಕ್ಕುಪತ್ರ ನೀಡಿ ವಿಶ್ವದಾಖಲೆಯನ್ನೇ ನಿರ್ಮಿಸಲಾಗಿದೆ. ಸದರಿ ತಾಂಡಾಗಳನ್ನು ಈಗಾಗಲೇ ರಾಜ್ಯ ಸರ್ಕಾರವು ಕಂದಾಯ ಗ್ರಾಮಗಳು ಎಂದೂ ಘೋಷಿಸಿದೆ.**

## ● ಆರೋಗ್ಯ

- ನಗರಪ್ರದೇಶದ ಬಡಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು 438 **"ನಮ್ಮ ಕ್ಲಿನಿಕ್"**ಗಳ ಸ್ಥಾಪನೆ ಆರಂಭ.
- **ಆಯುಷ್ಮಾನ್ ಕರ್ನಾಟಕ ಯೋಜನೆ.**
- ಆಯುಷ್ಮಾನ್ ಭಾರತ್ ಅಡಿಯಲ್ಲಿ 3152 ಕೋ.ರೂ. ಸರ್ಕಾರಿ ವೆಚ್ಚದಲ್ಲಿ 24.94 ಲಕ್ಷ ರೋಗಿಗಳಿಗೆ ಚಿಕಿತ್ಸೆ
- **ಆರೋಗ್ಯ ಕವಚ** ಯೋಜನೆಯಡಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತುರ್ತು ಸೇವೆಯ ವಾಹನ
- ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ನೆರವು
- ಕೊರೊನಾ ಸೋಂಕಿನಿಂದ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಶಿಕ್ಷಣ ಒದಗಿಸಲು ತಿಂಗಳಿಗೆ 3,500 ರೂ ನೀಡುವ **ಮುಖ್ಯಮಂತ್ರಿ ಬಾಲಸೇವಾ ಯೋಜನೆ** ಜಾರಿ, 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ 1 ಲಕ್ಷ ರೂ ನೆರವು.
- ಜಿಲ್ಲಾ ಆಸ್ಪತ್ರೆಗಳ ಐಸಿಯು ಹಾಸಿಗೆ 25ರಿಂದ 50ಕ್ಕೆ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ 6ರಿಂದ 25 ಕ್ಕೆ ಹೆಚ್ಚಳ.
- ರಾಜ್ಯದ ನಾಲ್ಕು ಕಡೆಗಳಲ್ಲಿ **ತಾಯಿ - ಮಕ್ಕಳ ಆಸ್ಪತ್ರೆ** ಕಾಮಗಾರಿ ಆರಂಭ.

## ● ಪ್ರಾಥಮಿಕ - ಪ್ರೌಢ ಶಿಕ್ಷಣ

- ಕೋವಿಡ್ ವಿಷಯಸ್ಥಿತಿಯಲ್ಲೂ ಯಶಸ್ವೀ ಎಸೆಸೆಲ್ಸಿ - ಪಿಯುಸಿ ಪರೀಕ್ಷೆಗಳ ನಿರ್ವಹಣೆ. ಈ ಕಾಲದ **ವಿದ್ಯಾಗಮ** ಯೋಜನೆಗೆ ದೇಶದಲ್ಲೇ ಹೆಸರುವಾಸಿ.
- **ನನ್ನ ಶಾಲೆ, ನನ್ನ ಕೊಡುಗೆ** ಯೋಜನೆಯಡಿ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಗತ್ಯತೆಗಳು, ಶಿಕ್ಷಕರ ಕೊರತೆ, ಕಲಿಕಾ ಸಾಧನಗಳ ಉತ್ತಮ ಬಳಕೆಗಾಗಿ
- ಖಾಸಗಿ ಉಪನ್ಯಾಸಕರಿಗೆ **ಶಿಕ್ಷಣ ಕಲ್ಯಾಣ ನಿಧಿ**
- ಸರಕಾರಿ ಮತ್ತು ಸರಕಾರೇತರ ಅನುದಾನಿತ ಶಾಲೆಗಳ ಎಂಟನೇ ತರಗತಿ ಮಕ್ಕಳಿಗೆ ಸುಮಾರು 125 ಕೋಟಿ ರೂ ವೆಚ್ಚದಲ್ಲಿ ಸೈಕಲ್ ವಿತರಣೆ.
- 4,736 ಕೋಟಿ ರೂ. ವೆಚ್ಚದಲ್ಲಿ ರಾಜ್ಯದ 150 ಐಟಿಐಗಳನ್ನು ತಂತ್ರಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಣ.
- 2019-2022ರ ಅವಧಿಯಲ್ಲಿ 9191 ತರಗತಿಗಳ ಕೋಣೆಗಳ ನಿರ್ಮಾಣ
- 2019-2022ರ ಅವಧಿಯಲ್ಲಿ 15000 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ.
- ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ 500 ಕೋಟಿ ರೂ.

## ● ಉನ್ನತ ಶಿಕ್ಷಣ

- **ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲಿ ಮೊತ್ತ ಮೊದಲ ಬಾರಿಗೆ ರಾಜ್ಯದಲ್ಲಿ ಜಾರಿಗೆ ತಂದ ಹೆಗ್ಗಳಿಕೆ.**
- ಮೂರು ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು
- ಕೋರ್ಸ್‌ಗಳೊಂದಿಗೆ ಪ್ರಾರಂಭ. ಅತ್ಯುನ್ನತ ಗುಣಮಟ್ಟದ ತಾಂತ್ರಿಕ ಬೋಧನೆ-ಕಲಿಕೆ ಹಾಗೂ ಸಂಶೋಧನೆಗೆ ಉತ್ತೇಜನ ನೀಡಲು ಐಐಟಿ ಮಾದರಿಯಲ್ಲಿ ರಾಜ್ಯದ ಏಳು ಸರ್ಕಾರಿ
- ಇಂಜಿನಿಯರಿಂಗ್ ಕಾಲೇಜುಗಳನ್ನು **Karnataka Institute of Technology**ಗಳನ್ನಾಗಿ ಉನ್ನತೀಕರಿಸಲು ಕ್ರಮ.
- ಬೆಂಗಳೂರು, ಬೆಳಗಾವಿ ವಿವಿ ಪುನಶ್ಚೇತನ
- ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಳ
- ರಾಜ್ಯದಲ್ಲಿ ಒಟ್ಟು 16 ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾರಂಭ.

## ● ಸಮಾಜ ಕಲ್ಯಾಣ

- **"ದೀನ್‌ದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ"** ಹೊಸ ಯೋಜನೆಯಡಿ ನಾಲ್ಕು ಕಡೆಗಳಲ್ಲಿ 1000 ಸಾಮರ್ಥ್ಯದ ಬಹುಮಹಡಿ ವಿದ್ಯಾರ್ಥಿನಿಲಯ ಸಮುಚ್ಚಯಕ್ಕೆ ಕ್ರಮ.
- **"ಮನೆ ಬಾಗಿಲಿಗೆ ಪಿಂಚಣಿ"** ಯೋಜನೆಯಡಿ 72 ಗಂಟೆಯಲ್ಲಿ ಪಿಂಚಣಿ ಮಂಜೂರಾತಿ ಮಾಡುವ ವಿನೂತನ ಕಾರ್ಯಕ್ರಮ ಜಾರಿ.

- ಎಸ್‌ಸಿ/ಎಸ್‌ಟಿ ನಿಗಮಗಳಿಗೆ ಮೂಲ ಅನುದಾನ ರೂ.580.19 ಕೋಟಿ, ಹೆಚ್ಚುವರಿ ಅನುದಾನ.
- **ಕುಟೀರ ಜ್ಯೋತಿ** - ಉಚಿತ ವಿದ್ಯುತ್ ಸರಬರಾಜು 75 ಯೂನಿಟ್‌ಗಳಿಗೆ ಏರಿಕೆ ಮಾಡಲಾಗಿದೆ.
- **ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ**
- ಎಸ್ ಸಿ /ಎಸ್ ಟಿ ಸಮುದಾಯಗಳಿಗೆ 75 ಯೂನಿಟ್ **ಉಚಿತ ವಿದ್ಯುತ್**
- **ಸ್ವಯಂ ಉದ್ಯೋಗ ಯೋಜನೆ** -ಪರಿಶಿಷ್ಟ ಪಂಗಡದ ಯುವಕ / ಯುವತಿಯರಲ್ಲಿ ಸ್ವ-ಉದ್ಯೋಗವನ್ನು ಉತ್ತೇಜಿಸಲು ವಿದ್ಯುತ್ ಚಾಲಿತ ಅಥವಾ ಇತರ ದ್ವಿಚಕ್ರ ವಾಹನ ಖರೀದಿಗೆ ರೂ. 50,000 ಸಹಾಯಧನ.
- 50 ಕನಕದಾಸ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಕ್ಕೆ ಕ್ರಮ.
- ಹಿಂದುಳಿದ ವರ್ಗಗಳ ಸಮುದಾಯಗಳ 50 ವಿವಿಧ ಮಠಗಳಿಗೆ ಸಾಮಾಜಿಕ-ಶೈಕ್ಷಣಿಕ ಕಾರ್ಯಕ್ಕಾಗಿ 83 ಕೋಟಿ ರೂ.

## ● ಅಲ್ಪಸಂಖ್ಯಾತರು

- ಬೌದ್ಧ, ಜೈನ ಮತ್ತು ಸಿಖ್ ಸಮುದಾಯದ ಬಸದಿ ದುರಸ್ತಿ, ಸಮುದಾಯ ಭವನ, ವಿದ್ಯಾರ್ಥಿವೇತನಕ್ಕೆ 31 ಕೋಟಿ ರೂ.
- ಮದರಸಾಗಳ ಆಧುನೀಕರಣ, ಚರ್ಚ್‌ಗಳ ದುರಸ್ತಿ.
- **ವಿದ್ಯಾರ್ಥಿಗಳ ಮಾಸಿಕ ಭೋಜನಾ ವೆಚ್ಚ ಹೆಚ್ಚಳ.**

## ● ಮಗು, ಮಹಿಳೆ, ಕುಟುಂಬ, ವೃದ್ಧರು

- ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಕ್ಕೆ 42.5 ಕೋಟಿ ರೂ.
- 1,000 ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ 60 ಕೋಟಿ ರೂ.
- **ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ**
- ದೃಷ್ಟಿದೋಷದ ನಾಗರಿಕರಿಗೆ **ಸುಶ್ರಾವ್ಯ ಡಿಜಿಟಲ್ ಪುಸ್ತಕ** ಬ್ಯಾಂಕ್‌ಗೆ ಕ್ರಮ.
- ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದಲ್ಲಿ ಜನಿಸಿದ

ಹೆಣ್ಣುಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್ ವಿತರಣೆ.

- **'ಸ್ತ್ರೀ ಸಾಮರ್ಥ್ಯ'** ಯೋಜನೆ-ಮಹಿಳೆಯರ ಸ್ವಯಂ ಉದ್ಯೋಗಕ್ಕಾಗಿ ಮಹಿಳಾ ಸ್ವಸಹಾಯ ಸಂಘಗಳಿಗೆ 1.5 ಲಕ್ಷ ರೂ.ಸುಲಭ ಸಾಲ ಯೋಜನೆ
- ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಕಡು ಬಡವರಿಗಾಗಿ ಮಾಸಿಕ 400 ರೂ ಪಿಂಚಣಿ ಅನುಷ್ಠಾನ. ಸಂಧ್ಯಾ ಸುರಕ್ಷಾ ಯೋಜನೆಯ ಪಿಂಚಣಿ 1,200 ರೂ.ಗಳಿಗೆ ಹೆಚ್ಚಳ ಹಾಗೂವಿಧವಾ ವೇತನ 800 ರೂಗೆ ಏರಿಕೆ, ದಿವ್ಯಾಂಗಿಗಳ ಮಾಸಿಕ ವೇತನ 800 ರೂ. ಗಳಿಗೆ ಹೆಚ್ಚಳ.
- ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮೈತ್ರಿ, ಮನಸ್ವಿನಿ, ವಿಕಲಚೇತನರ ಮಾಸಾಶನ ಹಾಗೂ ಆಸಿಡ್ ದಾಳಿ ಸಂತ್ರಸ್ತರ ಯೋಜನೆಗಳ ಪಿಂಚಣಿ ಮೊತ್ತ ಹೆಚ್ಚಳ.

## ● ಯುವ ಸಬಲೀಕರಣ, ಕ್ರೀಡೆ

- ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ-ಯುವಕರ ಸ್ವಯಂ ಉದ್ಯೋಗ ಮತ್ತು ಆರ್ಥಿಕ ಚಟುವಟಿಕೆ ಉತ್ತೇಜಿಸುವ ಯೋಜನೆ.
- **ನೂತನ ರಾಜ್ಯ ಯುವ ನೀತಿ ರಚನೆ.**
- ಗ್ರಾಮೀಣ - ದೇಸಿ ಕ್ರೀಡೆ ಪ್ರೋತ್ಸಾಹಕ್ಕೆ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಕ್ರೀಡಾ ಅಂಕಣ ಸ್ಥಾಪನೆಗೆ ಕ್ರಮ.
- ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಪುನರಾರಂಭ.
- **ಸಿದ್ದಿ ಕ್ರೀಡಾಳುಗಳಿಗೆ ವಸತಿ ಶಾಲೆಗಳಲ್ಲಿ ತರಬೇತಿ.**
- **ದೇಶದಲ್ಲೇ ಮೊದಲ ಬಾರಿ ಸೈಬರ್ ಸೇಫ್ ಕರ್ನಾಟಕ ಅಭಿಯಾನದ ಮೂಲಕ ಡಿಜಿಟಲ್ ಬದುಕಿನ ಸುರಕ್ಷತೆ ಬಗ್ಗೆ ಅಭಿಯಾನ.**

## ● ಕಾರ್ಮಿಕ, ಕೌಶಲ್ಯ

- ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಯೋಜನೆ ಜಾರಿ, 2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ

## ಅಭಿವೃದ್ಧಿ-ಜನ ಕಲ್ಯಾಣಕ್ಕಾಗಿ ಹಲವಾರು ವಿಶೇಷ ಯೋಜನೆಗಳ ಅನುಷ್ಠಾನ

- **ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ: 10 ಲಕ್ಷಕ್ಕೂ** ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ. ಈವರೆಗೆ **ರೂ.483.62 ಕೋಟಿ** ಮೊತ್ತದ ವಿದ್ಯಾರ್ಥಿವೇತನ ವಿತರಣೆ
- ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ **ಪಿಂಚಣಿ ಮೊತ್ತದಲ್ಲಿ ಹೆಚ್ಚಳ. 75 ಲಕ್ಷಕ್ಕೂ ಹೆಚ್ಚಿನ ಜನರಿಗೆ ಪ್ರಯೋಜನ**
- **ವಸತಿ ಯೋಜನೆ:** ಮೂರು ವರ್ಷಗಳಲ್ಲಿ ಸುಮಾರು **5 ಲಕ್ಷ ಮನೆಗಳ** ನಿರ್ಮಾಣ.
- **ಆರೋಗ್ಯ: ರೂ.1,000 ಕೋಟಿ** ವೆಚ್ಚದಲ್ಲಿ **ಸಮುದಾಯ ಆರೋಗ್ಯ ಕೇಂದ್ರಗಳಾಗಿ 100** ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ
- **ರಾಜ್ಯದ ವಿವಿಧೆಡೆ 438 'ನಮ್ಮ ಕ್ಲಿನಿಕ್'ಗಳ ಆರಂಭ**
- **ಯಶಸ್ವಿನಿ ಯೋಜನೆಯ** ಪುನರ್ ಪ್ರಾರಂಭ
- **ಸ್ತ್ರೀ ಸಾಮರ್ಥ್ಯ** ಯೋಜನೆಯಡಿ **33,333 ಮಹಿಳಾ ಸ್ವಸಹಾಯ ಗುಂಪುಗಳಿಗೆ ತಲಾ ರೂ.1.5 ಲಕ್ಷ ಮೂಲಧನ.** ಇದರಿಂದ **3.9 ಲಕ್ಷ ಮಹಿಳೆಯರಿಗೆ** ಸಹಾಯವಾಗಲಿದೆ.
- ಕೊಳಚೆ ಪ್ರದೇಶಗಳ **3.36 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲು ಐತಿಹಾಸಿಕ ನಿರ್ಧಾರ. **1.14 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲಾಗಿದೆ.
- ವಿದ್ಯುನ್ಮಾನ ಆಡಳಿತ ಉಪಕ್ರಮಗಳಾದ **ಗ್ರಾಮ ಒನ್, ಜನಸೇವಕ್, ಸಾರಿಗೆ ಇಲಾಖೆಯಲ್ಲಿ ಆನ್‌ಲೈನ್ ಸೇವೆ, ಇತ್ಯಾದಿ ಸೇವೆಗಳ ಆರಂಭ.**
- ಇಡೀ ದೇಶದಲ್ಲಿಯೇ **ರಾಷ್ಟ್ರೀಯ ಶಿಕ್ಷಣ ನೀತಿ 2020** ಅನ್ನು ಅನುಷ್ಠಾನ ಮಾಡಿದ ಮೊದಲ ರಾಜ್ಯ ಕರ್ನಾಟಕ.
- **15,000 ಶಾಲಾ ಶಿಕ್ಷಕರ** ನೇಮಕಾತಿ, **8,101 ಶಾಲಾ ಕೊಠಡಿಗಳ** ನಿರ್ಮಾಣ, ಎಲ್ಲಾ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ
- ನಗರ ಹಾಗೂ ಗ್ರಾಮೀಣ ಮಟ್ಟದಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವ ಉದ್ದೇಶದಿಂದ **75ನೇ ಸ್ವಾತಂತ್ರ್ಯ ದಿನಾಚರಣೆಯ ಸ್ಮರಣೆಯಾಗಿ ಅಮೃತ್ ಯೋಜನೆಗಳಿಗೆ ಚಾಲನೆ.**

  ದುರ್ಬಲ ವರ್ಗಗಳ ಜನರನ್ನು ಮೇಲೆತ್ತುವುದು, ಸ್ವಸಹಾಯ ಗುಂಪುಗಳಿಗೆ ಮೂಲಧನ ನೀಡುವುದು, **ಎಸ್.ಸಿ./ಎಸ್.ಟಿ, ಇತರೆ** ಹಿಂದುಳಿದ ಯುವಕರ ಹಾಗೂ **ಮಹಿಳಾ ಉದ್ಯಮಿಗಳ ನವೋದ್ಯಮಗಳಿಗೆ ಪ್ರೋತ್ಸಾಹ** ನೀಡುವುದು ಸಹ ಈ ಯೋಜನೆಗಳ ಉದ್ದೇಶ
- ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಗಳ ಇಲಾಖೆಗಳಡಿ ಬರುವ **19 ವಿವಿಧ ನಿಗಮಗಳಿಗೆ ರೂ.857.75 ಕೋಟಿ ಹೆಚ್ಚುವರಿ** ಅನುದಾನ.
- ಗ್ರಾಮೀಣ ಪ್ರದೇಶಗಳಲ್ಲಿ ಕಿರು ಉದ್ಯಮಗಳಿಗೆ ಬೆಂಬಲ ನೀಡಲು **ಸ್ವಾಮಿ ವಿವೇಕಾನಂದ ಯುವಶಕ್ತಿ ಸಂಘ** ಯೋಜನೆ. **5 ಲಕ್ಷ** ಯುವಕರಿಗೆ ಪ್ರಯೋಜನದ ನಿರೀಕ್ಷೆ.
- **ಪರಿಶಿಷ್ಟ ಜಾತಿ/ವರ್ಗಗಳಿಗೆ ಮೀಸಲಾತಿಯನ್ನು ಕ್ರಮವಾಗಿ ಶೇ.15 ರಿಂದ ಶೇ.17ರವರೆಗೆ ಹಾಗೂ ಶೇ.3 ರಿಂದ ಶೇ.7ರವರೆಗೆ ಹೆಚ್ಚಿಸಲಾಗಿದೆ.**
- **ದಾಖಲೆ ರಹಿತ 1,475 ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ. ದಾಖಲೆಯ 52,000 ಜನರಿಗೆ ಹಕ್ಕುಪತ್ರ ವಿತರಣೆ**

- **ಟ್ಯಾಕ್ಸಿ ಚಾಲಕರ ಮಕ್ಕಳಿಗೆ ವಿದ್ಯಾನಿಧಿ**
- **ಮೀನುಗಾರರ ಮಕ್ಕಳಿಗೆ ವಿದ್ಯಾನಿಧಿ**
- ಮೂರು ಕಡೆಗಳಲ್ಲಿ ಜಿಟಿಟಿಸಿ ಕೇಂದ್ರಗಳ ಉದ್ಘಾಟನೆ.
- ಸ್ವಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳ ಆನ್‌ಲೈನ್ ಮಾರಾಟಕ್ಕೆ ಡಿಜಿಟಲ್ ವೇದಿಕೆಗಳಲ್ಲಿ ಅವಕಾಶಕ್ಕೆ ನೆರವು.

## ● ಕೈಗಾರಿಕೆ ಮತ್ತು ವಾಣಿಜ್ಯ

- ಪ್ರತಿ ವರ್ಷ ಸರಾಸರಿ 55675 ಕೋಟಿ ರೂ. ವಿದೇಶಿ ನೇರ ಬಂಡವಾಳ ಸಂಗ್ರಹ
- 12.98 ಲಕ್ಷ ಕೋಟಿ ರೂ.ಕೈಗಾರಿಕಾ ಉತ್ಪನ್ನ
- 18,367 ಕೋಟಿ ರೂ. ವೆಚ್ಚದಲ್ಲಿ 16,169 ಕಿ.ಮೀ ರಸ್ತೆ, ಹೆದ್ದಾರಿ ಅಭಿವೃದ್ಧಿ
- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ 33,209 ಫಲಾನುಭವಿಗಳಿಗೆ ವಿವಿಧ ಆರ್ಥಿಕ ಸೌಲಭ್ಯ
- ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ರಾಜ್ಯಕ್ಕೆ ದೇಶದಲ್ಲಿಯೇ 5ನೇ ಸ್ಥಾನ.
- **ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರ ಕಲ್ಯಾಣ ಯೋಜನೆ**

## ● ಧಾರ್ಮಿಕ - ಸಾಮಾಜಿಕ

- ದೇಗುಲಗಳ ಆಡಳಿತ ವ್ಯವಸ್ಥೆ ಸುಧಾರಿಸಲು ಇಂಟಿಗ್ರೇಟೆಡ್ ಟೆಂಪಲ್ ಮ್ಯಾನೇಜ್‌ಮೆಂಟ್ ಸಿಸ್ಟಂ ತಂತ್ರಾಂಶದ ಅನುಷ್ಠಾನ
- ಹಲವು ಮಠಗಳಿಗೆ ನೆರವು.
- **ಭಾರತ್ ಗೌರವ್ ಯೋಜನೆ**ಯಡಿಯಲ್ಲಿ ಯಾತ್ರಾ ಸ್ಥಳಗಳಿಗೆ ರೈಲು ಪ್ರವಾಸ ಅನುಮೋದನೆ.
- 'ಎ' ದರ್ಜೆ ದೇವಾಲಯಗಳ ಸಮಗ್ರ ಅಭಿವೃದ್ಧಿಗೆ ದೈವಸಂಕಲ್ಪ ಯೋಜನೆ ಜಾರಿ.
- **'ಸಪ್ತಪದಿ ಸಾಮೂಹಿಕ ವಿವಾಹ'** ಕಾರ್ಯಕ್ರಮದ ಮೂಲಕ
- ರಾಜ್ಯದಿಂದ ಕಾಶಿ ಯಾತ್ರೆಗೆ ತೆರಳುವವರಿಗೆ ತಲಾ 5 ಸಾವಿರ ರೂಪಾಯಿ ಸಹಾಯಧನ

## ● ಬೆಂಗಳೂರು ಅಭಿವೃದ್ಧಿ

- 40 ಕಿಮೀ ಉದ್ದದ ರಾಜಕಾಲುವೆ ಮತ್ತು ಸೇತುವೆಗಳ ನಿರ್ಮಾಣ.
- **ಬೆಂಗಳೂರು ಮೆಟ್ರೋ ಯೋಜನೆಯಲ್ಲಿ ನಿರಂತರ ಪ್ರಗತಿ.**
- ಹಲವೆಡೆ ಹೊಸ ಗ್ರೇಡ್ ಸಪರೇಟರ್‌ಗಳು, ಅಂಡರ್‌ಪಾಸ್ ನಿರ್ಮಾಣ. ಜಂಕ್ಷನ್‌ಗಳ ಅಭಿವೃದ್ಧಿ. ವೈಟ್ ಟಾಪಿಂಗ್ ಯೋಜನೆಗಳಿಗೆ ವೇಗ.
- ವಿವಿಧ ನಿವೇಶನಗಳ ಹಂಚಿಕೆಗೆ ಕ್ರಮ.
- ಕಾವೇರಿ 5ನೆ ಹಂತದ ನೀರು ಸರಬರಾಜು ಯೋಜನೆ ಪ್ರಗತಿ ಸಾಧನೆ.
- 2026ರ ಹೊತ್ತಿಗೆ 57 ರೈಲ್ವೆ ನಿಲ್ದಾಣಗಳ 148 ಕಿಮೀ ಉದ್ದದ **ಸಬ್‌ಅರ್ಬನ್ ರೈಲು** ಜಾಲ ನಿರ್ಮಾಣ ಆರಂಭ.

## ● ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಇ-ಆಡಳಿತ

- **ಗ್ರಾಮ ಒನ್ ಯೋಜನೆ:** ಒಂದೇ ಸೂರಿನಡಿ ಎಲ್ಲಾ ಇಲಾಖೆಗಳ ನಾಗರಿಕ ಸೇವೆಗಳನ್ನು ಗ್ರಾಮೀಣ ನಾಗರಿಕರಿಗೆ ಅವರ ಸ್ವಂತ ಗ್ರಾಮದಲ್ಲಿ ತಲುಪಿಸುವ 'ಗ್ರಾಮ ಒನ್' ಯೋಜನೆ ಜಾರಿ. ನಾಗರಿಕ ಸೇವೆಗಳ ಜೊತೆಗೆ ಮೈಕ್ರೋ ಬ್ಯಾಂಕಿಂಗ್ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಅವಕಾಶ.
- **ಜನಸೇವಕ ಯೋಜನೆ:** ದೂರವಾಣಿ ಕರೆ ಮೂಲಕ ಜನರ ಮನೆ ಬಾಗಿಲಿಗೇ ನಾಗರಿಕ ಸೇವೆಗಳನ್ನು ತಲುಪಿಸುವ ಜನಸೇವಕ ಯೋಜನೆ ಬೆಂಗಳೂರಿನ 198 ವಾರ್ಡ್‌ಗಳಲ್ಲಿ ಜಾರಿ.
- **ಸಾರ್ವಜನಿಕ ದೂರು ದುಮ್ಮಾನಗಳ ನಿರ್ವಹಣೆಗೆ** ಇಪಿಜಿಆರ್‌ಎಸ್ ಪೋರ್ಟಲ್ ಮೂಲಕ ಸಾವಿರಕ್ಕೂ ಹೆಚ್ಚು ಬಗೆಯ ದೂರುಗಳ ನಿರ್ವಹಣೆಗೆ ಚಾಲನೆ
- **ಸೇವಾಸಿಂಧು ಮತ್ತು ಸಕಾಲ** ಯೋಜನೆಗಳ ಶಕ್ತಿವರ್ಧನೆ.
- ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕಾಗಿ **ಹಲವು ತಂತ್ರಾಂಶಗಳ ಕನ್ನಡೀಕರಣ.**
- ಕನ್ನಡ ಮಾಹಿತಿ ತಂತ್ರಜ್ಞಾನಕ್ಕಾಗಿಯೇ **ಇ-ಕನ್ನಡ ಪೋರ್ಟಲ್** ಆರಂಭ; ರಾಜ್ಯದ ಅತಿದೊಡ್ಡ ಪದಕೋಶ ಪೋರ್ಟಲ್ ಸೇವೆ. ಹಲವು ತಂತ್ರಾಂಶಗಳ ತಯಾರಿ.
- ಸಾರ್ವಜನಿಕರು ಅರ್ಜಿ ಹಾಕದೆಯೇ ಮಾಹಿತಿ ಪಡೆಯಲು **ಮಾಹಿತಿ ಕಣಜ ಪೋರ್ಟಲ್** ಆರಂಭ.
- ಇಡೀ ಕುಟುಂಬಕ್ಕೆ ನಾಗರಿಕ ಸೇವೆಗಳನ್ನು ಒದಗಿಸಲು **ಕುಟುಂಬ ಪೋರ್ಟಲ್ ಆರಂಭ.** ಇದು ಸಾಮಾಜಿಕ ನೋಂದಾವಣೆ, ಸಮಗ್ರ ಫಲಾನುಭವಿ ನಿರ್ವಹಣಾ ವ್ಯವಸ್ಥೆಗಳು, ಫಲಾನುಭವಿಗಳ ನೋಂದಣಿ, ಪಾವತಿ ವೇದಿಕೆ ಮತ್ತು ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಒಳಗೊಂಡಿರುವ ಸಮಗ್ರ ಸಾಮಾಜಿಕ ಮಾಹಿತಿ ವ್ಯವಸ್ಥೆ (SIIS).
- ಸಿ ಮತ್ತು ಡಿ ದರ್ಜೆ ನೌಕರರ ನೇಮಕದಲ್ಲಿ ಸಂದರ್ಶನ ರದ್ದು.

## ● ಕಲೆ, ಸಂಸ್ಕೃತಿ

- **ಮೆಗಾ ಫಿಲಂಸಿಟಿ** ನಿರ್ಮಾಣಕ್ಕೆ 500 ಕೋಟಿ ಬಜೆಟ್‌ನಲ್ಲಿ ಮೀಸಲು.
- 2021-22ನೇ ಹಣಕಾಸು ವರ್ಷದಲ್ಲಿ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಆಕರ್ಷಿಸಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕಕ್ಕೆ ಮೊದಲ ಸ್ಥಾನ.
- ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ರೂ.6,000 ಕೋಟಿ ರೂ.

## ಆಹಾರ ಮತ್ತು ನಾಗರಿಕ ಸರಬರಾಜು

- ಆದ್ಯತಾ ಪಡಿತರ ಚೀಟಿದಾರರಿಗೆ ಪ್ರತಿ ಫಲಾನುಭವಿಗೆ 5 ಕೆ.ಜಿ. ಅಕ್ಕಿ , ಜೊತೆಗೆ 1 ಕೆ.ಜಿ. ರಾಗಿ/ಜೋಳ ವಿತರಣೆ

## ಕನ್ನಡ ಮತ್ತು ಸಂಸ್ಕೃತಿ, ಪರಂಪರೆ

- **2021ರಲ್ಲಿ ಲಕ್ಷಕಂಠ ಗಾಯನದ ಅದ್ವಿತೀಯ ದಾಖಲೆ**
- **ಅಮೃತ ಮಹೋತ್ಸವದ ಅಂಗವಾಗಿ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮ.**
- ಮೊದಲ ಸಲ ರಾಜ್ಯ ಸರ್ಕಾರದಿಂದ ಸಾವಿತ್ರಿ ಬಾ ಪುಲೆ ಜಯಂತಿ ಆಚರಣೆ
- ಪ್ರತಿವರ್ಷ ಅಮರಶಿಲ್ಪಿ ಜಕಣಾಚಾರಿ ಜಯಂತಿ.
- ಕಲಾವಿದರಿಗೆ ಹಲವು ಬಗೆಯ ನೆರವು.
- ಹೆಸರಾಂತ ಸಾಹಿತಿಗಳ ಅಮೂಲ್ಯ ಕೃತಿಗಳ ಪ್ರಕಟಣೆಗೆ ಕ್ರಮ.
- 75 ಸ್ಥಳಗಳಲ್ಲಿ ಶಿಲಾಫಲಕಗಳ ಸ್ಥಾಪನೆ.
- **ರಾಜ್ಯದ 844 ಸ್ಮಾರಕಗಳ 3ಡಿ ಮ್ಯಾಪಿಂಗ್ ದೇಶದಲ್ಲೇ ಪ್ರಥಮ.**

## ಅರಣ್ಯ, ಜೀವಿಪರಿಸ್ಥಿತಿ, ಪರಿಸರ

- ಮಾನವ=ಪ್ರಾಣಿ ಸಂಘರ್ಷದ ಪರಿಹಾರ, ಮಾಸಾಶನಕ್ಕೆ ಇ - ಪರಿಹಾರ ತಂತ್ರಾಂಶದಿಂದ ವಿಳಂಬರಹಿತ ಸೇವೆ.
- **40 ಸಾವಿರ ಹೆಕ್ಟೇರ್ ನೆಡುತೋಪು ನಿರ್ಮಾಣ.**
- ಹಲವೆಡೆ ಟ್ರೀಪಾರ್ಕ್‌ಗಳ ನಿರ್ಮಾಣ.
- ಬ್ಲೂ ಪ್ಲಾಸ್ಟಿಕ್ - ಮಾಲಿನ್ಯರಹಿತ ಕರಾವಳಿ ಸಮಗ್ರ ವರದಿಗೆ ಸಮಿತಿ ರಚನೆ.

## ಇಂಧನ

- **2021-22 ರಲ್ಲಿ 32459 ಎಂಯುಗಳ ವಿದ್ಯುತ್ ಉತ್ಪಾದನೆಯ ಸಾರ್ವಕಾಲಿಕ ದಾಖಲೆ.**
- ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ 7 ಗಂಟೆ 3 ಫೇಸ್ ವಿದ್ಯುತ್ ಒದಗಿಸಲು ಉಪಕೇಂದ್ರಗಳ ಉನ್ನತೀಕರಣ.
- ವಿದ್ಯುತ್ ಸರಬರಾಜು ಕಂಪೆನಿಗಳಿಂದ **ತ್ವರಿತ ಸೇವೆಗಳು**.
- ಬಡತನದ ರೇಖೆಗಿಂತ ಕೆಳಗಿರುವ ಎಲ್ಲ ಎಸ್‌ಸಿ ಎಸ್‌ಟಿ ಕುಟುಂಬಗಳಿಗೆ ಮಾಸಿಕ 75 ಯುನಿಟ್ ಉಚಿತ ವಿದ್ಯುತ್.
- ಹೆಚ್ಚುವರಿ ವಿದ್ಯುತ್ ಮಾರಿ 3751 ಕೋಟಿ ರೂ. ಆದಾಯ.
- 1152 ಅಂಗನವಾಡಿಗಳಲ್ಲಿ ಸೌರ ಆಧಾರಿತ ದೀಪ - ಫ್ಯಾನ್‌ಗಳ ಅಳವಡಿಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)

### ನವ ನಗರೋತ್ಥಾನ ಯೋಜನೆ

- 2019–20ರಲ್ಲಿ ಬೆಂಗಳೂರಿನ ಅಭಿವೃದ್ಧಿಗಾಗಿ **ರೂ.8,343 ಕೋಟಿ** ಮೊತ್ತದ **'ನವ ನಗರೋತ್ಥಾನ'** ಯೋಜನೆಗೆ ಅನುಮೋದನೆ. ರಸ್ತೆಗಳ ಅಭಿವೃದ್ಧಿ, ಆಸ್ಪತ್ರೆ, ಶಾಲಾ ಕಾಲೇಜುಗಳು ಹಾಗೂ ಆಟದ ಮೈದಾನದ ಕಾಮಗಾರಿಗಳಿಗೆ ಆದ್ಯತೆ.

- **ಬೆಂಗಳೂರು ಮೂಲ ಸೌಕರ್ಯ ಅಭಿವೃದ್ಧಿಗೆ "ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ರೂ.6,000 ಕೋಟಿ**

### ಕೆರೆಗಳ ಅಭಿವೃದ್ಧಿ

- **ನವನಗರೋತ್ಥಾನ ಯೋಜನೆಯಡಿಯಲ್ಲಿ ರೂ.317.25 ಕೋಟಿ** ವೆಚ್ಚದಲ್ಲಿ **47 ಕೆರೆಗಳ** ಅಭಿವೃದ್ಧಿ ಮಾಡಲಾಗಿದೆ.
- **ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ** ಸರ್ಕಾರ **ರೂ.200 ಕೋಟಿ** ನೀಡಿದ್ದು, **17 ಕೆರೆಗಳನ್ನು** ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ.

- ಬಿಬಿಎಂಪಿಗೆ ಹೊಸದಾಗಿ ಸೇರಿಸಲಾದ 110 ಹಳ್ಳಿಗಳಲ್ಲಿ ನೀರಿನ ಸೌಲಭ್ಯ ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ ಕೊಳವೆ ಭಾಗಗಳನ್ನು ಪುನರ್ ನಿರ್ಮಾಣ ಮಾಡಲು **ರೂ.1,000 ಕೋಟಿ.**

- **ಮಹದೇವಪುರ ವಲಯ ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ** 2022ರ ಸೆಪ್ಟೆಂಬರ್‌ನಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಈ ಭಾಗದಲ್ಲಿ 52 ಕಿ.ಮೀ. ಉದ್ದದ ಮಳೆನೀರು ಚರಂಡಿಯನ್ನು ಅಭಿವೃದ್ಧಿಪಡಿಸಲು **ರೂ.313.15 ಕೋಟಿ** ವಿಶೇಷ ಅನುದಾನ.

- ಪ್ರವಾಹ ತಡೆಗಟ್ಟಲು, 171.60 ಕಿ.ಮೀ. ಉದ್ದದ ರಾಜಕಾಲುವೆ ಅಭಿವೃದ್ಧಿ ಹಾಗೂ ತಡೆಗೋಡೆ ನಿರ್ಮಾಣಕ್ಕೆ **ರೂ.1,813 ಕೋಟಿ** ಬಿಡುಗಡೆ ಮಾಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

- **ಆರೋಗ್ಯ ಮೂಲಭೂತ ವ್ಯವಸ್ಥೆಗೆ ರೂ.123 ಕೋಟಿ** ಹಾಗೂ 42 ಬಿಬಿಎಂಪಿ ಶಾಲೆಗಳ ನಿರ್ಮಾಣ ಮತ್ತು ಉನ್ನತೀಕರಣಕ್ಕೆ **ರೂ.180 ಕೋಟಿ**

### ಬೆಂಗಳೂರಿಗೆ 243 ನಮ್ಮ ಕ್ಲಿನಿಕ್‌ಗಳು

- 106 ಕ್ಲಿನಿಕ್‌ಗಳ ಕಾಮಗಾರಿಗಳು ಪೂರ್ಣ. ಪ್ರಗತಿಯಲ್ಲಿ 137 ಕ್ಲಿನಿಕ್‌ಗಳ ಕಾಮಗಾರಿಗಳು.

### 'ಫಿಕ್ಸ್ ಮೈ ಸ್ಟ್ರೀಟ್' ತಂತ್ರಾಂಶ ಅಳವಡಿಕೆ

**ಪಾರದರ್ಶಕತೆ ಹಾಗೂ ರಸ್ತೆಗುಂಡಿ ಮುಚ್ಚುವ ಖರ್ಚಿನಲ್ಲಿ ಗಣನೀಯ ಉಳಿತಾಯ**

- ಈ ಹಿಂದೆ ರಸ್ತೆಗುಂಡಿಗಳನ್ನು ಮುಚ್ಚಲು, ವಾರ್ಡ್ ಒಂದಕ್ಕೆ ತಲಾ ರೂ.20 ಲಕ್ಷದಂತೆ ಒಟ್ಟಾರೆಯಾಗಿ ಸುಮಾರು ರೂ. 39.60 ಕೋಟಿ ವ್ಯಯಿಸಲಾಗುತಿತ್ತು. **2022–23ನೇ ಸಾಲಿನಿಂದ 'ಫಿಕ್ಸ್ ಮೈ ಸ್ಟ್ರೀಟ್'** ತಂತ್ರಾಂಶವನ್ನು ಪ್ರಸ್ತುತ ಸರ್ಕಾರ ಅಳವಡಿಸಿಕೊಂಡಿದ್ದು, 2022–23ನೇ ಸಾಲಿನಲ್ಲಿ ಭಾರಿ ಮಳೆ ಅನುಭವಿಸಿದರೂ ಸಹ ಡಿಸೆಂಬರ್ 2022ರ ಅಂತ್ಯಕ್ಕೆ ಕೇವಲ **ರೂ.12 ಕೋಟಿ** ಮಾತ್ರ ವೆಚ್ಚ ಮಾಡಲಾಗಿದೆ. ಪಾರದರ್ಶಕವಾಗಿ ರಸ್ತೆಗುಂಡಿಗಳನ್ನು ಗುರುತಿಸುವುದು ಮತ್ತು ತ್ವರಿತವಾಗಿ ದುರಸ್ತಿ ಪಡಿಸಲು ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.

## ● ಮೂಲಸೌಲಭ್ಯ

- **ಶಿವಮೊಗ್ಗ ವಿಮಾನ ನಿಲ್ದಾಣ ಸೇವೆಗೆ ಸಜ್ಜು;** ವಿವಿಧೆಡೆ ವಿಮಾನ ನಿಲ್ದಾಣಗಳ ಕಾರ್ಯ ಪ್ರಗತಿ. ಮೂರು ಹೆಲಿಪೋರ್ಟ್ ಅಭಿವೃದ್ಧಿಗೆ ವರದಿಗೆ ಕ್ರಮ.
- ಧಾರವಾಡ - ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ ಜಾರಿ.
- ಬಂದರುಗಳ ಅಭಿವೃದ್ಧಿ. ಸಾಗರಮಾಲಾ ಯೋಜನೆಗಾಗಿ ವಿಸ್ತೃತ ಯೋಜನಾ ವರದಿ ಸಲ್ಲಿಕೆ.

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

- **ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತ:** ಈ ಯೋಜನೆಗೆ ಜೈಕಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ **ರೂ.5,550 ಕೋಟಿ** ಮೊತ್ತಕ್ಕೆ ಅನುಮೋದನೆ
- **110 ಹಳ್ಳಿಗಳ** ವ್ಯಾಪ್ತಿಯಲ್ಲಿ 124 ಎಂ.ಎಲ್.ಡಿ ಸಾಮರ್ಥ್ಯದ ಒಟ್ಟು 14 ಎಸ್.ಟಿ.ಪಿ ಗಳ ಕಾಮಗಾರಿ ಪ್ರಗತಿಯಲ್ಲಿ
- ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ **110 ಹಳ್ಳಿಗಳಿಗೆ ರೂ.1,500 ಕೋಟಿ** ವೆಚ್ಚದಲ್ಲಿ ಕುಡಿಯುವ ನೀರು ಯೋಜನೆ ಮತ್ತು ಲೆಕ್ಕಕ್ಕೆ ಸಿಗದ ನೀರಿನ ನಿಯಂತ್ರಣ ಯೋಜನಾ ಕಾಮಗಾರಿ ಪೂರ್ಣ
- **ರೂ.1000 ಕೋಟಿ ವೆಚ್ಚದ ಒಳಚರಂಡಿ ಕಲ್ಪಿಸುವ ಯೋಜನೆಯ ಶೇ.98 ರಷ್ಟು ಕಾಮಗಾರಿಗಳು ಪೂರ್ಣ**
- ಕೊಳಚೆ ಪ್ರದೇಶದಲ್ಲಿ ವಾಸಿಸುವ **1.85 ಲಕ್ಷ ಕುಟುಂಬಗಳಿಗೆ** ಪ್ರತಿ ಮಾಹೆ **10000 ಲೀ. ಉಚಿತ ಕುಡಿಯುವ ನೀರು** ನೀಡಲಾಗುತ್ತಿದ್ದು, ಈ ಪೈಕಿ ಶೇ.90 ರಷ್ಟು ಕುಟುಂಬಗಳು ಪ.ಜಾತಿ ಮತ್ತು ಪ.ಪಂಗಡದವರಾಗಿರುತ್ತಾರೆ.

## ● ಕೈಗಾರಿಕೆ, ವಾಣಿಜ್ಯ

- **ಒಂದು ಜಿಲ್ಲೆ ಒಂದು ಉತ್ಪನ್ನ ಉಪಕ್ರಮ**ದ ಅಡಿಯಲ್ಲಿ ಐಟಿ ಪಾರ್ಕ್, ಏರೋಸ್ಪೇಸ್ ಪಾರ್ಕ್, ಹಾರ್ಡ್‌ವೇರ್ ಪಾರ್ಕ್, ಆಟಿಕೆ ಪಾರ್ಕ್, ಮೆಶಿನ್ ಟೂಲ್ ಪಾರ್ಕ್, ಫಾರ್ಮಾ ಪಾರ್ಕ್, ಜವಳಿ ಪಾರ್ಕ್, ಎ ಫ್‌ಎಂಸಿಜಿ ಪಾರ್ಕ್, ಸಿಡಿಜಿಎ ಪಾರ್ಕ್.
- ಪೀಣ್ಯದಲ್ಲಿ ಕೈಗಾರಿಕಾ ಟೌನ್‌ಶಿಪ್ ಸ್ಥಾಪನೆಗೆ ಕ್ರಮ. ಬೆಂಗಳೂರು - ಮುಂಬಯಿ ಮತ್ತು ಬೆಂಗಳೂರು - ಚೆನ್ನೈ ಕಡೆಗಳಲ್ಲಿ ಮೆಗಾ ಸಂಯೋಜಿತ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಗೆ ಅನುಮೋದನೆ.
- ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಗೆ ಮರುಜೀವ; ಕಬ್ಬು ಅರೆಯುವ ಕಾರ್ಯ ಆರಂಭ.
- **ಶಿಗ್ಗಾವಿಯಲ್ಲಿ ಜವಳಿ ಪಾರ್ಕ್** ಸ್ಥಾಪನೆಗೆ ಚಾಲನೆ.

## ● ಐಟಿ-ಬಿಟಿ, ವಿಜ್ಞಾನ - ತಂತ್ರಜ್ಞಾನ

- ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ರೂಪಿಸಲು ವರದಿ ಸಿದ್ಧ.
- ನವೋದ್ಯಮಗಳಿಗೆ 49 ಕೋಟಿ ರೂ. ಸಹಾಯಧನ.

## ● ಕಂದಾಯ

- **ಆನ್‌ಲೈನ್ ಮೂಲಕವೇ** ಪೌತಿ, ಖಾತೆ, ಪೋಡಿ, ಆಧಾರ ಮತ್ತು ಬಿಡುಗಡೆ, ಭೂಪರಿವರ್ತನೆ, ಭೂಸ್ವಾಧೀನದ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸುವ ಅತ್ಯಾಧುನಿಕ ವ್ಯವಸ್ಥೆ.
- ಅಟಲ್ ಜನಸ್ನೇಹಿ ಕೇಂದ್ರ ಯೋಜನೆ.
- ಮಾಸಾಶನ ಮಂಜೂರಿಗೆ ನವೋದಯ ಆಪ್.
- ಬಿಬಿಎಂಪಿ ಇ-ಸ್ವತ್ತು ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶ ಜೋಡಣೆ.
- **ಮನೆ ಬಾಗಿಲಿಗೇ ಪಿಂಚಣಿ ಯೋಜನೆ.**
- **ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಯೋಜನೆ.** ಕುಗ್ರಾಮಗಳಲ್ಲಿ ಕಂದಾಯ ಸಚಿವರಿಂದ ಗ್ರಾಮ ವಾಸ್ತವ್ಯದ ಮೂಲಕ ಆಡಳಿತ ಚುರುಕು.

# ಉತ್ತರ ಕರ್ನಾಟಕದ ಅಭಿವೃದ್ಧಿಗೆ ಆದ್ಯತೆ

## ನೀರಾವರಿ, ಕುಡಿಯುವ ನೀರೊದಗಿಸುವ ಯೋಜನೆ

- ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಅನುಷ್ಠಾನಕ್ಕೆ **ರೂ. 5,000 ಕೋಟಿ** ಅನುದಾನ
- ಕಳಸಾ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗಳಿಗೆ **ರೂ. 1,000 ಕೋಟಿ** ಅನುದಾನ ಮೀಸಲು
- ಬೀದರ್‌ನ ಔರಾದ್ ಹಾಗೂ ಭಾಲ್ಕಿ ತಾಲ್ಲೂಕಿನ ನೀರಾವರಿ ಯೋಜನೆಗಳಿಗೆ **ರೂ.1,110.70 ಕೋಟಿ** ಮಂಜೂರಾತಿ
- ಯಾದಗಿರಿಯಲ್ಲಿ **50 ಸಾವಿರ ಎಕರೆ** ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಅನುದಾನ
- ಬಾಗಲಕೋಟೆಯ ಬಾದಾಮಿ ಹಾಗೂ ಬೀಳಗಿ ತಾಲ್ಲೂಕುಗಳ **ಒಟ್ಟು 46950 ಎಕರೆ ಪ್ರದೇಶಕ್ಕೆ ನೀರೊದಗಿಸುವ ರೂ. 525 ಕೋಟಿ ಮೊತ್ತದ ಕೆರೂರು ಏತ ನೀರಾವರಿ ಯೋಜನೆಗೆ** ಆಡಳಿತಾತ್ಮಕ ಅನುಮೋದನೆ
- **ಹಾವೇರಿ ಜಿಲ್ಲೆಯಲ್ಲಿ ವಿವಿಧ ಕೆರೆ ತುಂಬುವ ಯೋಜನೆಗಳಿಗೆ ಒಟ್ಟು ರೂ.1,356.95 ಕೋಟಿ ಅನುದಾನ.**

## ಶಿಕ್ಷಣ

- ಯಾದಗಿರಿಯಲ್ಲಿ ವೈದ್ಯಕೀಯ ಕಾಲೇಜಿನ ಕನಸು ಈಗ ನನಸು. **150–ಸೀಟುಗಳ ಮೆಡಿಕಲ್ ಕಾಲೇಜಿಗೆ** ಮಂಜೂರಾತಿ
- **ಬಳ್ಳಾರಿಯ ಹಗರಿ** ಕೃಷಿ ವಿಜ್ಞಾನ ಕೇಂದ್ರದಲ್ಲಿ **ಕೃಷಿ ಮಹಾವಿದ್ಯಾಲಯ** ಸ್ಥಾಪನೆ ಈಗ ನನಸು
- ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳನ್ನು **ಸ್ಮಾರ್ಟ್ ಕ್ಲಾಸ್‌ರೂಂಗಳಾಗಿ** ಪರಿವರ್ತಿಸಲು **ರೂ.150 ಕೋಟಿ**

## ರೈಲು ಯೋಜನೆಗಳು

- **ರೂ. 927.40 ಕೋಟಿ** ವೆಚ್ಚದಲ್ಲಿ **ಧಾರವಾಡ–ಕಿತ್ತೂರು–ಬೆಳಗಾವಿ ನೂತನ ರೈಲು ಮಾರ್ಗ** ನಿರ್ಮಾಣ
- **ಗದಗ–ಯಲವಿಗಿ ರೈಲ್ವೆ ಯೋಜನೆಗೆ ರೂ.600 ಕೋಟಿ** ಮೀಸಲು

## ಕೈಗಾರಿಕೆ, ಉದ್ಯೋಗ ಸೃಷ್ಟಿ

- ಧಾರವಾಡದಲ್ಲಿ **ಎಫ್‌ಎಂಸಿಜಿ ಕ್ಲಸ್ಟರ್** ಸ್ಥಾಪನೆ. **183 ಎಕರೆ** ಜಮೀನು ಮೀಸಲು. 20 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆ.
- ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳದ ಗೊಂಬೆ, ನವಲಗುಂದದಲ್ಲಿ ಜಮಖಾನ, ಹಾಗೂ ಇಳಕಲ್ಲ, ಗುಳೇದಗುಡ್ಡ, ಬೆಳಗಾವಿ ಮತ್ತು ಶಹಪುರದಲ್ಲಿ ಸೀರೆ ಮೈಕ್ರೋ ಕ್ಲಸ್ಟರ್‌ಗಳ ಅಭಿವೃದ್ಧಿಗೆ ಕ್ರಮ
- ಕಲಬುರಗಿ ಜಿಲ್ಲೆಯಲ್ಲಿ **ಬೃಹತ್ ಜವಳಿ ಪಾರ್ಕ್** ನಿರ್ಮಿಸಲು ಕೇಂದ್ರದ ಒಪ್ಪಿಗೆ
- ಹಾವೇರಿ ಜಿಲ್ಲೆಯಲ್ಲಿ **ರೂ. 70 ಕೋಟಿ** ವೆಚ್ಚದಲ್ಲಿ ಮೆಗಾ ಡೈರಿ.
- **ಶಿಗ್ಗಾಂವಿಯಲ್ಲಿ ಜವಳಿ ಪಾರ್ಕ್** ಕಾಮಗಾರಿಗೆ ಚಾಲನೆ
- ಬಾಗಲಕೋಟೆಯ ಬಾದಾಮಿ ತಾಲ್ಲೂಕಿನಲ್ಲಿ **ಕೈಗಾರಿಕಾ ಪ್ರದೇಶ** ಸ್ಥಾಪಿಸಲು ಉದ್ದೇಶ

## ಆರೋಗ್ಯ

- ಉತ್ತರ ಕರ್ನಾಟಕ ಭಾಗದಲ್ಲಿ ಹೈಟೆಕ್ ಚಿಕಿತ್ಸಾ ಸೌಲಭ್ಯಕ್ಕಾಗಿ **ಹುಬ್ಬಳ್ಳಿಯಲ್ಲಿ** ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ ಕೇಂದ್ರದ ಸ್ಥಾಪನೆಗೆ **ರೂ.250 ಕೋಟಿ** ಯೋಜನೆ
- **ಬೆಳಗಾವಿಯಲ್ಲಿ ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ ರೂ. 50 ಕೋಟಿ.**
- **ಕಲಬುರಗಿಯಲ್ಲಿ ಪ್ರಾದೇಶಿಕ ಕ್ಯಾನ್ಸರ್ ಆಸ್ಪತ್ರೆ** ಸ್ಥಾಪನೆ.
- **ಬಳ್ಳಾರಿ ಜಿಲ್ಲೆಯ** 310 ಹಾಸಿಗೆಗಳ ಆಸ್ಪತ್ರೆಯನ್ನು **ರೂ.72.50 ಕೋಟಿ** ವೆಚ್ಚದಲ್ಲಿ 510 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಉನ್ನತೀಕರಿಸಲು ಕ್ರಮ

## ಇತರೆ ಅಭಿವೃದ್ಧಿ ಕಾಮಗಾರಿಗಳು

- ವಿಜಯನಗರ ಜಿಲ್ಲೆಯಲ್ಲಿ **ರೂ.464 ಕೋಟಿ** ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಆರಂಭಿಸಿ ಅಭಿವೃದ್ಧಿಗೆ ಚಾಲನೆ
- ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅನುದಾನ **ರೂ.1,500 ಕೋಟಿಗಳಿಂದ ರೂ.3,000 ಕೋಟಿಗೆ ಹೆಚ್ಚಳ**
- ವಿಜಯಪುರದಲ್ಲಿ ದ್ರಾಕ್ಷಿ ರೈತರಿಗೆ ನೆರವಾಗಲು **ರೂ.35 ಕೋಟಿ** ವೆಚ್ಚದಲ್ಲಿ **ಕೋಲ್ಡ್ ಸ್ಟೋರೇಜ್**
- ಕೊಪ್ಪಳ ಜಿಲ್ಲೆಯಲ್ಲಿ ಅಂಜನಾದ್ರಿ ಅಭಿವೃದ್ಧಿಗೆ **ರೂ.120 ಕೋಟಿ** ಅನುದಾನ ಒದಗಿಸಲು ಕ್ರಮ

## ವಿಮಾನ ನಿಲ್ದಾಣ, ಪ್ರವಾಸೋದ್ಯಮ

- ರಾಯಚೂರಿನಲ್ಲಿ ವಿಮಾನ ನಿಲ್ದಾಣಕ್ಕೆ **400 ಎಕರೆ** ಜಾಗ ಮೀಸಲು. ರೂ.182 ಕೋಟಿ ಅನುದಾನ
- ಕೊಪ್ಪಳ ಜಿಲ್ಲೆಯಲ್ಲಿ ವಿಮಾನ ನಿಲ್ದಾಣಕ್ಕೆ **ರೂ. 40 ಕೋಟಿ**
- ವಿಜಯಪುರದಲ್ಲಿ ವಿಮಾನ ನಿಲ್ದಾಣವನ್ನು ಏರ್‌ಬಸ್–320ರ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸಲು ಹೆಚ್ಚುವರಿ ಅನುದಾನ
- **ರೂ. 150 ಕೋಟಿ** ವೆಚ್ಚದಲ್ಲಿ ರಾಯಚೂರಿನಲ್ಲಿ ಗ್ರೀನ್–ಫೀಲ್ಡ್ ವಿಮಾನ ನಿಲ್ದಾಣ ನಿರ್ಮಾಣ
- ಪ್ರವಾಸೋದ್ಯಮ ಉತ್ತೇಜನಕ್ಕೆ **ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ** ಪ್ರವಾಸಿ ವೃತ್ತವನ್ನು ರೂಪಿಸಿ, ಸಮಗ್ರ ಅಭಿವೃದ್ಧಿಗೆ ಚಾಲನೆ

## 2023ರ ಕೇಂದ್ರ ಬಜೆಟ್: ಭದ್ರಾ ಮೇಲ್ದಂಡೆ ಯೋಜನೆಗೆ ಭಾರೀ ನೆರವು

**2023-24 ರ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ.ಗಳನ್ನು ಒದಗಿಸಿದ್ದು ಇದರಿಂದ ಕರ್ನಾಟಕದ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆ ಜಿಲ್ಲೆಗಳ ನೀರಾವರಿ ಪ್ರದೇಶಗಳಿಗೆ ಭಾರೀ ಅನುಕೂಲವಾಗಲಿದೆ.**

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

- ಶಿವರಾಮ ಕಾರಂತ ಬಡಾವಣೆಯಲ್ಲಿ **24,000** ನಿವೇಶನಗಳನ್ನು ರಚಿಸಿ ಅಭಿವೃದ್ಧಿಪಡಿಸಲು 9 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದು **ರೂ. 3,000 ಕೋಟಿ** ಮೊತ್ತದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.
- ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಹೆಚ್ಚುವರಿಯಾಗಿ **ರೂ. 785 ಕೋಟಿ** ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.
- ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ **ರೂ. 490 ಕೋಟಿ** ವೆಚ್ಚದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು BWSSB ಮುಖಾಂತರ ಕೈಗೊಳ್ಳಲಾಗಿದೆ.
- ಅರ್ಕಾವತಿ ಬಡಾವಣೆ ಸುತ್ತಮುತ್ತಲಿನ ಜಲಾವೃತ ಬಡಾವಣೆಗಳಲ್ಲಿ ಪರಿಹಾರ ಕಾರ್ಯಗಳನ್ನು **ರೂ. 18 ಕೋಟಿ** ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ.
- ಹಳೆಯ ಬಡಾವಣೆಗಳಾದ ವಿಶ್ವೇಶ್ವರಯ್ಯ ಮತ್ತು ಮುಂದುವರೆದ ವಿಶ್ವೇಶ್ವರಯ್ಯ ಬಡಾವಣೆಗಳಲ್ಲಿ **ರೂ.190 ಕೋಟಿ** ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- ಬನಶಂಕರಿ 6ನೇ ಹಂತ, ಅಂಜನಾಪುರ ಹಾಗೂ ಜೆ.ಪಿ.ನಗರ ಬಡಾವಣೆಗಳಲ್ಲಿ **ರೂ. 290 ಕೋಟಿ** ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- ಹೆಬ್ಬಾಳ ಮೇಲ್ಸೇತುವೆ ಕಾಮಗಾರಿಯನ್ನು **ರೂ.87 ಕೋಟಿ** ವೆಚ್ಚದಲ್ಲಿ ಮುಂದುವರೆಸಲಾಗುತ್ತಿದೆ.

# ಬಿಜೆಪಿ ಸರ್ಕಾರ: ಕರ್ನಾಟಕದ ಪ್ರಗತಿಯ ಹರಿಕಾರ

# ಕರ್ನಾಟಕ 2023-24 ರ ಬಜೆಟ್ ವಿಶೇಷಗಳು

## ● ಬೆಂಗಳೂರು ಅಭಿವೃದ್ಧಿಗೆ..

- ₹150 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಪ್ರಮುಖ **75 ಜಂಕ್ಷನ್‌ಗಳ ಅಭಿವೃದ್ಧಿ**, ಸಿಗ್ನಲ್‌ಗಳಿಗೆ ಕೃತಕ ಬುದ್ಧಿಮತ್ತೆ (Artificial Intelligence) ಅಳವಡಿಕೆ; **ತಡೆರಹಿತ ಸಿಗ್ನಲಿಂಗ್** ವ್ಯವಸ್ಥೆ ಅಳವಡಿಸಿಕೊಂಡು ಸಂಚಾರ ದಟ್ಟಣೆ ಕಡಿಮೆ.
- ಟಿನ್ ಫ್ಯಾಕ್ಟರಿಯಿಂದ ಮೇಡಹಳ್ಳಿವರೆಗೆ ₹350 ಕೋಟಿ ವೆಚ್ಚದಲ್ಲಿ 5 ಕಿ.ಮೀ. **ಎಲಿವೇಟೆಡ್ ರಸ್ತೆ ನಿರ್ಮಾಣ**
- ಸಬ್ ಅರ್ಬನ್ ರೈಲು ಜಾಲದೊಂದಿಗೆ ಸಮನ್ವಯ ಸಾಧಿಸಿ ಯಶವಂತಪುರ ರೈಲು ನಿಲ್ದಾಣದಿಂದ ಮತ್ತಿಕೆರೆ ಹಾಗೂ ಬಿ.ಇ.ಎಲ್ ರಸ್ತೆಯ ವರೆಗೆ ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಿಸಿ ನೇರ ಸಂಪರ್ಕ.
- ₹1,000 ಕೋಟಿ ವೆಚ್ಚದಲ್ಲಿ ಬೆಂಗಳೂರಿನ 120 ಕಿ.ಮೀ. **ಆರ್ಟೀರಿಯಲ್ ರಸ್ತೆಯ ವೈಟ್ ಟಾಪಿಂಗ್** ಹಾಗೂ ₹450 ಕೋಟಿ ವೆಚ್ಚದಲ್ಲಿ 300 ಕಿ.ಮೀ. ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ.
- ಬಿಬಿಎಂಪಿಗೆ ಸೇರ್ಪಡೆಯಾದ 110 **ಗ್ರಾಮಗಳಲ್ಲಿ ದುಸ್ಥಿತಿಯಲ್ಲಿರುವ ರಸ್ತೆಗಳ ಪುನರ್ ನಿರ್ಮಾಣ**ಕ್ಕಾಗಿ ₹300 ಕೋಟಿ.
- ಬೈಯಪ್ಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೋ ಟರ್ಮಿನಲ್ ಸುತ್ತಮುತ್ತಲಿನ ಸಂಪರ್ಕ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ₹300 ಕೋಟಿ.
- **ನಮ್ಮ ಕ್ಲಿನಿಕ್, ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್** ಅನುಮೋದನೆ. 50 ಹಾಸಿಗೆಗಳ ಡಯಾಲಿಸಿಸ್, 300 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. ಇವೆಲ್ಲವನ್ನೂ ಒಂದೇ ಆರೋಗ್ಯ ಆಡಳಿತ ವ್ಯವಸ್ಥೆಯಡಿ ತಂದು **'ಬೆಂಗಳೂರು ಆರೋಗ್ಯ ವ್ಯವಸ್ಥೆ'** ರಚನೆ.
- ಸಮಾಜದ ದುರ್ಬಲ ವರ್ಗದವರಲ್ಲಿ, ಅದರಲ್ಲೂ ಮಹಿಳೆಯರಲ್ಲಿ ವಿಶ್ವಾಸ ಮೂಡಿಸುವ **'ನಿರ್ಭಯ'** ಯೋಜನೆಯಡಿ ನಗರದಲ್ಲಿ ₹261 ಕೋಟಿ ವೆಚ್ಚದಲ್ಲಿ **'ಸುರಕ್ಷಿತ ನಗರ'** ಯೋಜನೆ.
- 1,640 ಸ್ಥಳಗಳಲ್ಲಿ 4,100 ಕ್ಯಾಮೆರಾ ಅಳವಡಿಸಲಾಗಿದ್ದು, ಇವುಗಳನ್ನು ಇಂಟಿಗ್ರೇಟೆಡ್ ಕಂಟ್ರೋಲ್ ಸೆಂಟರ್‌ಗೆ ಸಂಪರ್ಕಿಸಲಾಗುತ್ತದೆ. ಈ ಮೂಲಕ ಭದ್ರತಾ ಕ್ರಮಗಳ ಮೇಲೆ ನಿಗಾವಹಿಸಲಾಗುತ್ತದೆ.
- ನಗರದ ಮಾರುಕಟ್ಟೆ, ವಾಣಿಜ್ಯ ಮಳಿಗೆಗಳು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಹಿಳೆಯರ ಅನುಕೂಲಕ್ಕೆ **'ಶಿ' ಶೌಚಾಲಯ**ವನ್ನು ನಿರ್ಮಿಸಲಾಗುತ್ತದೆ. ಶೌಚಾಲಯ, ಹಾಲುಣಿಸುವ ಕೊಠಡಿ, ಮೊಬೈಲ್ ಚಾರ್ಜಿಂಗ್, ತುರ್ತು ಎಸ್‌ಒಎಸ್ ಸೌಲಭ್ಯಗಳಿಗೆ ₹50 ಕೋಟಿ ಮೀಸಲಿಡಲಾಗಿದೆ.
- ಬೆಂಗಳೂರಿನಲ್ಲಿ ಹೊಸದಾಗಿ ಒಂಬತ್ತು ಕಾನೂನು ಮತ್ತು ಸುವ್ಯವಸ್ಥೆ, ಐದು ಸಂಚಾರ, **ಆರು ಮಹಿಳಾ ಪೊಲೀಸ್ ಠಾಣೆ**ಗಳ ಸ್ಥಾಪನೆ.
- ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚುವರಿಯಾಗಿ 2,000 ಹುದ್ದೆಗಳ ಸೃಷ್ಟಿ.
- **ವಾಸನೆರಹಿತ ತ್ಯಾಜ್ಯ ಸಂಸ್ಕರಣಾ ಕೇಂದ್ರ:** ಬಿಬಿಎಂಪಿ ವ್ಯಾಪ್ತಿಯಲ್ಲಿ ಆಯಾ ವಾರ್ಡ್‌ಗಳಲ್ಲಿಯೇ ತ್ಯಾಜ್ಯ ಸಂಸ್ಕರಣೆ ಮಾಡಲು ಪ್ರತಿ ವಾರ್ಡ್‌ಗೆ ಒಂದರಂತೆ ಆಧುನಿಕ ತಂತ್ರಜ್ಞಾನದ ವಾಸನೆರಹಿತ ತ್ಯಾಜ್ಯ ಸಂಸ್ಕರಣಾ ಕೇಂದ್ರ ಸ್ಥಾಪನೆ. ಒಂದೇ ವಾಹನದಲ್ಲಿ ಹಸಿ ಕಸ ಹಾಗೂ ಒಣ ಕಸ ಸಂಗ್ರಹಿಸುವ ವಿನ್ಯಾಸದ ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳ ಕಾರ್ಯಾಚರಣೆ. ವಾಣಿಜ್ಯ ಮಳಿಗೆಗಳು, ಆಸ್ಪತ್ರೆಗಳು, ಹೋಟೆಲ್‌ಗಳು ಸೇರಿದಂತೆ ಬೃಹತ್ **ತ್ಯಾಜ್ಯ ಉತ್ಪಾದಕರಿಗೆ ತ್ಯಾಜ್ಯ ಸಂಸ್ಕರಣೆ ಕಡ್ಡಾಯ**.
- **ಪಾರಂಪರಿಕ, ಶೈಕ್ಷಣಿಕ ಜಿಲ್ಲೆ:** ಬೆಂಗಳೂರು ನಗರದ ಕೇಂದ್ರ ಭಾಗದ 5 ಕಿ.ಮೀ. ವ್ಯಾಪ್ತಿಯೊಳಗಿನ ಪಾರಂಪರಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರದೇಶವನ್ನು 'ಪಾರಂಪರಿಕ ಮತ್ತು ಶೈಕ್ಷಣಿಕ ಜಿಲ್ಲೆ' ಎಂದು ಘೋಷಣೆ; ಕಾರ್ಯಸಾಧ್ಯತೆ ಅಧ್ಯಯನ.
- ಬೆಂಗಳೂರು ನಗರ ನಿರ್ಮಾತೃ **ನಾಡಪ್ರಭು ಕೆಂಪೇಗೌಡರ** ಐತಿಹಾಸಿಕ ಕುರುಹುಗಳಿರುವ ತಾಣಗಳ **'ಪ್ರವಾಸಿ ಸರ್ಕಿಟ್'.**
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ₹30 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸ್ಟಾರ್ಟ್-ಅಪ್ ಪಾರ್ಕ್ ಸ್ಥಾಪನೆ.
- ಆಸ್ತಿ ಒತ್ತುವರಿ ತಡೆಗೆ ಜಿಪಿಎಸ್: ಬಿಬಿಎಂಪಿ ಆಸ್ತಿಗಳ ಒತ್ತುವರಿ ತಡೆ ಹಾಗೂ ಸುರಕ್ಷತೆಗಾಗಿ ಜಿಪಿಎಸ್ ತಂತ್ರಜ್ಞಾನದ ಮೂಲಕ ಕಣ್ಗಾವಲು.

## ● ಕರುನಾಡಿನ ಅಭಿವೃದ್ಧಿಗೆ..

- **'ಮುಖ್ಯಮಂತ್ರಿ ವಿದ್ಯಾ ಶಕ್ತಿ'** ಯೋಜನೆಯಡಿ ಪದವಿವರೆಗೂ ರಾಜ್ಯದ ಎಲ್ಲ ಸರ್ಕಾರಿ ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ.
- ಯುವಕರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು **'ಯುವಸ್ನೇಹಿ'** ಯೋಜನೆಯಡಿ ₹ 2 ಸಾವಿರ
- **'ಬದುಕುವ ದಾರಿ'** ಯೋಜನೆಯಡಿ ಯುವಜನರಿಗೆ 3 ತಿಂಗಳು ಐಟಿಐ ತರಬೇತಿ.
- ಶಾಲೆಗೆ ತೆರಳಲು ₹ 100 ಕೋಟಿ ರೂ. ವೆಚ್ಚದಲ್ಲಿ **'ಮಕ್ಕಳ ಬಸ್'** ಯೋಜನೆ.
- ರೈತರಿಗಾಗಿ **'ಭೂ ಸಿರಿ'** ಹೊಸ ಯೋಜನೆ; ಇದರಡಿಯಲ್ಲಿ ₹10 ಸಾವಿರ ಹೆಚ್ಚುವರಿ ಸಹಾಯಧನ.
- **'ರೈತ ಸಿರಿ'** ಯೋಜನೆ ಅಡಿ ಕಿರುಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹ 10 ಸಾವಿರ ಪ್ರೋತ್ಸಾಹ ಧನ.
- **'ವಿದ್ಯಾವಾಹಿನಿ'** ಯೋಜನೆಯಡಿ ವಿದ್ಯಾರ್ಥಿನಿಯರಿಗೆ ₹ 350 ಕೋಟಿ ವೆಚ್ಚದಲ್ಲಿ ಉಚಿತ ಬಸ್ ಪಾಸ್ ಸೌಲಭ್ಯ.
- **'ಗೃಹಿಣಿ ಶಕ್ತಿ'** ಯೋಜನೆ ಜಾರಿ ಮಾಡಿ, ₹ 46,278 ಕೋಟಿ ಅನುದಾನ.
- **'ನಮ್ಮ ನೆಲೆ'** ಯೋಜನೆಯಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ನಿವೇಶನ.
- **'ಸಹಸ್ರ ಸರೋವರ'** ಯೋಜನೆ ಅಡಿ ರಾಜ್ಯದ 1,000 ಸಣ್ಣ ಸರೋವರಗಳನ್ನು ಅಭಿವೃದ್ಧಿ.
- **'ಜಲನಿಧಿ'** ಯೋಜನೆಯಡಿ ರೈತರ ಜಮೀನುಗಳಲ್ಲಿ ಜಲ ಹೊಂಡ, ಗೋ ಶಾಲೆಗಳ ನಿರ್ಮಾಣಕ್ಕೆ 'ಪುಣ್ಯ ಕೋಟಿ ದತ್ತು ಯೋಜನೆ' ಹಣಕಾಸು ನೆರವು.

ARAVIND LIMBAVALI

# ಅರವಿಂದ ಲಿಂಬಾವಳಿ

## ಮಹದೇವಪುರ

# ಜನಹಿತ

ಅಭಿವೃದ್ಧಿ ಕಾರ್ಯಗಳ ರಿಪೋರ್ಟ್ ಕಾರ್ಡ್ 2018-23